19 July 2026 Sunday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಸಮಯಕ್ಕೆ ತಕ್ಕಂತೆ ನಾವು ನಮ್ಮ ನಿಲುವನ್ನು ಬದಲಾಯಿಸಿದರೆ ನಮ್ಮ ಜೀವನದ ಹಾದಿ ಸುಗಮಗೊಳ್ಳುವುದು!

-ಸ್ನೇಹಾ ಆನಂದ್

info.varthaman@gmail.com


ದಸರಾದಲ್ಲಿ ಕಂಬಳಕ್ಕೆ ವಿರೋಧ: ಮೈಸೂರಿನಲ್ಲಿ ಬೃಹತ್ ಪ್ರತಿಭಟನೆ — ಪುಟ ಸಂ. 2


ದಲಿತ ಮಹಿಳಾ ಅಧಿಕಾರಿಯನ್ನು ಟಾರ್ಗೆಟ್ ಮಾಡುವುದು ಸರಿಯಲ್ಲ — ಪುಟ ಸಂ. 3


ವಿದ್ಯಾರ್ಥಿ ಜೀವನದಲ್ಲಿ ಕಠಿಣ ಪರಿಶ್ರಮವಿದ್ದರೆ ಮಾತ್ರ ಯಶಸ್ಸು — ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 229 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

# ದೇವೇಗೌಡರ ಯಶಸ್ಸಿನ ಹಿಂದಿದ್ದ ಸ್ತ್ರೀಶಕ್ತಿ ಪತ್ನಿ ಚೆನ್ನಮ್ಮ......

**ಬೆಂಗಳೂರು:** ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರ ರಾಜಕೀಯ ಜೀವನದ ಬಗ್ಗೆ ಸಾಕಷ್ಟು ಚರ್ಚೆಗಳು ನಡೆದಿವೆ. ಆದರೆ ಅವರ ಯಶಸ್ಸಿನ ಹಿಂದೆ ಸದಾ ನಿಂತಿದ್ದ ವ್ಯಕ್ತಿತ್ವ ಎಂದರೆ ಪತ್ನಿ ಚೆನ್ನಮ್ಮ.

ರಾಜಕೀಯದಿಂದ ದೂರವೇ ಉಳಿದಿದ್ದರೂ ಕುಟುಂಬವನ್ನು ಒಗ್ಗೂಡಿಸಿ, ದೇವೇಗೌಡರ ರಾಜಕೀಯ ಪಯಣಕ್ಕೆ ಅಚಲ ಬೆಂಬಲವಾಗಿ ನಿಂತಿದ್ದ ಹೆಗ್ಗಳಿಕೆ ಚೆನ್ನಮ್ಮ ಅವರಿಗೆ ಸಲ್ಲುತ್ತದೆ.



ಚೆನ್ನಮ್ಮ ಅವರು ಗ್ರಾಮೀಣ ಸಂಸ್ಕೃತಿಯಲ್ಲಿ ಬೆಳೆದ ಸರಳ ಸ್ವಭಾವದ ಮಹಿಳೆ. ಐಷಾರಾಮಿ ಬದುಕಿಗಿಂತ ಕುಟುಂಬದ ಮೌಲ್ಯಗಳು, ಶಿಸ್ತು ಮತ್ತು ಸಂಪ್ರದಾಯಗಳಿಗೆ ಹೆಚ್ಚಿನ ಆದ್ಯತೆ ನೀಡಿದ ಅವರು, ಮದುವೆಯಾದ ನಂತರ ಸಂಪೂರ್ಣವಾಗಿ ಕುಟುಂಬದ ಜವಾಬ್ದಾರಿಯನ್ನು ಹೆಗಲ ಮೇಲೆ ಹೊತ್ತರು.

ಎಚ್.ಡಿ ದೇವೇಗೌಡ ಅವರು ರಾಜಕೀಯದಲ್ಲಿ ತಮ್ಮದೇ ಆದ ಗುರುತನ್ನು ಮೂಡಿಸುತ್ತಿದ್ದ



ಸಮಯದಲ್ಲೇ ಚೆನ್ನಮ್ಮ ಅವರ ಜೀವನ ಸಂಗಾತಿಯಾದರು.

ರಾಜಕೀಯದಲ್ಲಿ ನಿರಂತರ ಪ್ರವಾಸ, ಸಭೆಗಳು, ಜನಸಂಪರ್ಕ ಕಾರ್ಯಕ್ರಮಗಳಲ್ಲಿ ದೇವೇಗೌಡರು ನಿರತರಾಗಿದ್ದರು.

ಕುಟುಂಬದ ಎಲ್ಲ ಜವಾಬ್ದಾರಿಗಳನ್ನ ನಿಭಾಯಿಸುವ ಮೂಲಕ ದೇವೇಗೌಡರಿಗೆ ಯಾವುದೇ ಕೊರತೆ ಉಂಟಾಗದಂತೆ ನೋಡಿಕೊಂಡರು.

## ರಾಜಕೀಯದಿಂದ ಸದಾ ದೂರ

ದೇವೇಗೌಡ ಕುಟುಂಬದ ಪ್ರಮುಖ ಸದಸ್ಯೆಯಾಗಿದ್ದರೂ ಚೆನ್ನಮ್ಮ ಅವರು ರಾಜಕೀಯ ವೇದಿಕೆಗಳಲ್ಲಿ ಕಾಣಿಸಿಕೊಳ್ಳುವುದು ಅತ್ಯಂತ ವಿರಳ. ಚುನಾವಣಾ ಪ್ರಚಾರ, ರಾಜಕೀಯ ಭಾಷಣಗಳು ಅಥವಾ ಪಕ್ಷದ ಚಟುವಟಿಕೆಗಳಲ್ಲಿ ಅವರು ಎಂದಿಗೂ ಮುಂಚೂಣಿಯಲ್ಲಿ ಇರಲಿಲ್ಲ. ಇದೇ ಅವರ ವ್ಯಕ್ತಿತ್ವದ ವಿಶೇಷತೆ.

ದೇವೇಗೌಡರ ರಾಜಕೀಯ ಬದುಕು ಎಷ್ಟೇ ಬ್ಯುಸಿಯಾಗಿದ್ದರೂ ಕುಟುಂಬದ ಸದಸ್ಯರನ್ನು ಒಗ್ಗೂಡಿಸುವ ಜವಾಬ್ದಾರಿಯನ್ನು ಚೆನ್ನಮ್ಮ ಅವರು ಸಮರ್ಥವಾಗಿ ನಿಭಾಯಿಸಿದರು. ಮಕ್ಕಳ ಶಿಕ್ಷಣ, ಸಂಸ್ಕಾರ ಹಾಗೂ ಕುಟುಂಬದ ಸಂಪ್ರದಾಯಗಳನ್ನ ಉಳಿಸುವಲ್ಲಿ ಅವರ

## ಎಚ್.ಡಿ.ದೇವೇಗೌಡ ಅವರಿಗೆ ಪತ್ನಿ ವಿಯೋಗ

**ಬೆಂಗಳೂರು:** ಮಾಜಿ ಪ್ರಧಾನಿ ಎಚ್.ಡಿ.ದೇವೇ ಗೌಡ ಅವರ ಪತ್ನಿ ಚೆನ್ನಮ್ಮ ದೇವೇಗೌಡ ಅವರು ಶನಿವಾರ ಹೃದಯಘಾತದಿಂದ ಕೊನೆಯುಸಿರೆಳೆದರು.

ತೀವ್ರ ಉಸಿರಾಟದ ಸಮಸ್ಯೆಯಿಂದ ಬಳಲುತ್ತಿದ್ದ ಚೆನ್ನಮ್ಮ ಅವರನ್ನು ಕಳೆದ 4 ದಿನಗಳ ಹಿಂದೆ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿತ್ತು. ತೀವ್ರ ನಿಗಾ ಘಟಕದಲ್ಲಿ ಇರಿಸಿ ಚಿಕಿತ್ಸೆ ನೀಡಲಾಗುತ್ತಿತ್ತು. ಚಿಕಿತ್ಸೆ ಫಲಕಾರಿಯಾಗದೇ ಶನಿವಾರ ಸಂಜೆ 4:50ರ ಸುಮಾರಿಗೆ ವಿಧಿವಶರಾದರು.

ಹಾಸನ ತಾಲೂಕಿನ ಮುತ್ತಿಗೆ ಹಿರೇಹಳ್ಳಿಯ ಚೆನ್ನಮ್ಮ ಅವರು 1954 ಮೇ 25ರಂದು ಎಚ್.ಡಿ.ದೇವೇಗೌಡ ಅವರ ಜೊತೆ ದಾಂಪತ್ಯ ಜೀವನಕ್ಕೆ ಕಾಲಿಟ್ಟಿದ್ದರು. ದಂಪತಿಗೆ 6 ಜನ ಮಕ್ಕಳಿದ್ದಾರೆ. ಚೆನ್ನಮ್ಮ ಅವರು ಪತಿ ಎಚ್.ಡಿ ದೇವೇಗೌಡ, ಪುತ್ರರಾದ ಎಚ್.ಡಿ ಕುಮಾರಸ್ವಾಮಿ, ಎಚ್.ಡಿ.ರೇವಣ್ಣ, ಎಚ್.ಡಿ.ಬಾಲಕೃಷ್ಣ, ಎಚ್.ಡಿ. ರಮೇಶ್ ಹಾಗೂ ಮಗಳು ಎಚ್.ಡಿ.ಅನುಸೂಯ ಅವರನ್ನ ಅಗಲಿ ದ್ದಾರೆ. ಚೆನ್ನಮ್ಮ ನಿಧನಕ್ಕೆ ಕುಟುಂಬಸ್ಥರು ಕಂಬನಿ ಮಿಡಿದಿದ್ದಾರೆ.

## ಮಾಜಿ ಪ್ರಧಾನಿ ಪತ್ನಿ ಆದರೂ ಸರಳ ಬದುಕು

ಕಡಿಮೆ ಆಭರಣ, ಸರಳ ಸೀರೆ ಮತ್ತು ಅತ್ಯಂತ ಸರಳ ಜೀವನಶೈಲಿ ಚೆನ್ನಮ್ಮ ಅವರ ಗುರುತು. ಮಾಜಿ ಪ್ರಧಾನಿಯ ಪತ್ನಿಯಾಗಿದ್ದರೂ, ಸಾಮಾನ್ಯ ಮಹಿಳೆಯಂತೆ ಬದುಕುವುದನ್ನೇ ಅವರು ಇಷ್ಟಪಟ್ಟಿದ್ದಾರೆ.

ಸಾರ್ವಜನಿಕ ವೇದಿಕೆಯಲ್ಲಿ ಹೆಚ್ಚು ಕಾಣಿಸಿಕೊಳ್ಳದಿದ್ದರೂ, ದೇವೇಗೌಡರ ರಾಜಕೀಯ ಜೀವನದ ಯಶಸ್ಸಿನ ಹಿಂದೆ ಚೆನ್ನಮ್ಮ ಅವರ ತ್ಯಾಗ, ಸಹನೆ ಮತ್ತು ಬೆಂಬಲದ ಪಾತ್ರವನ್ನು ಅನೇಕರು ಉಲ್ಲೇಖಿಸುತ್ತಾರೆ.

## ಹಲವು ಬಾರಿ ಸಾವು ಗೆದ್ದಿದ್ದರು

**ಬೆಂಗಳೂರು:** ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರ ಪತ್ನಿ ಚೆನ್ನಮ್ಮ ಎರಡು ಬಾರಿ ಸಾವನ್ನು ಗೆದ್ದಿದ್ದರು. 2001 ರಲ್ಲಿ ದೇವೇಗೌಡರ ತಮ್ಮನ ಮಗನಿಂದಲೇ ಆಸಿಡ್ ದಾಳಿಗೆ ಒಳಗಾಗಿದ್ದರು. ಆಸ್ತಿ ವಿವಾದ ಹಾಗೂ ಕುಟುಂಬ ವೈಷಮ್ಯವೇ ಈ ದಾಳಿಗೆ ಕಾರಣವಾಗಿತ್ತು.

ದೇವೇಗೌಡರ ಸಂಬಂಧಿ ಲೋಕೇಶ್ (ಬಸವೇಗೌಡರ ಮಗ) ಎಂಬಾತ ಈ ಕೃತ್ಯದ ಪ್ರಮುಖ ಆರೋಪಿಯಾಗಿದ್ದ. ಹೊಳೆನರಸೀಪುರ ತಾಲೂಕಿನ ಹರದನಹಳ್ಳಿಯಲ್ಲಿ ನಡೆದಿದ್ದ ಈ ಘಟನೆ ದೇಶಾದ್ಯಂತ ಭಾರೀ ಸಂಚಲನ ಸೃಷ್ಟಿಸಿತ್ತು.

# ಮಾಜಿ ಸಚಿವರಿಗೆ ರಾಗಾ ಆಕ್ಷೇಪ?

## ಸಂಪುಟ ವಿಸ್ತರಣೆ ಕಸರತ್ತು: ಖರ್ಗೆ ಜೊತೆ ಸಿಎಂ, ಡಿಸಿಎಂ ಚರ್ಚೆ



**ಬೆಂಗಳೂರು:** ಸಚಿವ ಸಂಪುಟ ವಿಸ್ತರಣೆ ಹಿನ್ನೆಲೆಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಡಿಸಿಎಂ ಜಿ.ಪರಮೇಶ್ವರ್ ಜೊತೆಯಾಗಿ ಭೇಟಿಯಾಗಿ ಮಾತುಕತೆ ನಡೆಸಿದರು.

ಬೆಂಗಳೂರಿನ ಸದಾಶಿವನಗರದ ನಿವಾಸದಲ್ಲಿ ಖರ್ಗೆ ಅವರನ್ನು ಸಿಎಂ ಮತ್ತು ಡಿಸಿಎಂ ಭೇಟಿಯಾಗಿದ್ದರು. ಮೊನ್ನೆ ದೆಹಲಿಯಲ್ಲಿ ಹೈಕಮಾಂಡ್ ನಾಯಕರ ಜೊತೆ ನಡೆದ ಸಂಪುಟ ವಿಸ್ತರಣೆ ಕುರಿತ ಮಾತುಕತೆ ವೇಳೆ ಖರ್ಗೆ ತುರ್ತಾಗಿ ಬೆಂಗಳೂರಿಗೆ ವಾಪಸ್ ಆಗಿದ್ದರು. ಈ ಹಿನ್ನೆಲೆಯಲ್ಲಿ ಸಿಎಮ ಡಿಕೆಶಿ ಸಹ ಬೆಂಗಳೂರಿಗೆ ವಾಪಸ್ ಆಗಿದ್ದರು.

ಸಚಿವ ಸಂಪುಟ ಸೇರ್ಪಡೆಗೆ ಹಿರಿಯ 11 ಮಾಜಿ ಸಚಿವರ ಹೆಸರಿಗೆ ಹೈಕಮಾಂಡ್ ವಿರೋಧ ವ್ಯಕ್ತಪಡಿಸಿರುವ ಹಿನ್ನೆಲೆಯಲ್ಲಿ ಈ ಬಗ್ಗೆ ಎಐಸಿಸಿ ಅಧ್ಯಕ್ಷ ಖರ್ಗೆ ಅವರ ಜೊತೆ ಸಿಎಂ ಚರ್ಚೆ ನಡೆಸಿದ್ದಾರೆ ಎನ್ನಲಾಗಿದೆ. 11 ಜನರ ಪಟ್ಟಿಯಲ್ಲಿ ಯಾರನ್ನು ಕೈಬಿಡಬಹುದು? ಅಲ್ಲದೇ, ಉಳಿದ 32 ಹೆಸರುಗಳಲ್ಲಿ ಆದ್ಯತೆ ಯಾರಿಗೆ ಕೊಡಬೇಕು ಎಂಬ ಬಗ್ಗೆಯೂ ಚರ್ಚೆ ನಡೆದಿದೆ ಎಂದು ತಿಳಿದುಬಂದಿದೆ.

ಸಿಎಂ ಡಿ.ಕೆ ಶಿವಕುಮಾರ್ ಹಾಗೂ ಮಾಜಿ ಸಿಎಂ ಸಿದ್ದರಾಮಯ್ಯ ಇಬ್ಬರೂ ಸೇರಿ ಸಿದ್ಧಪಡಿಸಿದ್ದ ಪಟ್ಟಿಯಲ್ಲಿ ಹಿಂದಿನ 11 ಜನ ಹಿರಿಯ ಮಾಜಿ ಸಚಿವರ ಹೆಸರಿತ್ತು. ಅದರಲ್ಲಿ ಶೇ.50ರಷ್ಟು ಕಡಿತ ಮಾಡಲು ಹೈಕಮಾಂಡ್ ಸೂಚನೆ ನೀಡಿದೆ. ಹಿರಿಯ 11 ಶಾಸಕರಲ್ಲಿ ಯಾರನ್ನು ಕೈಬಿಡಬೇಕು ಎಂಬ ನಿರ್ಧಾರ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೆಗಲಿಗೇರಿದೆ. ರಾಹುಲ್ ಗಾಂಧಿ ಜೊತೆಗಿನ ಚರ್ಚೆಯಲ್ಲಿ ಯಾರ ಹೆಸರು ಕೈಬಿಡಬೇಕು ಎಂಬ ತೀರ್ಮಾನವನ್ನು ಖರ್ಗೆ ಮಾಡಲಿದ್ದಾರೆ ಎನ್ನಲಾಗಿದೆ.

ಶಾಸಕ ಅಜಯ್ ಸಿಂಗ್ ಕೂಡ ಖರ್ಗೆ ಅವರನ್ನು ಭೇಟಿ ಮಾಡಿದರು. ಸಚಿವ ಸ್ಥಾನಕ್ಕೆ ಪರಿಗಣಿಸುವಂತೆ ಮನವಿ ಮಾಡಿಕೊಂಡಿದ್ದಾರೆ. ಶಾಸಕ ಎಂ. ಕೃಷ್ಣಪ್ಪ ತ್ತಿತರರು ಎಐಸಿಸಿ ಅಧ್ಯಕ್ಷರ ಬಳಿ ಸಚಿವ ಸ್ಥಾನದ ಬೇಡಿಕೆ ಇಟ್ಟಿದ್ದಾರೆ.

### ದೆಹಲಿಗೆ 30 ಶಾಸಕರ ಲಗ್ಗೆ

ನವದೆಹಲಿಯಲ್ಲಿ ರಾಜ್ಯದ ಸುಮಾರು 30ಕ್ಕೂ ಹೆಚ್ಚು ಕಾಂಗ್ರೆಸ್ ಶಾಸಕರು ಬೀಡುಬಿಟ್ಟು ಸಚಿವ ಸ್ಥಾನಕ್ಕಾಗಿ ಲಾಬಿ ನಡೆಸುತ್ತಿದ್ದಾರೆ. ಇದರಿಂದ ಸಂಪುಟ ವಿಸ್ತರಣೆ ಕಸರತ್ತು ಮತ್ತಷ್ಟು ಜಟಿಲವಾಗಿದೆ. ಶಾಸಕರ ಆತುರ ನಾಯಕತ್ವದ ಮೇಲೆ ಒತ್ತಡವನ್ನು ಹೆಚ್ಚಿಸಿದೆ. ಶಾಸಕರು ಹಿರಿಯ ಕಾಂಗ್ರೆಸ್ ನಾಯಕರನ್ನು ಭೇಟಿ ಮಾಡಿ ಒತ್ತಾಯ ಮಾಡುತ್ತಿದ್ದಾರೆ.

ಸಂಪುಟ ವಿಸ್ತರಣೆಗೆ ಹೊಸ ಮುಖಗಳನ್ನು ಸೇರಿಸಿಕೊಳ್ಳುವುದು ಮಾತ್ರವಲ್ಲದೆ, ಇದುವರೆಗೆ ಹೊರಗುಳಿದ ಹಿರಿಯ ನಾಯಕರಿಗೆ ದಾರಿ ಮಾಡಿಕೊಡಲು ಕೆಲವು ಸಚಿವರನ್ನು ಕೈಬಿಡುವ ಸಾಧ್ಯತೆ ಇದೆ. ಮಾಜಿ ಸಚಿವ ಜಮೀರ್ ಅಹ್ಮದ್ ಖಾನ್ ಮುಂದುವರಿಕೆ ಬಗ್ಗೆ ಪಕ್ಷದೊಳಗಿನ ಭಿನ್ನಾಭಿಪ್ರಾಯಗಳ ನಡುವೆ ಅವರ ರಾಜಕೀಯ ಭವಿಷ್ಯ ಅನಿಶ್ಚಿತವಾಗಿದೆ. ಅಲ್ಲದೆ, ಬೆಳಗಾವಿ ಶಾಸಕಿ ಲಕ್ಷ್ಮಿ ಹೆಬ್ಬಾಳ್ಕರ್, ಕಲಬುರಗಿ ಶಾಸಕಿ ಕನೀಜ್ ಫಾತಿಮಾ ಅವರನ್ನು ಸಂಪುಟಕ್ಕೆ ಸೇರಿಸಿಕೊಳ್ಳಬೇಕೆ ಎಂಬುದರ ಬಗ್ಗೆ ನಾಯಕರು ಚರ್ಚಿಸುತ್ತಿದ್ದಾರೆ. ಅಂತಿಮ ನಿರ್ಧಾರ ತೆಗೆದುಕೊಳ್ಳುವ ಮೊದಲು ಸಿದ್ದರಾಮಯ್ಯ ಸೂಚಿಸಿದ ಪಟ್ಟಿಯ ಬಗ್ಗೆಯೂ ಹೈಕಮಾಂಡ್ ಚರ್ಚಿಸಲಿದೆ.

### ಮತ್ತಷ್ಟು ವಿಳಂಬ ಸಾಧ್ಯತೆ

**ಬೆಂಗಳೂರು:** ಸಚಿವ ಸ್ಥಾನದ ಆಕಾಂಕ್ಷಿಗಳಿಂದ ಹೆಚ್ಚುತ್ತಿರುವ ಒತ್ತಡ ಹಾಗೂ ಪ್ರಾದೇಶಿಕ ಸಮತೋಲನ ಕಾಯ್ದು ಕೊಳ್ಳುವ ಹಿನ್ನೆಲೆಯಲ್ಲಿ ಕಾಂಗ್ರೆಸ್ ಹೈಕಮಾಂಡ್ ಸಚಿವ ಸಂಪುಟ ವಿಸ್ತ ರಣೆಯನ್ನು ಮತ್ತಷ್ಟು ವಿಳಂಬ ಮಾಡುವ ಸಾಧ್ಯತೆ ಇದೆ ಎನ್ನಲಾಗಿದೆ.

ಮುಖ್ಯಮಂತ್ರಿ ಡಿ.ಕೆ.ಶಿವಕು ಮಾರ್ ಮತ್ತು ಮಾಜಿ ಸಿಎಂ ಸಿದ್ದ ರಾಮಯ್ಯ ಆದಷ್ಟು ಬೇಗ ಸಂಪುಟ ವಿಸ್ತರಣೆ ಪೂರ್ಣಗೊಳಿಸಲು ಒಲವು ತೋರಿದ್ದಾರೆ. ಆದರೆ ಹೈಕಮಾಂಡ್ ನಾಯಕರು ಸಂಪುಟ ಸದಸ್ಯರ ಪಟ್ಟಿಯನ್ನು ಅಂತಿಮಗೊಳಿಸಲು ಕನಿಷ್ಠ ಒಂದು ವಾರ ಸಮಯ ತೆಗೆದುಕೊಳ್ಳುತ್ತಾರೆಂದು ಕಾಂಗ್ರೆಸ್ ಉನ್ನತ ಮೂಲಗಳು ತಿಳಿಸಿವೆ. ಸಂಪುಟ ವಿಸ್ತರಣೆ ಮಾಡುವ ಮೊದಲು ಒಮ್ಮತವನ್ನು ರೂಪಿಸಲು ಕಾಂಗ್ರೆಸ್ ನಾಯಕತ್ವ ಮುಂದಾಗಿದೆ. ಪ್ರಾದೇಶಿಕ ಪ್ರಾತಿನಿಧ್ಯ, ಜಾತಿ ಸಮೀಕರಣ, ರಾಜಕೀಯ ಸಮತೋಲನ ಮತ್ತು ಅನುಭವಿ ಶಾಸಕರಿಗೆ ಅವಕಾಶ ಕಲ್ಪಿಸುವ ಕುರಿತು ಪಕ್ಷದ ಹಿರಿಯ ನಾಯಕರೊಂದಿಗೆ ಸಮಾಲೋಚನೆ ನಡೆಯುತ್ತಿದೆ. ಮುಂದಿನ ನಿರ್ಧಾರ ತೆಗೆದುಕೊಳ್ಳುವುದಕ್ಕೂ ಮೊದಲು ಎಐಸಿಸಿ ಅಧ್ಯಕ್ಷ ಖರ್ಗೆ ನವದೆಹಲಿಗೆ ಬರುವುದನ್ನು ಹೈಕಮಾಂಡ್ ನಾಯಕರು ಕಾಯುತ್ತಿದ್ದಾರೆಂದು ಪುಟ 2ಕ್ಕೆ

# ಸಂಸತ್ ಕಲಾಪ: ಶೂನ್ಯ ಸಂಪಾದನೆ

## ಅಧಿವೇಶನದಲ್ಲೂ ಭಾಗವಹಿಸದ ಕೆಲವು ಸಂಸದರು

**ಬೆಂಗಳೂರು:** ಸಂಸತ್ ಮುಂಗಾರು ಅಧಿವೇಶನ ಜುಲೈ 20ರಿಂದ ಆರಂಭವಾಗಲಿದೆ. ಕಳೆದ ಬಜೆಟ್ ಅಧಿವೇಶನ ಅವಧಿಯಲ್ಲಿ ಸಂಸದರ ಹಾಜರಾತಿ ದಾಖಲೆಗಳು ತೀವ್ರ ಗಮನ ಸೆಳೆದಿವೆ. ಅತಿ ಕಡಿಮೆ ಹಾಜರಾತಿ ಹೊಂದಿರುವವರ ಪಟ್ಟಿಯಲ್ಲಿ ಕರ್ನಾಟಕದ ಇಬ್ಬರು ಸಂಸದರೂ ಸೇರಿದ್ದಾರೆ.



ಬಜೆಟ್ ಅಧಿವೇಶನದ ಹಾಜರಾತಿ ದತ್ತಾಂಶದ ವಿಶ್ಲೇಷಣೆ ಪ್ರಕಾರ, ಕಲಬುರಗಿಯ ಕಾಂಗ್ರೆಸ್ ಸಂಸದ ರಾಧಾಕೃಷ್ಣ ದೊಡ್ಡಮನಿ ಅವರು ಸದನದ ಯಾವುದೇ ಅಧಿವೇಶನದಲ್ಲಿ ಭಾಗವಹಿಸಿಲ್ಲ. ಒಟ್ಟು 31 ಕಲಾಪ ಗಳಲ್ಲಿ ಅವರ ಹಾಜರಾತಿ ಶೂನ್ಯ. ಅನಾರೋಗ್ಯದ ಹಿನ್ನೆಲೆಯಲ್ಲಿ ಸಂಸದ ರಾಧಾಕೃಷ್ಣ ದೊಡ್ಡಮನಿ ಹಾಜ ರಾಗಿಲ್ಲ ಎಂದು ಅವರ ಆಪ್ತರು ತಿಳಿಸಿದ್ದಾರೆ.

ಬೆಳಗಾವಿಯನ್ನು ಪ್ರತಿನಿಧಿಸುವ ಪ್ರಿಯಾಂಕಾ ಸತೀಶ್ ಜಾರಕಿಹೊಳಿ ಅವರು 31 ಕಲಾಪಗಳ ಪೈಕಿ 13ರಲ್ಲಿ ಭಾಗವಹಿಸಿದ್ದಾರೆ. ಈ ಮೂಲಕ ಶೇ 41.9ರಷ್ಟು ಹಾಜರಾತಿಯನ್ನು ದಾಖಲಿಸಿದ್ದಾರೆ.

ಕಾಮನ್‌ವೆಲ್ತ್ ಹ್ಯೂಮನ್ ರೈಟ್ಸ್ ಇನಿಶಿಯೇಟಿವ್ ನಿರ್ದೇಶಕ ವೆಂಕಟೇಶ್ ನಾಯಕ್ ಸಂಗ್ರಹಿಸಿದ ಅಂಕಿಅಂಶಗಳ ಪ್ರಕಾರ, ಬಜೆಟ್ ಅಧಿವೇಶನದಲ್ಲಿ ಪುಟ 2ಕ್ಕೆ

### ಕರ್ನಾಟಕ ಸಂಸದರ ಹಾಜರಾತಿ (ಶೇ)

- **ಶೇ 90ಕ್ಕೂ ಹೆಚ್ಚು: ಡಾ.ಸಿ.ಎನ್ ಮಂಜುನಾಥ್ (ಬೆಂಗಳೂರು ಗ್ರಾಮಾಂತರ), ಡಾ.ಕೆ.ಸುಧಾಕರ್ (ಚಿಕ್ಕಬಳ್ಳಾಪುರ), ಶ್ರೇಯಸ್ ಪಟೇಲ್ (ಹಾಸನ)**
- **ಶೇ 87: ತೇಜಸ್ವಿ ಸೂರ್ಯ (ಬೆಂಗಳೂರು ದಕ್ಷಿಣ), ರಮೇಶ್ ಜಿಗಜಿಣಗಿ (ಬಿಜಾಪುರ), ಕೋಟ ಶ್ರೀನಿವಾಸ್ ಪೂಜಾರಿ (ಉಡುಪಿ–ಚಿಕ್ಕಮಗಳೂರು)**
- **ಶೇ 83.8: ಪಿಸಿ ಮೋಹನ್ (ಬೆಂಗಳೂರು ಕೇಂದ್ರ), ಮಲ್ಲೇಶ್ ಬಾಬು (ಕೋಲಾರ)**
- **ಶೇ 80.6: ಜಗದೀಶ್ ಶೆಟ್ಟರ್ (ಬೆಳಗಾವಿ), ಕುಮಾರ್ ನಾಯ್ಕ್ (ರಾಯಚೂರು)**
- **ಶೇ 74: ಸಾಗರ್ ಖಂಡ್ರೆ (ಬೀದರ್), ಯದುವೀರ್ ಒಡೆಯರ್ (ಮೈಸೂರು–ಕೊಡಗು)**
- **ಶೇ 70.9: ಪಿಸಿ ಗದ್ದಿಗೌಡರ್ (ಬಾಗಲಕೋಟ)**
- **ಶೇ 67.7: ಡಾ.ಪ್ರಭಾ ಮಲ್ಲಿಕಾರ್ಜುನ್ (ದಾವಣಗೆರೆ), ಬಸವರಾಜ ಬೊಮ್ಮಾಯಿ (ಹಾವೇರಿ)**
- **ಶೇ 64.5: ಸುನೀಲ್ ಬೋಸ್ (ಚಾಮರಾಜನಗರ)**
- **ಶೇ 61: ಗೋವಿಂದ ಕಾರಜೋಳ (ಚಿತ್ರದುರ್ಗ), ಬಿ.ವೈ ರಾಘವೇಂದ್ರ (ಶಿವಮೊಗ್ಗ)**
- **ಶೇ 58: ಇ.ತುಕಾರಾಂ (ಬಳ್ಳಾರಿ), ರಾಜಶೇಖರ್ ಹಿಟ್ನಾಳ್ (ಕೊಪ್ಪಳ)**
- **ಶೇ 41.9: ಪ್ರಿಯಾಂಕಾ ಜಾರಕಿಹೊಳಿ (ಬೆಳಗಾವಿ)**

# ಕ್ರೆಡಿಟ್ ವಾರ್: ದೋಸ್ತಿಯಲ್ಲಿ ಬಿರುಕು

## ಬಿಡದಿ ಟೌನ್‌ಶಿಪ್ ವಿರುದ್ಧ ಪ್ರತ್ಯೇಕ ಪಾದಯಾತ್ರೆ ಘೋಷಣೆ


**ಬೆಂಗಳೂರು:** ಬಿಡದಿ ಟೌನ್‌ಶಿಪ್ ವಿರುದ್ಧದ ಹೋರಾಟ ತೀವ್ರಗೊಂಡಿರುವ ನಡುವೆಯೂ ಇದೀಗ ದೋಸ್ತಿಗಳ ಬಿರುಕಿಗೂ ಕಾರಣವಾಗಿದೆ. ಪ್ರತಿಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್ ನಡುವೆ ಕ್ರೆಡಿಟ್ ವಾರ್ ಆರಂಭವಾಗಿದೆ.

ಬಿಡದಿ ಟೌನ್‌ಶಿಪ್ ವಿರೋಧಿಸಿ ಪ್ರತಿಭಟನೆ ನಡೆಸಿದ ಬಿಜೆಪಿ ಬೆಂಗಳೂರಿನಿಂದ ಬಿಡದಿಯವರೆಗೆ ಬೃಹತ್ ಪಾದಯಾತ್ರೆ ನಡೆಸುವುದಾಗಿ ಘೋಷಿಸಿದೆ. ಇದರ ಬೆನ್ನಲ್ಲೇ ಮಿತ್ರ ಪಕ್ಷ ಜೆಡಿಎಸ್ ಸಹ ತಾನು ಪ್ರತ್ಯೇಕವಾಗಿ ಪಾದಯಾತ್ರೆ ಮಾಡುವುದಾಗಿ ಶನಿವಾರ ಘೋಷಿಸಿದೆ.

ಜುಲೈ 30, 31 ಮತ್ತು ಆಗಸ್ಟ್ 1ರಂದು ಸುಮಾರು 38 ಕಿಲೋಮೀಟರ್ ಮೂರು ದಿನಗಳ ಪಾದಯಾತ್ರೆ ನಡೆಸುವುದಾಗಿ ಜೆಡಿಎಸ್ ಘೋಷಣೆ ಮಾಡಿದೆ.

ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಕೃಷ್ಣಾರೆಡ್ಡಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು ಅವರು ಶನಿವಾರ ಸುದ್ದಿಗೋಷ್ಠಿ ನಡೆಸಿ ಪಾದಯಾತ್ರೆ ಪೋಸ್ಟರ್ ಅನ್ನು ಬಿಡುಗಡೆ ಮಾಡಿದರು.

ಭೈರಮಂಗಲದಿಂದ ಜುಲೈ 30ರಂದು ಪಾದಯಾತ್ರೆ ಪ್ರಾರಂಭ ಆಗಿ ಆಗಸ್ಟ್ 1ರಂದು ಫ್ರೀಡಂ ಪಾರ್ಕ್ ನಲ್ಲಿ ಪಾದಯಾತ್ರೆ ಅಂತ್ಯವಾಗಲಿದೆ. ನಿಖಿಲ್ ಕುಮಾರಸ್ವಾಮಿ ನೇತೃತ್ವದಲ್ಲಿ ಈ ಪಾದಯಾತ್ರೆ ನಡೆಯಲಿದೆ.



ಪಾದಯಾತ್ರೆಗೆ ಕೇಂದ್ರ ಸಚಿವ ಕುಮಾರಸ್ವಾಮಿ ಚಾಲನೆ ನೀಡಲಿದ್ದಾರೆ ಎಂದು ಅವರು ತಿಳಿಸಿದರು.

ಪಾದಯಾತ್ರೆ ಆಗಸ್ಟ್ 1ರಂದು ಫ್ರೀಡಂ ಪಾರ್ಕ್‌ನಲ್ಲಿ ಅಂತ್ಯವಾಗಲಿದೆ. ಬೃಹತ್ ಸಮಾವೇಶದ ಮೂಲಕ ಬಿಡದಿ ಟೌನ್‌ಶಿಪ್ ಯೋಜನೆ ರದ್ದು ಮಾಡುವಂತೆ ಜೆಡಿಎಸ್ ಆಗ್ರಹ ಮಾಡಲಿದೆ ಎಂದು ಕೋರ್ ಕಮಿಟಿ ಅಧ್ಯಕ್ಷ ಕೃಷ್ಣಾರೆಡ್ಡಿ ತಿಳಿಸಿದ್ದಾರೆ.

ಸರ್ಕಾರ ಬಿಡದಿ ಟೌನ್‌ಶಿಪ್ ಯೋಜನೆ ರದ್ದು ಮಾಡುವವರೆಗೂ ಜೆಡಿಎಸ್ ಹೋರಾಟ ಮಾಡಲಿದೆ. ಪಾದಯಾತ್ರೆ ಬಳಿಕ ವಿಧಾನಸೌಧ ಚಲೋ ಸಹ ಮಾಡ್ತೀವಿ. ಬಿಜೆಪಿಗೂ ಮೊದಲೇ ನಾವು ಪಾದಯಾತ್ರೆಗೆ ನಿರ್ಧಾರ ಮಾಡಿದ್ದೇವೆ ಎಂದು ಹೇಳಿದರು.

# ಶಿರಾ ಬಳಿ ಏರ್‌ಪೋರ್ಟ್ ನಿರ್ಮಿಸಿ

## ವಿಮಾನಯಾನ ಸಚಿವರಿಗೆ ಕೇಂದ್ರ ಸಚಿವ ವಿ.ಸೋಮಣ್ಣ ಆಗ್ರಹ

**ಬೆಂಗಳೂರು:** ಬೆಂಗಳೂರಿನ 2ನೇ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವನ್ನು ತುಮಕೂರು ಜಿಲ್ಲೆಯ ಶಿರಾದಲ್ಲಿ ನಿರ್ಮಿಸಬೇಕು ಎಂದು ಕೇಂದ್ರ ರೈಲ್ವೆ ಸಚಿವ ವಿ.ಸೋಮಣ್ಣ ಅವರು ಕೇಂದ್ರ ವಿಮಾನಯಾನ ಸಚಿವರಿಗೆ ಪತ್ರ ಬರೆದು ಆಗ್ರಹಿಸಿದ್ದಾರೆ.

ರಾಜ್ಯ ಸರ್ಕಾರ ನಿರ್ಮಿಸಲು ಉದ್ದೇಶಿಸಿರುವ ನೂತನ ಅಂತರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಶಿರಾ ಬಳಿ ನಿರ್ಮಿಸಬೇಕೆಂಬುದು ರಾಜ್ಯದ ಬಹುತೇಕ ಜನಪ್ರತಿನಿಧಿಗಳ ಒತ್ತಾಸೆ ಆಗಿದೆ. ಶಿರಾದಲ್ಲಿ ನೂತನ ವಿಮಾನ ನಿಲ್ದಾಣ ನಿರ್ಮಾಣ ಮಾಡುವುದರಿಂದ ಮಧ್ಯ ಕರ್ನಾಟಕ ಹಾಗೂ ಉತ್ತರ ಕರ್ನಾಟಕದ ಪ್ರಮುಖ ಜಿಲ್ಲೆಗಳ ಪ್ರಗತಿಗೆ ಸಹಾಯಕವಾಗಲಿದೆ ಎಂದು ತಿಳಿಸಿದ್ದಾರೆ.

ಈ ಬಗ್ಗೆ ಕಳೆದ ವರ್ಷ ಮಾರ್ಚ್ 20ರಂದು ತುಮಕೂರು, ಚಿಕ್ಕಮಗಳೂರು, ದಾವಣಗೆರೆ, ಚಿತ್ರದುರ್ಗ, ಬಳ್ಳಾರಿ, ಹಾವೇರಿ ಹಾಗೂ ರಾಯಚೂರು ಸೇರಿದಂತೆ ಪ್ರಮುಖ ಜಿಲ್ಲೆಗಳ ಶಾಸಕರು ನನಗೆ ಪತ್ರ ಬರೆದು ಒತ್ತಾಯಿಸಿದ್ದರು. ಈ ಹಿನ್ನೆಲೆಯಲ್ಲಿ ಕೇಂದ್ರದ ನಾಗರಿಕ ವಿಮಾನಯಾನ ಸಚಿವರಾದ ಕೆ.ರಾಮಮೋಹನ ನಾಯ್ಡು ಅವರಿಗೆ ಪತ್ರ ಬರೆದು ಈ ಭಾಗದ ಜನಪ್ರತಿನಿಧಿಗಳ ಒತ್ತಾಸೆಯನ್ನು ಅವರ ಗಮನಕ್ಕೆ ತಂದಿದ್ದೇನೆ ಎಂದು ಸಚಿವ ವಿ.ಸೋಮಣ್ಣ ಮಾಧ್ಯಮಗಳಿಗೆ ಮಾಹಿತಿ ನೀಡಿದರು.

ಈಗಾಗಲೇ ರಾಜ್ಯದಲ್ಲಿ ಬೆಂಗಳೂರು ಕೇಂದ್ರಿತವಾಗಿ ಅಭಿವೃದ್ಧಿ ಸಾಧಿಸಿದೆ. ಬೆಂಗಳೂರಿಗೆ ಪರ್ಯಾಯವಾಗಿ ರಾಜ್ಯದ ಎಲ್ಲಾ ನಗರಗಳನ್ನು ಸಶಕ್ತವಾಗಿ ಬೆಳೆಸುವುದು ಜನಪ್ರತಿನಿಧಿಗಳೆಲ್ಲರ ಜವಾಬ್ದಾರಿಯೂ ಹೌದು. ಈ ಹಿನ್ನೆಲೆಯಲ್ಲಿ



### ಸರ್ಕಾರಿ ಭೂಮಿ, ನೀರು ಲಭ್ಯ

ಶಿರಾ ಬಳಿ ಹೆಚ್ಚಿನ ಪ್ರಮಾಣದ ಸರ್ಕಾರಿ ಭೂಮಿ ಲಭ್ಯವಿದೆ. ಭದ್ರಾ ಮೇಲ್ದಂಡೆ ಕಾಲುವೆ, ಹೇಮಾವತಿ ಮತ್ತು ಎತ್ತಿನಹೊಳೆ ಯೋಜನೆಗಳಿಂದ ನೀರಿನ ಲಭ್ಯತೆಯ ಜೊತೆಗೆ ಚಿತ್ರದುರ್ಗದ ಡಿಆರ್‌ಡಿಒ, ಐಐಎಸ್‌ಸಿ ಕ್ಯಾಂಪಸ್ ಹಾಗೂ ತುಮಕೂರಿನ ಗುಬ್ಬಿಯ ಎಚ್‌ಎಎಲ್ ಹೆಲಿಕಾಪ್ಟರ್ ಘಟಕಗಳೂ ಅತ್ಯಂತ ಸಮೀಪದಲ್ಲಿ ಕಾರ್ಯನಿರ್ವಹಿಸುತ್ತಿವೆ ಎಂದು ಕೇಂದ್ರ ಸಚಿವ ವಿ.ಸೋಮಣ್ಣ ತಿಳಿಸಿದ್ದಾರೆ. ಶಿರಾದ ಈ ಸ್ಥಳವು ಡಿಜಿಸಿಎ ನಿಯಮಕ್ಕನುಗುಣವಾಗಿ ಬೆಂಗಳೂರು ವಿಮಾನ ನಿಲ್ದಾಣದಿಂದ ಸುಮಾರು 150 ಕಿ.ಮೀ ದೂರವಿದೆ. ಅಲ್ಲದೇ, ಇದರಿಂದ ಮಧ್ಯ ಮತ್ತು ಉತ್ತರ ಕರ್ನಾಟಕದ ಜನರಿಗೆ ಅಂತಾರಾಷ್ಟ್ರೀಯ ಪ್ರಯಾಣ ಹಾಗೂ ಸರಕು ಸಾಗಣೆಗೆ ಅನುಕೂಲವಾಗಲಿದೆ. ಕೈಗಾರಿಕೆ, ಉದ್ಯೋಗ, ಹೂಡಿಕೆ ಮತ್ತು ಪ್ರಾದೇಶಿಕ ಆರ್ಥಿಕ ಅಭಿವೃದ್ಧಿಗೆ ಉತ್ತೇಜನ ದೊರಕಲಿದೆ. ರಾಜ್ಯದ ಸಮತೋಲಿತ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದು ಹೇಳಿದ್ದಾರೆ.

## ಅನಿತಾ ಕುಮಾರಸ್ವಾಮಿ, ನಿಖಿಲ್ ಭೂಮಿ ವಶಕ್ಕೂ ಅಧಿಸೂಚನೆ

**ಬೆಂಗಳೂರು:** ಬಿಡದಿ ಟೌನ್‌ಶಿಪ್ ಜಟಾಪಟಿ ತೀವ್ರಗೊಂಡಿರುವ ಬೆನ್ನಲ್ಲೇ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಪತ್ನಿ ಅನಿತಾ ಕುಮಾರಸ್ವಾಮಿ ಹಾಗೂ ಪುತ್ರ ನಿಖಿಲ್ ಅವರಿಗೆ ಸೇರಿದ ಭೂಮಿ ವಶಕ್ಕೆ ರಾಜ್ಯ ಸರ್ಕಾರ ಅಂತಿಮ ಅಧಿಸೂಚನೆ ಹೊರಡಿಸಿದೆ. ಬಿಡದಿ ಟೌನ್‌ಶಿಪ್ ವ್ಯಾಪ್ತಿಯ 4 ಕಂದಾಯ ಗ್ರಾಮಗಳಾದ ಬನ್ನಿಗಿರಿ, ಅರ ಳಾಳುಸಂದ್ರ, ಕೆ.ಜಿ.ಗೊಲ್ಲರಪಾಳ್ಯ, ಹೊಸೂರು ಗ್ರಾಮಗಳ ಜಮೀನು ಸ್ವಾಧೀನಕ್ಕೆ ಇತ್ತೀಚಿಗೆ ನಗರಾಭಿವೃದ್ಧಿ ಇಲಾಖೆ ಎರಡನೇ ಹಂತದ ಭೂಸ್ವಾಧೀನಕ್ಕೆ ಅಂತಿಮ ಅಧಿ ಸೂಚನೆ ಹೊರಡಿಸಿದೆ. ಇದರಲ್ಲಿ ಕುಮಾರಸ್ವಾಮಿ ಕುಟುಂಬಕ್ಕೆ ಸೇರಿದ ಭೂಮಿಯೂ ಭೂಸ್ವಾಧೀನ ಪ್ರಕ್ರಿಯೆಯ ಅಂತಿಮ ಅಧಿಸೂಚನೆ ವ್ಯಾಪ್ತಿಗೆ ಒಳಪಟ್ಟಿದೆ. ಬಿಡದಿ ಹೋಬಳಿಯ ಹೊಸೂರು ಹಾಗೂ ಬನ್ನಿಗಿರಿ ಗ್ರಾಮಗಳ ಸರ್ವೇ ನಂಬರ್‌ಗಳಲ್ಲಿ ಎಚ್.ಡಿ.ಕುಮಾರಸ್ವಾಮಿ ಕುಟುಂಬದ ಒಟ್ಟು 35 ಎಕರೆ ಪುಟ 2ಕ್ಕೆ

# ಸೋನಮ್ ಆಸ್ಪತ್ರೆಗೆ ದಾಖಲು

**ನವದೆಹಲಿ:** ಕಳೆದ 20 ದಿನಗಳಿಂದ ಜಂತರ್ ಮಂತರ್‌ನಲ್ಲಿ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದ ಸಾಮಾಜಿಕ ಕಾರ್ಯಕರ್ತ ಸೋನಮ್ ವಾಂಗ್‌ಚುಕ್ ಆರೋಗ್ಯ ಪರಿಸ್ಥಿತಿ ಬಿಗಡಾಯಿಸಿದ ಹಿನ್ನೆಲೆಯಲ್ಲಿ ಶನಿವಾರ ಬೆಳಗ್ಗೆ ದೆಹಲಿ ಪೊಲೀಸರು ಬಲವಂತವಾಗಿ ಆಸ್ಪತ್ರೆಗೆ ಕರೆದೊಯ್ದಿದ್ದಾರೆ.

ವಾಂಗ್‌ಚುಕ್ ಆಸ್ಪತ್ರೆಗೆ ದಾಖಲಿಸಿದ ಬಳಿಕ ಪ್ರತಿಭಟನಾ ಸ್ಥಳದಲ್ಲಿ ಭಾರಿ ಬಂದೋಬಸ್ತ್ ಮಾಡಲಾಗಿದೆ. ನೀಟ್ ಪರೀಕ್ಷಾ ಪ್ರಶ್ನೆಪತ್ರಿಕೆ ಸೋರಿಕೆ ಹಿನ್ನೆಲೆಯಲ್ಲಿ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆಗೆ ಆಗ್ರಹಿಸಿ ವಾಂಗ್‌ಚುಕ್ ಕಳೆದ 20 ದಿನಗಳಿಂದ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದರು.

ವಾಂಗ್‌ಚುಕ್ ಮತ್ತು ಬೆಂಬಲಿಗರು



ಜುಲೈ 20ರಂದು ಸಂಸತ್ ವರೆಗೂ ಪಾದಯಾತ್ರೆ ನಡೆಸಲು ಯೋಜಿಸಿದ್ದರು. ಆದರೆ ಅದಕ್ಕೂ ಮುನ್ನ ಸೋನಮ್ ವಾಂಗ್‌ಚುಕ್ ಅವರ ಆರೋಗ್ಯ ಸ್ಥಿತಿ ಹದಗೆಟ್ಟ ಕಾರಣ ಅಗತ್ಯ ವೈದ್ಯಕೀಯ ಆರೈಕೆಗಾಗಿ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ

# ಮಹಾನಿಯರ ಮೌಲ್ಯಗಳನ್ನು ರೂಢಿಸಿಕೊಳ್ಳಿ: ಶ್ರೀ ಶಿವಸಿದ್ದೇಶ್ವರ ಸ್ವಾಮೀಜಿ

ರಾಮನಗರ: ಜಗಜ್ಯೋತಿ ಶ್ರೀ ಬಸವೇಶ್ವರರು, ಶ್ರೀ ರೇಣುಕಾಚಾರ್ಯರು ಮತ್ತು ಶ್ರೀ ಶಿವಕುಮಾರ ಮಹಸ್ವಾಮೀಜಿ ಅವರು ನಮ್ಮ ಮುಂದಿರುವ ಮೂವರು ಆದರ್ಶ ಪುರುಷರು. ಇವರ ಬದುಕು ಮತ್ತು ಮೌಲ್ಯಗಳು ನಮ್ಮ ಬದುಕಿಗೆ ಆದರ್ಶವಾಗಿವೆ ಎಂದು ತುಮಕೂರು ಸಿದ್ದಗಂಗಾ ಮಠದ ಶ್ರೀ ಶಿವಸಿದ್ದೇಶ್ವರ ಸ್ವಾಮೀಜಿ ತಿಳಿಸಿದರು.

ನಗರದ ಆರ್.ವಿ.ಸಿಎಸ್. ಕನ್‌ವೆನ್ಷನ್ ಹಾಲ್‌ನಲ್ಲಿ ಜಗದ್ಗುರು ರೇಣುಕಾಚಾರ್ಯ, ಜಗಜ್ಯೋತಿ ಬಸವೇಶ್ವರರು, ಸಿದ್ದಗಂಗಾ ಮಠದ ನಡೆದಾಡುವ ದೇವರು ಶಿವಕುಮಾರ ಮಾಹಾ ಸ್ವಾಮೀಜಿಯವರ ಸಂಸ್ಮರೋಣತ್ಸವದ ಅಂಗವಾಗಿ ನಡೆದ ಜಿಲ್ಲಾಮಟ್ಟದ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿದರು. ವಿದ್ಯಾರ್ಥಿಗಳು ಇಂತಹ ಮಹಾನ್ ಪುರಷರ ಮೌಲ್ಯಗಳು ಆದರ್ಶಗಳನ್ನು ಮೈಗೂಡಿಸಿಕೊಂಡು ಸದಾ ಅವರ ಆಶೀರ್ವಾದದಲ್ಲಿ ಬದುಕು ನಡೆಸಬೇಕು ಎಂದರು.

### ಬದಲಾವಣೆಯ ಶಕ್ತಿ ಶಿಕ್ಷಣಕ್ಕಿದೆ

ಜಗತ್ತನ್ನು ಬದಲಾಯಿಸುವ ಶಕ್ತಿ ಶಿಕ್ಷಣಕ್ಕಿದೆ. ಒಬ್ಬ ವ್ಯಕ್ತಿಯ ಚಾರಿತ್ರವನ್ನ ನಿರ್ಮಾಣ ಮಾಡುವುದಕ್ಕೆ, ಸಾಮರ್ಥ್ಯವನ್ನ ಹೆಚ್ಚಿಸುವುದಕ್ಕೆ, ಭವಿಷ್ಯವನ್ನ ರೂಪಿಸುವುದಕ್ಕೆ ಶಿಕ್ಷಣ ಅತ್ಯಂತ ಹೆಚ್ಚು ಮಹತ್ತರವಾಗಿದೆ. 12ನೇ



ಶತಮಾನದಲ್ಲಿ ಅಲ್ಲಮಪ್ರಭುಗಳು ಶಿಕ್ಷಣದ ಮಹತ್ವವನ್ನು ಸಾರಿದ್ದಾರೆ ಎಂದರು. ವಿದ್ಯಾರ್ಥಿಗಳು ಶಿಕ್ಷಣದ ಮೂಲಕ ಜ್ಞಾನದ ಸಂಪತ್ತು ಪಡೆಯಬೇಕು. ಇಂದು ಶಿಕ್ಷಣ ಅನಿವಾರ್ಯವಾಗಿದೆ. ಬದುಕಿನಲ್ಲಿ ಶಿಕ್ಷಣವೇ ಪ್ರಧಾನವಾಗಿದ್ದು ವಿದ್ಯಾರ್ಥಿಗಳು ಹಿರಿಯರ ಆದರ್ಶಗಳನ್ನು ಮೈಗೂಡಿಸಿಕೊಂಡು ಉತ್ತಮ ಶಿಕ್ಷಣ ಪಡೆದು ಹಡೆದ ತಂದೆ ತಾಯಿಗಳಿಗೆ ಕೀರ್ತಿ ತರಬೇಕು ಎಂದರು.

### ಪ್ರತಿಭಾ ಪುರಸ್ಕಾರಕ್ಕೆ ಗುರು, ಹಿರಿಯರ ಸಹಕಾರ

ವಿಶ್ವ ವೀರಶೈವ ಲಿಂಗಾಯತ ಒಕ್ಕೂಟದ ಜಿಲ್ಲಾಧ್ಯಕ್ಷ ಪೋಲೀಸ್ ರುದ್ರೇಶ್ ಮಾತನಾಡಿ ಜಗದ್ಗುರು ರೇಣುಕಾಚಾರ್ಯ, ಜಗಜ್ಯೋತಿ ಬಸವೇಶ್ವರರು, ಸಿದ್ದಗಂಗಾ ಮಠದ ನಡೆದಾಡುವ ದೇವರು ಶಿವಕುಮಾರ ಮಾಹಾ ಸ್ವಾಮೀಜಿಯವರ ಸಂಸ್ಮರೋಣತ್ಸವದ ಅಂಗವಾಗಿ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದ ವೀರಶೈವ ಲಿಂಗಾಯಿತ ಮಕ್ಕಳಿಗೆ ಜಿಲ್ಲಾ ಮಟ್ಟದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿ ಹರಗುರು ಚರಮೂರ್ತಿಗಳ, ಸಮಾಜದ ಹಿರಿಯರ, ಗಣ್ಯರ ಸಮ್ಮುಖದಲ್ಲಿ ನೆರವೇರಿಸಲಾಗಿದೆ. ಕಾರ್ಯಕ್ರಮಕ್ಕೆ ಆಗಮಿಸಿ ಯಶಸ್ವಿಯಾಗಲು ಸಹಕರಿಸಿದ ಎಲ್ಲರಿಗೂ ಧನ್ಯವಾದಗಳು ಎಂದು ತಿಳಿಸಿದರು. ಬೆಂಗಳೂರು ಸಮಾಧಾನ ಮಠಾಧ್ಯಕ್ಷರಾದ ಮೌನತಪಸ್ವಿ ಜಡೇ ಶಾಂತಲಿಂಗ ಸ್ವಾಮೀಜಿ ವೇದಿಕೆಯಲ್ಲಿ ಆಗಮಿಸಿ ಆಶೀರ್ವದಿಸಿದರು.

ರಾಮನಗರ ತಾಲ್ಲೂಕು ಯರೇಹಳ್ಳಿ ವನಸಿರಿ ಆಶ್ರಮದ ಶ್ರೀ ಶಂಕರ್ ಆರಾಧ್ಯ ಗುರೂಜಿ, ರಾಜ್ಯ ವೀರಶೈವ ಲಿಂಗಾಯಿತ ಒಕ್ಕೂಟದ ಅಧ್ಯಕ್ಷ ಜ್ಯೋತಿ ಪ್ರಕಾಶ ಮಿರ್ಜಿ, ಸೋಲೂರು ಎಂ.ಆರ್.ಆರ್. ನೇಚರ್ ಕ್ಯೂರ್ ಆರ್‌ಜಿಐ ಡಾ॥ ಆರ್. ಚೇತನ್‌ಕುಮಾರ್, ವೈದ್ಯೆ ಡಾ. ಪುಣ್ಯವತಿ ನಾಗರಾಜ್, ಕರ್ನಾಟಕ ನವ ನಿರ್ಮಾಣ ಸೇನೆ ರಾಜ್ಯಾಧ್ಯಕ್ಷ ಭೀಮಾಶಂಕರ್ ಪಾಟೀಲ್ ಮಾತನಾಡಿದರು. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಪ್ರಾಧಿಕಾರ ಮಾಜಿ ಅಧ್ಯಕ್ಷರಾದ ಎಸ್.ಆರ್. ನಾಗರಾಜು, ರಾಜಶೇಖರ್, ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಸಬ್ಬಕೆರೆ ಶಿವಲಿಂಗಪ್ಪ, ಎಪಿಎಂಸಿ ಮಾಜಿ ಅಧ್ಯಕ್ಷ ದೊರೆಸ್ವಾಮಿ ಮುಖಂಡರಾದ ಎ.ಜೆ. ಸುರೇಶ್, ವೇದಮೂರ್ತಿ, ಗುರುಮಾದಯ್ಯ, ವಿದ್ವಾನ್ ಚಂದ್ರಶೇಖರಯ್ಯ, ಮಹದೇವಶಾಸ್ತ್ರಿ, ಕುಮಾರ್, ರಾಜಶೇಖರ್, ಶಿವಲಿಂಗಪ್ರಸಾದ್, ಮಂಜುನಾಥ್, ಎಂ. ರೇವಣ್ಣ, ಉಮೇಶ್, ಶಿವಸ್ವಾಮಿ, ಪ್ರಭು, ಸಿದ್ದಲಿಂಗಮೂರ್ತಿ, ಶಿವಸ್ವಾಮಿ, ರವಿ, ವಿಜಯಕುಮಾರ್, ಸರ್ವೇಶ್, ಚಂದ್ರಣ್ಣ, ಸುಧಾ, ಯಶೋಧ ಇದ್ದರು.

### ಅಡ್ಡದಾರಿಗೆ ಎಳೆಯುವ ಸಾಧನಗಳಿಂದ ದೂರವಿರಿ

ಶಿವಗಂಗೆ ಮೇಲಣ ಗವೀಮಠಾಧ್ಯಕ್ಷ ಶ್ರೀ ಮಲಯ ಶಾಂತಮುನಿ ಶಿವಾಚಾರ್ಯ ಸ್ವಾಮೀಜಿ ಅವರು ಮಾತನಾಡಿ ಹತ್ತು ಇಪ್ಪತ್ತು ವರ್ಷಗಳ ಹಿಂದೆ ವಿದ್ಯಾರ್ಥಿಗಳ ಮನಸ್ಸನ್ನ ಬೇರೆಡೆ ಸೆಳಯುವ ಯಾವ ಸಾಧನಗಳು ಇರಲಿಲ್ಲ. ಆಗ ಪ್ರತಿಭಾವಂತರಾಗೋದು ಸುಲಭವಾಗಿತ್ತು. ಆದರೆ ಇಂದು ಮನಸ್ಸನ್ನು ಬೇರೆಡೆ ಸೆಳೆಯುವ ಸಾಧನಗಳಿವೆ, ಸಂಗತಿಗಳಿವೆ, ಅವುಗಳನ್ನೆಲ್ಲ ಮೆಟ್ಟಿ ನಿಂತು ಪ್ರತಿಭಾವಂತರಾಗಬೇಕು. ಇಂದು ಪ್ರತಿಭಾ ಪುರಸ್ಕಾರ ಪಡೆಯುತ್ತಿರುವ ವಿದ್ಯಾರ್ಥಿಗಳು ಸಹ ತಮ್ಮ ಗಮನವನ್ನು ಶಿಕ್ಷಣದಲ್ಲಿ ಕೇಂದ್ರೀಕರಿಸಿದ್ದರಿಂದಲೇ ಸಾಧಕರಾಗಿದ್ದಾರೆ ಎಂದರು. ಭವಿಷ್ಯದಲ್ಲಿಯೂ ಶಿಕ್ಷಣಾರ್ಜನೆಗೆ ಗಮನ ಕೇಂದ್ರೀಕರಿಸಿದರೆ, ವಿಶ್ವವಿದ್ಯಾಲಯದಿಂದ ಚಿನ್ನದ ಪದಕ ಪಡೆಯುವುದರಲ್ಲಿ ಸಂಶಯವಿಲ್ಲ ಎಂದರು. ನಿಯತ್ತಾಗಿ ಅಭ್ಯಾಸ ಮಾಡಿದರೆ ಬಂಗಾರವೇ ಹುಡುಕಿ ಕೊರಳಿಗೆ ಬರುತ್ತದೆ ಎಂದರು.

ಮೊದಲ ಪುಟದಿಂದ

### ಸರಳ ಬದುಕು

ಕುಟುಂಬದ ಜವಾಬ್ದಾರಿಯನ್ನು ಸಂಪೂರ್ಣವಾಗಿ ಹೊತ್ತುಕೊಂಡಿದ್ದರಿಂದ ದೇವೇಗೌಡರು ಸಾರ್ವಜನಿಕ ಬದುಕಿನ ಮೇಲೆ ಗಮನ ಹರಿಸಲು ಸಾಧ್ಯವಾಯಿತು. ರಾಜಕೀಯದಲ್ಲಿ ಏರಿಳಿತಗಳು ಸಹಜ. ಅಧಿಕಾರ ಕಳೆದುಕೊಂಡ ಸಂದರ್ಭಗಳಲ್ಲೂ, ಚುನಾವಣಾ ಸೋಲುಗಳಲ್ಲೂ ದೇವೇಗೌಡರಿಗೆ ಧೈರ್ಯ ತುಂಬಿದವರು ಚೆನ್ನಮ್ಮ. ಕುಟುಂಬದಲ್ಲಿ ಆತ್ಮವಿಶ್ವಾಸದ ವಾತಾವರಣವನ್ನ ಉಳಿಸುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದಾರೆ.

### ಹಲವು ಬಾರಿ ಸಾವು ಗೆದ್ದಿದ್ದರು

ಮಾರಕ ಕೊರೊನಾ ಸೋಂಕಿಗೂ ಚೆನ್ನಮ್ಮ ತುತ್ತಾಗಿದ್ದರು. ಅಲ್ಲದೇ, 2024-2025 ರಲ್ಲಿ ಎದೆ ಸಂಬಂಧಿತ ಸಮಸ್ಯೆ ಮತ್ತು ಉಸಿರಾಟದ ತೊಂದರೆಯಿಂದ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರು. ಹೀಗೆ, ಅಪಾಯದ ಸನ್ನಿವೇಶಗಳಿಂದ ಪಾರಾಗಿ ಬಂದಿದ್ದ ಚೆನ್ನಮ್ಮ ಶನಿವಾರ ಹೃದಯಾಘಾತದಿಂದ ನಿಧನರಾಗಿದ್ದಾರೆ.

### ಚೆನ್ನಮ್ಮ ವಿಧಿವಶ

ಪದ್ಮನಾಭನಗರದ ದೇವೇಗೌಡರ ನಿವಾಸಕ್ಕೆ ಪಾರ್ಥಿವ ಶರೀರ ತೆಗೆದುಕೊಂಡು ಹೋಗಲಿದ್ದಾರೆ. ಸೋಮವಾರ ಅಂತ್ಯ ಸಂಸ್ಕಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

### ಮತ್ತಷ್ಟು ವಿಳಂಬ ಸಾಧ್ಯತೆ

ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ತಿಳಿಸಿದ್ದಾರೆ. ಅಂತಿಮ ನಿರ್ಧಾರಕ್ಕೆ ಬರುವ ಮೊದಲು ಹಲವಾರು ಸುತ್ತಿನ ಚರ್ಚೆ ನಡೆಯಲಿದೆ. ಈ ಪ್ರಕ್ರಿಯೆಯು ಹೆಚ್ಚು ಸಮಯ ವಿಳಂಬವಾಗದಿರಬಹುದು. ಆದರೆ ಕನಿಷ್ಠ ಇನ್ನೊಂದು ವಾರ ಬೇಕಾಗುತ್ತದೆ ಎಂದು ಅವರು ಹೇಳಿದರು. ಭವಿಷ್ಯದ ರಾಜಕೀಯ ಹೊಂದಾಣಿಕೆ ಮತ್ತು ಮುಂಬರುವ ಚುನಾವಣೆ ದೃಷ್ಟಿಯಿಂದ ಕಾಂಗ್ರೆಸ್ ನಾಯಕತ್ವವು ಎರಡು ಅಥವಾ ಮೂರು ಸ್ಥಾನಗಳನ್ನು ಖಾಲಿ ಇಡಲು ಒಲವು ತೋರುತ್ತಿದೆ ಎಂದು ಮೂಲಗಳು ತಿಳಿಸಿವೆ.

### ರಾಜಕೀಯದಿಂದ ಸದಾ ದೂರ

ಪಾತ್ರ ಮಹತ್ವದ್ದಾಗಿದೆ. ಮಾಜಿ ಮುಖ್ಯಮಂತ್ರಿ ಎಚ್.ಡಿ ಕುಮಾರಸ್ವಾಮಿ ಸೇರಿದಂತೆ ಮಕ್ಕಳ ಬೆಳವಣಿಗೆಯಲ್ಲಿ ಚೆನ್ನಮ್ಮ ಅವರ ಪಾತ್ರ ಅಪಾರ.

ದೇವೇಗೌಡರ ನಿವಾಸಕ್ಕೆ ಬರುವ ರಾಜಕೀಯ ನಾಯಕರು, ಕಾರ್ಯಕರ್ತರು ಹಾಗೂ ಅತಿಥಿಗಳನ್ನು ಆತ್ಮೀಯವಾಗಿ ಬರಮಾಡಿಕೊಳ್ಳುವ ಗುಣಕ್ಕಾಗಿ ಚೆನ್ನಮ್ಮ ಅವರು ಪರಿಚಿತರಾಗಿದ್ದಾರೆ. ಅಧಿಕಾರದ ಆಡಂಬರಕ್ಕಿಂತ ಆತಿಥ್ಯಕ್ಕೆ ಹೆಚ್ಚಿನ ಮಹತ್ವ ನೀಡಿದ್ದು ಅವರ ಶ್ರೀಮಂತ ಗುಣ. ಚೆನ್ನಮ್ಮ ಅವರು ರಾಜಕೀಯ ಹೇಳಿಕೆಗಳಿಂದಲ್ಲ, ತಮ್ಮ ನಡವಳಿಕೆ ಮತ್ತು ಸರಳ ಜೀವನದಿಂದಲೇ ಜನರ ಗೌರವ ಗಳಿಸಿದ್ದಾರೆ. ರಾಜಕೀಯ ಕುಟುಂಬದ ಹಿರಿಯ ಸದಸ್ಯೆಯಾಗಿದ್ದರೂ, ಪ್ರಚಾರದ ಬೆಳಕಿನಿಂದ ದೂರ ಉಳಿಯುವುದು ಅವರ ವ್ಯಕ್ತಿತ್ವದ ದೊಡ್ಡ ವಿಶೇಷತೆ.

### ಸಂಸತ್ ಕಲಾಪ: ಶೂನ್ಯ ಸಂಪಾದನೆ

ಅರ್ಧಕ್ಕಿಂತ ಕಡಿಮೆ (ಶೇ.45.76) ಸಂಸದರು ಶೇ 90ರಿಂದ 100ರಷ್ಟು ಹಾಜರಾತಿ ಹೊಂದಿದ್ದರು. ಕೇವಲ 309 ಸಂಸದರು ಮಾತ್ರ ಶೇ 75ರಷ್ಟು ಹಾಗೂ ಮೂರನೇ ಒಂದು ಭಾಗಕ್ಕಿಂತಲೂ ಹೆಚ್ಚು ಸಂಸದರು ಕಲಾಪಗಳ ಕನಿಷ್ಠ ನಾಲ್ಕನೇ ಮೂರು ಭಾಗದಷ್ಟು ಅವಧಿಗೆ ಹಾಜರಾಗಲು ವಿಫಲರಾಗಿದ್ದಾರೆ.

### ಭೂಮಿ ವಶಕ್ಕೂ ಅಧಿಸೂಚನೆ

ಜಮೀನು ಈ ಯೋಜನೆಗೆ ಒಳಪಟ್ಟಿದೆ. ಅನಿತಾ ಕುಮಾ ರಸ್ವಾಮಿ ಹೆಸರಿನ ಲ್ಲಿರುವ 31 ಎಕರೆ ಜಮೀನು, ನಿಖಿಲ್ ಕುಮಾರಸ್ವಾಮಿ ಅವರ ಹೆಸರಿನಲ್ಲಿ ರುವ 4 ಎಕರೆ ಜಮೀನಿಗೂ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಹೊಸೂರಿನ 2,390 ಎಕರೆ, ಕೆಜಿ ಗೊಲ್ಲ ರಪಾಳ್ಯದ ಒಟ್ಟು 315 ಎಕರೆ, ಬನ್ನಿಗಿರಿ ಗ್ರಾಮದ 775 ಎಕರೆ, ಅರಳಾಳುಸಂದ್ರದ 1,460 ಎಕರೆ ಜಮೀನು ಭೂಸ್ವಾಧೀನ ಕ್ಕೊಳಪಟ್ಟಿದೆ ಎಂದು ನಗರಾಭಿವೃದ್ಧಿ ಇಲಾಖೆ (ಬಿಡಿಎ ಮತ್ತು ಬೆಂಗಳೂರು -1)ಯ ಅಧೀನ ಕಾರ್ಯದರ್ಶಿ ಆದೇಶ ಹೊರಡಿಸಿದ್ದಾರೆ.

### ಸೋನಮ್ ಆಸ್ಪತ್ರೆಗೆ ದಾಖಲು

ಎಂದು ದೆಹಲಿ ಪೊಲೀಸರು ತಿಳಿಸಿದ್ದಾರೆ. ದೆಹಲಿ ಹೈಕೋರ್ಟ್ನ ನಿರ್ದೇಶನದಂತೆ, ಆರೋಗ್ಯ ಹದಗೆಟ್ಟಿದ್ದ ವಾಂಗ್‌ಚುಕ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಪ್ರಕ್ರಿಯೆಗೆ ಕೆಲ ಪ್ರತಿಭಟನಾಕಾರರು ಅಡ್ಡಿಪಡಿಸಲು ಯತ್ನಿಸಿದ್ದರಿಂದ ಸ್ವಲ್ಪ ಕಾಲ ಗೊಂದಲದ ವಾತಾವರಣ ನಿರ್ಮಾಣವಾಗಿತ್ತು.

# ದಸರಾದಲ್ಲಿ ಕಂಬಳಕ್ಕೆ ವಿರೋಧ

## ಹೊಸ ಸಂಪ್ರದಾಯಗಳ ಸೇರ್ಪಡೆ ಬೇಡ । ಮೈಸೂರಿನಲ್ಲಿ ಬೃಹತ್ ಪ್ರತಿಭಟನೆ

ಮೈಸೂರು: ದಸರಾಕ್ಕೆ ಹೊಸ ಸೇರ್ಪಡೆ ಬೇಡವೇ ಬೇಡ ಎಂದು ಆಗ್ರಹಿಸಿ ಪರಿಸರವಾದಿಗಳು, ರೈತ ಸಂಘಟನೆಗಳು, ಕನ್ನಡಪರ ಹಾಗೂ ಪ್ರಗತಿಪರ ಸಂಘಟನೆಗಳು ಸಾತಗಳ್ಳಿ ಸಮೀಪ ಬೃಹತ್ ಪ್ರತಿಭಟನೆ ನಡೆಸಿದರು.

ನಗರದ ಸಾತಗಳ್ಳಿ ವಿಟಿಯು ಕಾಲೇಜು ಹಿಂಭಾಗದಲ್ಲಿ ಕಂಬಳ ಆಯೋಜನೆಗೆ ಉದ್ದೇಶಿತ ಜಾಗದಲ್ಲಿ ಜಮಾವಣೆಗೊಂಡ ಪರಿಸರಕ್ಕಾಗಿ ನಾವು ಸಂಘಟನೆ, ಕರ್ನಾಟಕ ರಾಜ್ಯ ರೈತ ಸಂಘ, ಕೆಆರ್ ಎಸ್ ಪಕ್ಷ, ಟೀಮ್ ಮೈಸೂರು, ಭೂಮಿತಾಯಿ ಹೋರಾಟ ಸಮಿತಿ, ದಲಿತ ಸಂಘರ್ಷ ಸಮಿತಿ, ಕನ್ನಡಪರ ಸಂಘಟನೆ ಸೇರಿದಂತೆ ಹಲವು ಸಂಘಟನೆಗಳು ಗಿಂಬಳಕ್ಕೆ ಕಂಬಳ ಬೇಡ, ದಸರೆ ಹೊಸ ಸೇರ್ಪಡೆ ಬೇಡ ಎಂಬಿತ್ಯಾದಿ ಘೋಷಣ ಫಲಕಗಳನ್ನು ಹಿಡಿದು ಆಕ್ರೋಶ ಹೊರಹಾಕಿದರು.

ಪರಿಸರಕ್ಕಾಗಿ ನಾವು ಸಂಘಟನೆಯ ರಾಜ್ಯಾಧ್ಯಕ್ಷ ಆದ ಮಾಜಿ ಶಾಸಕ ಎ.ಟಿ.ರಾಮಸ್ವಾಮಿ ಮಾತನಾಡಿ, ದಸರಾ ನಮ್ಮ ನಾಡಿನ ಸಂಸ್ಕೃತಿ, ಪರಂಪರೆ ಮತ್ತು ಧಾರ್ಮಿಕ ನಂಬಿಕೆಗಳ ಪ್ರತೀಕ. ಚಾಮುಂಡಿ ತಾಯಿ ಆಶೀರ್ವಾದದೊಂದಿಗೆ ನಡೆಯುವ ಈ ಮಹೋತ್ಸವದಲ್ಲಿ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಆದ್ಯತೆ ನೀಡಬೇಕು. ಆದರೆ ಸಾಂಸ್ಕೃತಿಕ ಕಾರ್ಯಕ್ರಮಗಳ ಹೆಸರಿನಲ್ಲಿ ಪರಿಸರಕ್ಕೆ ಹಾನಿಯಾಗುವ ಕಾರ್ಯಕ್ರಮಗಳನ್ನಲ್ಲ. ದುರ್ಯೋಧನ ತನ್ನ ಹಠದ ಹೇಗೆ ಸರ್ವನಾಶವಾದ ಅದೇ ರೀತಿಯಲ್ಲಿ ಜನರ ಅಭಿಮತವನ್ನು ಕಡೆಗಣಿಸಿ ಸರ್ಕಾರ ನಿರ್ಧಾರ ಕೈಗೊಂಡರೆ ಪರಿಣಾಮ ಕೆಟ್ಟದಾಗಲಿದೆ. ಪ್ರಜಾಪ್ರಭುತ್ವದಲ್ಲಿ ಜನರ ಅಭಿಪ್ರಾಯವೇ ಅಂತಿಮ. ಅಧಿಕಾರದ ಅಹಂಕಾರದಿಂದ ನಿರ್ಧಾರ ತೆಗೆದುಕೊಳ್ಳುವ ಬದಲು ನೆಲದ ಮೇಲೆ ನಿಂತು ಜನರ ಧ್ವನಿಯನ್ನು ಆಲಿಸಬೇಕು ಎಂದು ಹೇಳಿದರು.

ರಾಜ್ಯದಾದ್ಯಂತ ನೀರಿನ ಕೊರತೆ ಮತ್ತು ಬರಗಾಲದ ಪರಿಸ್ಥಿತಿ ಇದ್ದು, ಈ ಸಂದರ್ಭದಲ್ಲಿ ಕಂಬಳ ಆಯೋಜನೆಗೆ ಮುಂದಾಗಿರುವುದು ಖಂಡ ನೀಯ. ರೈತರು ಬೆಳೆ ಬೆಳೆಯಲು ನೀರಿಲ್ಲದೆ ಪರದಾಡುತ್ತಿದ್ದಾರೆ. ಒಂದು ಹನಿ ನೀರನ್ನು ಕೂಡ ವ್ಯರ್ಥ ವಾಡಬೇಡಿ ಎಂದು ಸರ್ಕಾರವೇ ಜನರಿಗೆ ಸಂದೇಶ ನೀಡುತ್ತಿದೆ. ಆದರೆ ಮತ್ತೊಂದೆಡೆ ಲಕ್ಷಾಂತರ ಲೀಟರ್ ನೀರನ್ನು ಬಳಸಿ ಕಂಬಳ ಆಯೋಜನೆಗೆ ಮುಂದಾಗಿರುವುದು ದ್ವಂದ್ವ ನೀತಿ ಎಂದು ಕಿಡಿಕಾರಿದರು.



ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ, ರಾಜ್ಯದಲ್ಲಿ ಬರಗಾಲ ಸಂಭವಿಸಿ ರಾಜ್ಯಕ್ಕೆ ಸಂಕಷ್ಟ ಎದುರಾಗಲಿದೆ. ನೀರಿನ ಕೊರತೆಯಿಂದ ರೈತರು ಬೆಳೆಗಳ ನಾಶವಾಗಲಿವೆ. ಕುಡಿಯುವ ನೀರಿಗೆ ಹಾಹಾಕಾರವಾಗಲಿದೆ. ಕಾವೇರಿ ನದಿ ನೀರಿನ ವಿಚಾರದಲ್ಲಿ ತಮಿಳುನಾಡು-ಕರ್ನಾಟಕದಲ್ಲಿ ಸಂಘರ್ಷಕ್ಕೆ ನಡೆಯುವ ಸಾಧ್ಯತೆ ಇದೆ. ಇಂತಹ ಸಂದರ್ಭದಲ್ಲಿ ಸಾರ್ವಜನಿಕ ಹಣವನ್ನು ದುಂದುವೆಚ್ಚ ಮಾಡುವ ಬದಲು ಸರಳ ದಸರಾ ಆಚರಿಸಿ ರಾಜ್ಯದ ಜನತೆಗೆ ನೆರವಾಗುವ ಕೆಲಸ ಮಾಡಲಿ ಎಂದರು. ಇತಿಹಾಸ ತಜ್ಞ ಪ್ರೊ.ಎನ್.ಎಸ್.ರಂಗರಾಜು ಮಾತನಾಡಿ, ವಿಜಯನಗರ ಕಾಲದಿಂದಲೂ ನಡೆದು ಬಂದಿರುವ ದಸರಾ ಮಹೋತ್ಸವದಲ್ಲಿ ಯಾವ ಸಂದರ್ಭದಲ್ಲಿಯೂ ಕಂಬಳ ಕ್ರೀಡೆಯನ್ನು ನಡೆಸಿಲ್ಲ. ಹೀಗಾಗಿ ಹೊಸ ಸಂಪ್ರದಾಯವನ್ನು ದಸರಾ ಸಂಸ್ಕೃತಿ ಎಂದು ತುರುಕಬೇಡಿ. ಮಂಗಳೂರಿನ ಕಂಬಳ ಆಯೋಜಿಸಲಿ. ನಾವು ಅಲ್ಲಿಯೇ ನೋಡುತ್ತೇವೆ ಎಂದು ತಿಳಿಸಿದರು. ದಲಿತ ಸಂಘರ್ಷ ಸಮಿತಿ ಮುಖಂಡ ಬೆಟ್ಟಯ್ಯ ಕೋಟೆ, ನೀರಾವರಿ ತಜ್ಞ ಯು.ಎನ್. ರವಿಕುಮಾರ್ ಮಾತನಾಡಿದರು. ಪ್ರತಿಭಟನೆಯಲ್ಲಿ ನಿವೃತ್ತ ಮೇಜರ್ ಜನರಲ್ ಒಂಬತ್ಕೆರೆ, ಪ್ರೊ ಕಾಳಚನ್ನೇಗೌಡ, ಸಂಸ್ಕೃತಿ ಚಿಂತಕ ಮ.ಗು.ಸದಾನಂದಯ್ಯ, ರಾಜ್ಯ ಪ್ರಧಾನ ಕಾರ್ಯದರ್ಶಿ ಪರಶುರಾಮೇಗೌಡ, ರವಿ ಬಳೆ, ಬಾನು ಪ್ರಶಾಂತ್, ಪ್ರೊ.ಮೈಸೂರ್ ಜನಾರ್ದನ, ಪ್ರಭಾ ನಂದೀಶ, ಲೀಲಾ ಶಿವಕುಮಾರ್, ಕೆ.ಜಿ.ಗುರುಸ್ವಾಮಿ, ಅಂಜನಾ, ಓಂ ಶಿವ ಚರಣ್, ಗಣೇಶ, ಸಿ.ರವಿ ಪ್ರಸಾದ್, ಐಶ್ವರ್ಯ ವಿ. ಶ್ರೀಧರ್, ತೇಜಸ್, ಹೊರೆಯಾಲ ದೊರೆಸ್ವಾಮಿ, ಸಾರ್ಥಕ್, ಮಹಾಂತೇಶ, ಸುಶ್ರೀತ್, ತೇಜಸ್ವಿ, ಪವನ್, ಗಾಯತ್ರಿ, ಶಶಿಕಲಾ ಚರಣ್, ಚೇತನ್, ಸೃಷ್ಟಿ, ರಾಜೇಶ್, ರಾಕೇಶ್, ಇಂದಿರಾ, ಜುಂಲಕ್ಷ್ಮೀ ಪಿ.ಗೌಡ, ಸುಲೋಚನ, ಲಕ್ಷ್ಮಣ್, ಗಂಟಯ್ಯ, ಸುಶೀಲ, ಸುಶ್ಮಿತಾ, ಪ್ರೊ.ನಭಿಜಾನ್, ರಾಮಸ್ವಾಮಿ, ಗೀತಾಂಜಲಿ, ರವಿಕಿರಣ್, ಶಶಿಕಲಾ, ನೇತ್ರಾವತಿ, ರವಿ ಪ್ರಸಾದ್, ಕರ್ನಾಟಕ ರಾಜ್ಯ ರೈತ ಸಂಘದ ಮೈಸೂರು ವಿಭಾಗದ ಪ್ರಧಾನ ಕಾರ್ಯದರ್ಶಿ ಹೊಸಕೋಟೆ ಬಸವರಾಜು, ಪಿ.ಮರಂಕಯ್ಯ, ಹೊಸೂರು ಕುಮಾರ್, ದಲಿತ ಸಂಘರ್ಷ ಸಮಿತಿಯ ಸಂಚಾಲಕ ಶಂಭುಲಿಂಗಸ್ವಾಮಿ, ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ರಾಜ್ಯ ಉಪಾಧ್ಯಕ್ಷ ಕೆ.ಎಸ್.ಸೋಮ ಸುಂದರ್, ಕಾರ್ಯನಿರ್ವಹಣಾ ಸದಸ್ಯ ಎಸ್.ನಾಗೇಂದ್ರ, ನಗರ ಘಟಕದ ಅಧ್ಯಕ್ಷ ನಾಗರಾಜ್, ಗ್ರಾಮಾಂತರ ಅಧ್ಯಕ್ಷ ಹರೀಶ್, ಮೈಸೂರು ಪ್ರಧಾನ ಕಾರ್ಯದರ್ಶಿ ಹರೀಶ್, ನಗರ ಘಟಕದ ಅಧ್ಯಕ್ಷ ರವಿ ಗೌಡ, ನಗರದ ಉಪಾಧ್ಯಕ್ಷ ಆನಂದ್, ನಗರ ಘಟಕದ ಮಹಿಳಾ ಅಧ್ಯಕ್ಷರಾದ ನಾಗಲಕ್ಷ್ಮೀ ಮತ್ತಿತರರು ಪಾಲ್ಗೊಂಡಿದ್ದರು.

### ಸಭೆಯ ಆಗ್ರಹ

ಮೈಸೂರು ದಸರಾದಲ್ಲಿ ಕಂಬಳ ಕ್ರೀಡೆ ಆಯೋಜಿಸಬಾರದು. ದಸರಾ ಮಹೋತ್ಸವದ ಎಲ್ಲಾ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ಹಾಗೂ ಸುವ್ಯವಸ್ಥಿತವಾಗಿ ನಡೆಸಬೇಕು. ಪಾಸ್ ವಿತರಣೆ ಸೇರಿ ಎಲ್ಲಾ ಆಡಳಿತಾತ್ಮಕ ಚಟುವಟಿಕೆಗಳು ಪಾರದರ್ಶಕವಾಗಿ ನಡೆಯಬೇಕು. ಸ್ಥಳೀಯ ಕಲೆಗಳು ಮತ್ತು ಕ್ರೀಡೆಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು. ಸ್ಥಳೀಯ ಕಲಾವಿದರಿಗೆ ಗೌರವಯುತ ಸಂಭಾವನೆ ನೀಡುವುದರ ಜೊತೆಗೆ ಅವರನ್ನು ಗೌರವದಿಂದ ನಡೆಸಿಕೊಳ್ಳಬೇಕು. ಬರಗಾಲದ ಸಂಕಷ್ಟಕ್ಕೆ ಸಿಲುಕಿರುವ ರೈತರಿಗೆ ಸರ್ಕಾರ ಅಗತ್ಯ ಪರಿಹಾರ ಮತ್ತು ನೆರವು ನೀಡಬೇಕು. ಲಡಾಖ್ನ ಪರಿಸರ ಹೋರಾಟಗಾರ ಸೋನಮ್ ವಾಂಗ್ಚುಕ್ ಕಳೆದ 21 ದಿನಗಳಿಂದ ಉಪವಾಸ ಸತ್ಯಾಗ್ರಹ ನಡೆಸುತ್ತಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಕೂಡಲೇ ಅವರೊಂದಿಗೆ ಮಾತುಕತೆ ನಡೆಸಿ, ಪ್ರಜಾಪ್ರಭುತ್ವದ ಸಂವಾದದ ಮೂಲಕ ಸಮಸ್ಯೆ ಬಗೆಹರಿಸಬೇಕು ಎಂದು ಆಗ್ರಹಿಸಿದರು.

ಮೊದಲ ಪುಟದಿಂದ

### ಏರ್‌ಪೋರ್ಟ್ ನಿರ್ಮಿಸಿ

ಮತ್ತೊಂದು ವಿಮಾನ ನಿಲ್ದಾಣವನ್ನು ಬೆಂಗಳೂರಿನ ಸಮೀಪ ನಿರ್ಮಿಸಿದರೆ ಉತ್ತರ ಮತ್ತು ಮಧ್ಯ ಕರ್ನಾಟಕದ ಅಭಿವೃದ್ಧಿಗೆ ನ್ಯಾಯ ಸಂದಂತೆ ಆಗುವುದಿಲ್ಲ ಎಂದು ಅವರು ತಿಳಿಸಿದರು.

ತುಮಕೂರಿನ ಶಿರಾ ಬಳಿ ನೂತನ ವಿಮಾನ ನಿಲ್ದಾಣ ನಿರ್ಮಾಣ ಮಾಡುವುದರಿಂದ ಮಧ್ಯ ಕರ್ನಾಟಕ ಭಾಗ ಪ್ರಗತಿ ಪಥದಲ್ಲಿ ಸಾಗಲು ಸಾಧ್ಯವಾಗಲಿದೆ. ಶಿರಾ ಸುತ್ತುಮುತ್ತ ಮುಂಬೈ- ಬೆಂಗಳೂರು ಕೈಗಾರಿಕಾ ಕಾರಿಡಾರ್, ರಾಷ್ಟ್ರೀಯ ಹೂಡಿಕೆ ಮತ್ತು ಉತ್ಪಾದನಾ ವಲಯ, ಚೆನ್ನೈ- ಬೆಂಗಳೂರು ಕೈಗಾರಿಕಾ ಕಾರಿಡಾರ್ ಹಾಗೂ ಕೆಐಎಡಿಬಿ ಕೈಗಾರಿಕಾ ಪ್ರದೇಶಗಳಿವೆ. ಹಲವು ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿಗಳು ಹಾಗೂ ಹೊಸ ರೈಲು ಮಾರ್ಗಗಳ ಸಾರಿಗೆ ಸಂಪರ್ಕ ಜಾಲ ಬಲವಾಗಿದೆ ಎಂದು ತಿಳಿಸಿದ್ದಾರೆ. ರಾಜ್ಯದ ಸಮಗ್ರ ಅಭಿವೃದ್ಧಿಯ ಹಿತದೃಷ್ಟಿಯಿಂದ ತುಮಕೂರಿನ ಶಿರಾ ಭಾಗದಲ್ಲಿಯೇ ನೂತನ ವಿಮಾನ ನಿಲ್ದಾಣ ನಿರ್ಮಿಸುವಂತೆ ಕೇಂದ್ರ ವಿಮಾನಯಾನ ಸಚಿವರನ್ನು ಒತ್ತಾಯಿಸಿದ್ದೇನೆ. ರಾಜ್ಯ ಸರ್ಕಾರವು ರಾಜ್ಯದ ಸಮಗ್ರ ಅಭಿವೃದ್ಧಿಯನ್ನೇ ಮಾನದಂಡವನ್ನಾಗಿ ಇಟ್ಟುಕೊಂಡು ಚಿಂತನೆ ನಡೆಸಬೇಕೆಂದು ಮನವಿ ಮಾಡಿರುವುದಾಗಿ ವಿ.ಸೋಮಣ್ಣ ತಿಳಿಸಿದ್ದಾರೆ.

## ಆರೋಗ್ಯಕ್ಕೆ ಯೋಗ, ವ್ಯಾಯಾಮ ಮುಖ್ಯ: ಶ್ರೀವತ್ಸ

ಮೈಸೂರು: ಆರೋಗ್ಯ ಕಾಪಾಡಿಕೊಳ್ಳಲು ಆಹಾರ, ಯೋಗ, ವ್ಯಾಯಾಮ ಮುಖ್ಯ ಎಂದು ಶಾಸಕ ಟಿ.ಎಸ್.ಶ್ರೀವತ್ಸ ಅಭಿಪ್ರಾಯಪಟ್ಟರು.

ಮೈಸೂರು ವಿವೇಕಾನಂದ ಯೋಗ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯು ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಶನಿವಾರ ಏರ್ಪಡಿಸಿದ್ದ ಘಟಿಕೋತ್ಸವ ಉದ್ಘಾಟಿಸಿ, ಪದವಿ ಪ್ರದಾನ ಮಾಡಿ ಅವರು ಮಾತನಾಡಿ, ನಾನು ಕೂಡ ಯೋಗ ಕಲಿಯಬೇಕು ಎಂಬ ಹಂಬಲ ಬಹಳ ದಿನದಿಂದ ಇತ್ತು. ಕಳೆದ ನಾಲ್ಕು ತಿಂಗಳಿಂದ ಯೋಗಾಭ್ಯಾಸದಲ್ಲಿ ತೊಡಗಿದ್ದೇನೆ. ಆರೋಗ್ಯಕ್ಕೆ ಆಹಾರದ ಜೊತೆಗೆ ನಡಿಗೆ, ಯೋಗ, ವ್ಯಾಯಾಮ ಅಗತ್ಯ ಎಂದರು.

ಯೋಗ ಎಂದರೇ ಮೈಸೂರು, ಮೈಸೂರು ಎಂದರೇ ಯೋಗ ಎಂಬಂತೆ ಪ್ರಸಿದ್ಧಿಯಾಗಿದೆ. ಇಲ್ಲಿ ಯೋಗ ಕಲಿತವರು ಬೇರೆ ಬೇರೆ ದೇಶಗಳಿಗೆ ಹೋಗಿ ಯೋಗ ಹೇಳಿಕೊಡುವ ಹಂತಕ್ಕೆ ತಲುಪಿದ್ದಾರೆ. ಇದ ಲ್ಲದೇ ಇಲ್ಲಿ ಸಂಗೀತ, ಭರತನಾಟ್ಯ, ಆಗಮ, ವೇದಾ ಧ್ಯಯನ, ಅರ್ಚಕ- ಪೌರೋಹಿತ್ಯ ವೃತ್ತಿಗೆ ಬೇಕಾದ ಶಿಕ್ಷಣವನ್ನು ಕೂಡ ಕಲಿಸಲಾಗುತ್ತಿದೆ. ಯೋಗ ಮಾತ್ರವ ಲ್ಲದೇ ಉತ್ತರ ಕರ್ನಾಟಕದ ಭಾಗಗಳಿಂದಲೂ ಸುಮಾರು ಒಂದು ಸಾವಿರ ಮಂದಿ ಮೈಸೂರಿಗೆ ಬಂದು ವೇದಾ ಧ್ಯಯನ ಮಾಡುತ್ತಿದ್ದಾರೆ. ಸನಾತನ ಧರ್ಮ ನಶಿಸಿ ಹೋಗುತ್ತಿದೆ. ಅದನ್ನು ಯಾರೂ ಕಲಿಯಲು ಮುಂದಾಗುತ್ತಿಲ್ಲ ಎಂಬ ಪರಿಸ್ಥಿತಿಯಲ್ಲಿ ಈ ರೀತಿಯ ಬೆಳವಣಿಗೆ ಶ್ಲಾಘನೀಯ ಎಂದರು.

ಆಧ್ಯಾತ್ಮಿಕ ಚಿಂತಕಿ ಸುಚರಿತಾ ಮಾತಾಜಿ ಸಾನ್ನಿಧ್ಯ ವಹಿಸಿದ್ದರು.



ಸಂಸ್ಥೆಯ ಅಧ್ಯಕ್ಷ ಡಾ.ಪಿ.ಎನ್. ಗಣೇಶಕು ಮಾರ್ ಪ್ರಾಸ್ತಾವಿಕ ಭಾಷಣ ಮಾಡಿದರು. ಸರ್ಕಾರಿ ಆಯುರ್ವೇದ ಮಹಾವಿದ್ಯಾಲಯ ಹಾಗೂ ಆಸ್ಪತ್ರೆಯ ಆರ್‌ಎಂಒ ಡಾ.ಎಚ್.. ಶಶಿರೇಖಾ ಪ್ರಧಾನ ಭಾಷಣ ಮಾಡಿದರು. ಎಂ.ವಿ. ಯೋಗಾಸ್ ಕಾರ್ಯದರ್ಶಿ ಭಾಸ್ಕರ್, ಹಿರಿಯ ಉಪಾಧ್ಯಕ್ಷ ದೇವಪ್ಪ, ಮೈಸೂರು ಯೋಗ ಒಕ್ಕೂಟದ ಯೋಗಕುಮಾರ್, ಶ್ರೀ ರಾಘವೇಂದ್ರ ಕೇಂದ್ರದ ಎನ್. ಪಶುಪತಿ ಮೊದಲಾದವರು ಇದ್ದರು.

### ಪ್ರಶಸ್ತಿ ಪುರಸ್ಕೃತರು

ನಿವೃತ್ತ ಡಿವೈಎಸ್ಪಿ ಉಮೇಶ್ ಗಣಪತಿ ಶೇಟ್, ಹಿರಿಯ ಪತ್ರಕರ್ತರಾದ ಅಂಶಿ ಪ್ರಸನ್ನಕುಮಾರ್, ಐತಿಚಂಡ ರಮೇಶ್ ಉತ್ತಪ್ಪ, ನಿವೃತ್ತ ಡಿಡಿಪಿಐ ಮಂಜುಳಾ, ದುಬೈ ಯೋಗ ಶಿಕ್ಷಕಿ ಪಿ. ಭಾಗ್ಯಾ, ನಿವೃತ್ತ ವಾಣಿಜ್ಯ ತೆರಿಗೆ ಅಧಿಕಾರಿ ಎಂ. ಮೋಹನ್- ರೇಖಾ ದಂಪತಿ, ಮಂಡ್ಯ ಸಹಾಯಕ ಜೇಲರ್ ಎಂ.ಎಸ್. ಕುಮಾರ್ ಗೀತಾ ದಂಪತಿ, ಯೋಗ ಪ್ರಚಾರಕ ವೆಂಕಟೇಶ್ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಸಹಕಾರ ವಿಭಾಗದ ಜಿಲ್ಲಾ ವಾರ್ಷಿಕ ಮಹಾಸಭೆ

# ಹಣ ಮುಂದೆ ನಶಿಸಿದ ಮೌಲ್ಯಯುತ ರಾಜಕಾರಣ: ಕಿಮ್ಮನೆ ರತ್ನಾಕರ್

ಮೈಸೂರು: ಮೌಲ್ಯಯುತವಾದಂತಹ ರಾಜಕಾರಣದ ವ್ಯವಸ್ಥೆಯು ಇಂದು ಸಾಕ್ಷರತೆ ಪಡೆದಿರುವಂತಹ ವಿದ್ಯಾವಂತರಿಂದಲೇ ಹಾಳಾಗುತ್ತಿದೆ, ಹಣ, ನಂಬಿಕೆ ದ್ರೋಹದ ಮುಂದೆ ಮೌಲ್ಯಯುತ ರಾಜಕಾರಣ ನಶಿಸುತ್ತಿದೆ ಎಂದು ಮಾಜಿ ಸಚಿವ ಕಿಮ್ಮನೆ ರತ್ನಾಕರ್ ವಿಷಾಧ ವ್ಯಕ್ತಪಡಿಸಿದರು.

ನಗರದ ಕಾಂಗ್ರೆಸ್ ಭವನದಲ್ಲಿ ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಸಹಕಾರ ವಿಭಾಗದ ವತಿಯಿಂದ ಶನಿವಾರ ನಡೆದ ಮೈಸೂರು ಸಹಕಾರ ವಿಭಾಗದ ಜಿಲ್ಲಾ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ ಮೌಲ್ಯಯುತ ರಾಜಕಾರಣದ ಅನಿವಾರ್ಯತೆ ವಿಚಾರದ ಬಗ್ಗೆ ಮಾತನಾಡಿದರು. ತನ್ನ ಬದುಕಿಗಾಗಿ ಹೋರಾಟ ಮಾಡುತ್ತಿರುವರಿಂದಾಲಿ, ಗದ್ದೆಯಲ್ಲಿ ದುಡಿಯುವವರು, ಕಸ ಗುಡಿಸುವವರಾಗಲಿ ತಪ್ಪು ಮಾಡುತ್ತಿಲ್ಲ. ತಿಳಿದವರಿಂದ ವ್ಯವಸ್ಥೆ ಹಾಳಾಗುತ್ತಿದೆ. ಅವರಿಗೆ ಭವಿಷ್ಯ ಏನು ಎಂದು ಗೊತ್ತಿದೆ, ರಾಜಕೀಯ ಭವಿಷ್ಯ ಏನೆಂದು ತಿಳಿದಿದೆ. ತನ್ನ ಒಳಿತಿಗಾಗಿ, ತನ್ನ ಲಾಭಕ್ಕಾಗಿ ಹಾಗೂ ತನ್ನ ಹುದ್ದೆಯನ್ನು ಪಡೆದುಕೊಳ್ಳಲು ಇಂದು ಕಡೆಯಿದ್ದರೆ, ನಾಳೆ ಮತ್ತೊಂದು ಕಡೆ ಇರುತ್ತಾರೆ ಎಂದು ತಿಳಿಸಿದರು.

ಗಾಂಧಿ, ಅಂಬೇಡ್ಕರ್, ನೆಹರು ಅವರ ವಿಚಾರಧಾರೆಗಳನ್ನು ಓದದೆ ಇದ್ದರೆ ರಾಷ್ಟ್ರೀಯ ಜನತಾ ಪಾರ್ಟಿಯನ್ನು ಮತ್ತು ಆ ನಿಟ್ಟಿನಲ್ಲಿ ಯೋಚನೆ ಮಾಡುವವರನ್ನು ಹಿಂದೆ ಸರಿಸಲು ಆಗುವುದಿಲ್ಲ. ಗಾಂಧಿ, ಅಂಬೇಡ್ಕರ್ ಮತ್ತು ನೆಹರು ಅವರ ವಿಚಾರಗಳು ಮುಂದಿನ



ಭವಿಷ್ಯಕ್ಕೆ ಹಾಗೂ ವರ್ತಮಾನಕ್ಕೆ ಬೇಕಾದ ವಿಚಾರಧಾರೆಗಳು ಅವರ ಬಳಿ ಸಿಗಲಿದೆ. ಈ ಪ್ರಪಂಚ ಇರುವವರೆಗೆ ಗಾಂಧೀಜಿ ಇರುತ್ತಾರೆ. ಅದು ಅವರ ವಿಚಾರಧಾರೆಗಳಿಂದ ಅವರ ವಿಚಾರಧಾರೆಗಳನ್ನು ನಾವು ಅಧ್ಯಯನ ಮಾಡಬೇಕು. ಬಹಳಷ್ಟು ಜನರು ಗಾಂಧಿs ಓದಿಕೊಂಡಿಲ್ಲ. ಟಿವಿ, ಪೇಪರ್ ನೋಡಿಕೊಂಡು ಮಾಡುತ್ತಾರೆ. ಆದರೆ ಅದರಲ್ಲಿ ಮೂಲ ಗ್ರಂಥದ ವೈಚಾರಿಕತೆಗಳು ಅದರಲ್ಲಿ ಇಲ್ಲ. ಸಾಂಸ್ಕೃತಿಕ ನಗರಿ ಮೈಸರಿನಲ್ಲಿ ಸಾಹಿತ್ಯದ ಜತೆಗೆ, ಪ್ರಗತಿಪರ ಚಿಂತನೆ ಬಗ್ಗೆ ಸೇರಿದಂತೆ ಹಲವಾರು ವಿಚಾರಧಾರೆಗಳು ಹುಟ್ಟಿಕೊಂಡಿವೆ. ಶಾಂತವೇರಿ ಗೋಪಾಲಗೌಡರಿಂದ ನಾವು ಪ್ರಭಾವಿತನಾಗಿದ್ದೆನೆ. ಮೂರು ಬಾರಿ ಎಂಎಲ್ ಎ ಆದರೂ ಕೂಡ ಸಚಿವರಾಗಲಿಲ್ಲ, ಮುಖ್ಯಮಂತ್ರಿಯಾಗಲಿಲ್ಲ, ವಿರೋಧ ಪಕ್ಷದ ನಾಯಕರಾಗಲಿಲ್ಲ. ಗೋಪಲಗೌಡರಿಗೆ ಅದ್ಭುತವಾದ ಸಾಹಿತ್ಯ ಅಭಿರುಚಿ ಇತ್ತು. ಅವರು ಕನ್ನಡವನ್ನು ಅಧ್ಯಯನ ಮಾಡುವುದರ ಜತೆಗೆ ಅದ್ಭುತವಾಗಿ ಮಾತನಾಡುತ್ತಿದ್ದರು. ಆದರೆ, ಇಂತಹ ವ್ಯಕ್ತಿಗೆ ಇಂದಿಗೂ ಕೂಡ ಅವರ ಹೆಸರಿನಲ್ಲಿ ಒಂದು ಸೆಂಟಿಮೀಟರ್ ಜಾಗವಿಲ್ಲ ಎಂದು ಹೇಳಿದರು.

ಹಣ ಮತ್ತು ಹುದ್ದೆಯ ಹಿಂದೆ ಹೋಗಬಾರದು. ಗಾಂಧಿ, ಅಂಬೇಡ್ಕರ್ ಅವರ ವಿಚಾರ ಧಾರೆಗಳನ್ನು ಅನುಸರಿಸದಿದ್ದರೆ ಕಾಂಗ್ರೆಸ್ ಕಟ್ಟಲು ಸಾಧ್ಯವಿಲ್ಲ. ಹಿಂದೂ ಧರ್ಮದಲ್ಲಿ 4 ಸಾವಿರಲ್ಕೂ ಹೆಚ್ಚು ಧರ್ಮಗಳಿವೆ ಅವುಗಳನ್ನು ಒಟ್ಟಿಗೆ ತೆಗೆದುಕೊಂಡಲು ಹೋಗಬೇಕಾದರೆ ನಮ್ಮ ಪುಟ್ಟ ಹೃದಯವನ್ನು ವಿಶಾಲ ಹೃದಯವನ್ನಾಗಿ ಮಾಡಿಕೊಳ್ಳಬೇಕು ಎಂದರು.

ಕರ್ನಾಟಕ ಪ್ರದೇಶ್ ಕಾಂಗ್ರೆಸ್ ಸಮಿತಿಯ ಸಹಕಾರ ವಿಭಾಗದ ರಾಜ್ಯಾಧ್ಯಕ್ಷ ಧನರಾಜ್ ತಾಳಂಪಳ್ಳಿ ಮಾತನಾಡಿ ಇಡೀ ಕರ್ನಾಟಕದ್ದಲ್ಲಿ ಮೈಸೂರು ಜಿಲ್ಲಾ ಕಾಂಗ್ರೆಸ್ ಸಹಕಾರ ವಿಭಾಗ ಅತ್ಯಂತ ಪ್ರಭಾವಶಾಲಿಯಾಗಿ ಕೆಲಸ ಮಾಡುತ್ತಿದೆ ಎಂದು ಹೇಳಿ 20 ಸ್ವಸಹಾಯ ಸಂಘ ಹುಟ್ಟುಹಾಕಿ ಅಕ್ಕ ಕ್ಯಾಂಟೀನ್ ಸ್ಥಾಪನೆ ಮಾಡಿ ಅದಕ್ಕೆ ಬೇಕಾದ ಎಲ್ಲ ಸಹಕಾರವನ್ನು ನಮ್ಮ ಸರ್ಕಾರದಿಂದ ಒದಗಿಸಿ ಕೊಡುತ್ತೇನೆ ಎಂದು ಭರವಸೆ ನೀಡಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಕಾಂಗ್ರೆಸ್ ಸಮತಿಯ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್, ಸಹಕಾರ ವಿಭಾಗದ ಜಿಲ್ಲಾಧ್ಯಕ್ಷರಾದ ಸಿದ್ದಯ್ಯ, ಕಾರ್ಯಾಧ್ಯಕ್ಷರಾದ ಸಂತೋಷ್ ಮೂಳೆಯುರು, ಮಹಿಳಾ ವಿಭಾಗದ ಅಧ್ಯಕ್ಷೆ ತಾರಾ ಕುಮಾರ್, ಜಿಲ್ಲಾ ಕಾಂಗ್ರೆಸ್ ಸಮಿತಿ ಉಪಾಧ್ಯಕ್ಷ ಹೆಡತಲೆ ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಎಂ.ಶಿವಪ್ರಸಾದ್, ಡಿಸಿಸಿ ಮಹಿಳಾ ವಿಭಾಗದ ಅಧ್ಯಕ್ಷರಾದ ಪ್ರೇಮಶಂಕರ್, ಜಿಲ್ಲಾ ಪಂಚಾಯತಿ ಮಾಜಿ ಸದಸ್ಯರಾದ ತಲಕಾಡು ಮಂಜುನಾಥ್, ಡಿಸಿಸಿ ಹಿರಿಯ ಕಾರ್ಯದರ್ಶಿ ಎನ್. ಆರ್.ಎಂ.ಮಂಜು, ಪ್ರವೀಣ್ ಸಿದ್ಲಿಂಗಪುರ ಇತರರು ಇದ್ದರು.

# ವಿದೇಶಿ ಕೊಡುಗೆ ನಿಯಂತ್ರಣ ತಿದ್ದುಪಡಿ ರದ್ದಿಗೆ ಆಗ್ರಹ

ಮೈಸೂರು: ಇತ್ತೀಚೆಗೆ ಅಧಿಸೂಚಿತಗೊಂಡಿರುವ ವಿದೇಶೀ ಕೊಡುಗೆ ನಿಯಂತ್ರಣ ತಿದ್ದುಪಡಿಯಿಂದಾಗಿ ದೇಶಾದ್ಯಂತ ಕಾರ್ಯ ನಿರ್ವಹಿಸುತ್ತಿರುವ ಸರ್ಕಾರೇತರ ಸಂಸ್ಥೆಗಳು ಹಾಗೂ ದತ್ತಿ ಸಂಸ್ಥೆಗಳ ಮೇಲೆ ಗಂಭೀರ ಪರಿಣಾಮವುಂಟಾಗಬಹುದಾಗಿದೆ. ಹೀಗಾಗಿ ಸರ್ಕಾರ




ಅದನ್ನು ರದ್ದು ಪಡಿಸಬೇಕೆಂದು ಇಂಡಿಯಾ ಬೈಬಲ್ ಲಿಟರೇಚರ್ ಅಪೋಸ್ಟೋಲೇಸ್ ಸಂಸ್ಥೆಯ ಸಂಸ್ಥಾಪಕ ನಿರ್ದೇಶಕ ಬೆಂಜಮಿನ್ ವಾಸ್ ಸರ್ಕಾರಕ್ಕೆ ಮನವಿ ಮಾಡಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ವಿಶೇಷವಾಗಿ ಅನೇಕ ನೋಂದಣಿಗಳ ಕಡ್ಡಾಯ, ಸಂಸ್ಥೆಗಳ ಮೇಲಿನ ಚಟುವಟಿಕೆ ಮೇಲಿನ ನಿರ್ಬಂಧ ಹಾಗೂ ವಿದೇಶೀ ನೆರವು ಪಡೆಯುವ ಎನ್‌ಜಿಓಗಳಿಗೆ ವಿಧಿಸಿರುವ ಅರ್ಹತಾ ಮಾನದಂಡ ಆತಂಕಕಾರಿಯಾಗಿವೆ. ಇದ ರಿಂದಾಗಿ ಪ್ರಕೃತಿ ವಿಕೋಪ, ತುರ್ತು ಸಂದರ್ಭಗಳಲ್ಲಿ ವಿದೇಶಗಳಿಂದ ನೆರವು ಪಡೆಯುವುದಕ್ಕೆ ಅಡ್ಡಿಯುಂಟಾಗಿ, ಸಂತ್ರಸ್ತರಿಗೆ ಸಕಾಲಿಕ ನೆರವು ಸಿಗದಂತಾಗಬಹುದಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಹೊಸ ನಿಯಮಗಳು ದತ್ತಿ ಸಂಸ್ಥೆಗಳ ಕಾರ್ಯ ನಿರ್ವಹಣೆಯನ್ನು ಸಂಕೀರ್ಣಗೊಳಿಸಬಹುದು, ಸಂಸ್ಥೆಗಳು ತಮ್ಮ ಚಟುವಟಿಕೆಗಳನ್ನು ಅನುಮೋದಿತ ಉದ್ದೇಶಗಳಿಗೆ ಮಾತ್ರ ಸೀಮಿತಗೊಳಿಸಿಕೊಳ್ಳಬೇಕಾಗಬಹುದಾಗಿದೆ. ಹೆಚ್ಚುವರಿ ರೀತಿಯ ಸೇವೆ ನೀಡಲು ಸಂಸ್ಥೆಗಳು ಪ್ರತ್ಯೇಕ ಅನುಮೋದನೆ ಪಡೆಯಬೇಕಾಗುತ್ತದೆ. ವಿವಿಧ ರಾಜ್ಯಗಳಲ್ಲಿ ಪ್ರತ್ಯೇಕ ನೋಂದಣಿ ಕಡ್ಡಾಯಗೊಳಿಸಿರುವುದು ಹೆಚ್ಚುವರಿ ಆಡಳಿತಾತ್ಮಕ ಹೊರೆಯಾಗಲಿದೆ. ಹೀಗಾಗಿ ಕೇಂದ್ರ ಸರ್ಕಾರ ಈ ತಿದ್ದುಪಡಿ ವಾಪಸು ಪಡೆಯಬೇಕೆಂದು ಕೋರಿದರು. ಲೋಜಿಸ್ ಇದ್ದರು.


## ಪಟ್ಟಣ ಪಂಚಾಯಿತಿ ಕಾರ್ಯಾಲಯ, ಬೋಗಾದಿ

ಮೈಸೂರು ಜಿಲ್ಲೆ – 570026 , ದೂ: 0821–2331099

ವೆಬ್‌ಸೈಟ್: bogaditown.mrc.gov.in ಇ–ಮೇಲ್: itstaff_ulb_bogadi@yaoo.com

ಸಂ.: ಪ.ಪಂ.ಬೋಗಾದಿ/ಆ.ಶಾ/ಟೆಂಡರ್/ಸಿ.ಆರ್–04/2026–27 ದಿನಾಂಕ: 17.07.2026

**ಟೆಂಡರ್ ಪ್ರಕಟಣೆ** (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಬೋಗಾದಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ 2026–27ನೇ ಸಾಲಿನ ಎಸ್.ಎಫ್.ಸಿ. ಕುಡಿಯುವ ನೀರಿನ ಅನುದಾನ ಮತ್ತು ಪಟ್ಟಣ ಪಂಚಾಯಿತಿ ಸಾಮಾನ್ಯ ಅನುದಾನದಡಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999 ಮತ್ತು ನಿಯಮಗಳು 2000 ದಂತೆ ಅರ್ಹ ಟೆಂಡರ್‌ದಾರರುಗಳಿಂದ **https://kppp.karnataka.gov.in** ಪೋರ್ಟಲ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು ಆಸಕ್ತ ಅರ್ಹ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿರುತ್ತದೆ.

1) ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ: **01.08.2026ರ ಸಂಜೆ 5.30 ಗಂಟೆಯವರೆಗೆ. 2)** ಟೆಂಡರ್ ತೆರೆಯುವ **ದಿನಾಂಕ: 03.08.2026ರ ಬೆಳಿಗ್ಗೆ 11.30 ಗಂಟೆಗೆ** ಅಥವಾ ಮುಂದೆ ಸೂಚಿಸುವ ದಿನಾಂಕದಂದು ತೆರೆಯಲಾಗುವುದು.

| ಕ್ರ. ಸಂ. | ವಿವರ | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) | ಇ.ಎಂ.ಡಿ ಮೊತ್ತ (ರೂ. ಗಳಲ್ಲಿ) |
|---|---|---|---|
| 1 | DMA/2026-27/OW/WORK_INDENT60187 | 14.95 | 37,375/- |
| 2 | DMA/2026-27/EL/WORK_INDENT60188 | 14.75 | 36,875/- |
| 3. | DMA/2026-27/OW/WORK_INDENT60189 | 14.90 | 37,250/- |
| 4. | DMA/2026-27/WS/WORK_INDENT60192 | 8.00 | 20,000/- |

**ಸೂಚನೆ:** ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಮತ್ತು ಇತರೆ ಬದಲಾವಣೆಗಳಿದ್ದಲ್ಲಿ ಹಾಗೂ ಹೆಚ್ಚಿನ ವಿವರಗಳಿಗೆ ಗುತ್ತಿಗೆದಾರರು **https://kppp.karnataka.gov.in** ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

ಸಹಿ/– ಮುಖ್ಯಾಧಿಕಾರಿ
ಪಟ್ಟಣ ಪಂಚಾಯಿತಿ, ಬೋಗಾದಿ.

DIPR/MYS/459/SA/2026-27


# ಚಿರತೆ ದಾಳಿ: 13 ದಿನಗಳ ಬಳಿಕ ಸೆರೆ



ಚಿರತೆ ಕಾಣಿಸಿಕೊಂಡಿತ್ತು.

ಹನೂರು: ಮನೆಯ ಮುಂಭಾಗ ಕುಳಿತಿದ್ದ ಅಜ್ಜಿ ಹಾಗೂ ಮೊಮ್ಮಗಳ ಮೇಲೆ ದಾಳಿ ನಡೆಸಿದ್ದ ಚಿರತೆಯನ್ನು ಸೆರೆ ಹಿಡಿಯುವಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ಯಶಸ್ವಿಯಾಗಿದ್ದಾರೆ.

ಜುಲೈ 4ರಂದು ರಾತ್ರಿ 9 ಗಂಟೆ ಸುಮಾರಿಗೆ ತಟ್ಟೆಕೆರೆ ದೊಡ್ಡಿ ಗ್ರಾಮದ ಶಿವಮ್ಮ ಹಾಗೂ ಅವರ ನಾಲ್ಕು ವರ್ಷದ ಮೊಮ್ಮಗಳು ಹರ್ಷಿತಾ ಮನೆಯ ಮುಂಭಾಗ ಕುಳಿತಿದ್ದರು. ಈ ವೇಳೆ ಏಕಾಏಕಿ ನುಗ್ಗಿದ ಚಿರತೆ ಇಬ್ಬರ ಮೇಲೂ ದಾಳಿ ನಡೆಸಿತ್ತು. ಇದರಿಂದ ಹರ್ಷಿತಾಳ ಕತ್ತಿನ ಭಾಗಕ್ಕೆ ಗಾಯವಾಗಿತ್ತು. ತಕ್ಷಣ ಪೋಷಕರು ಗಾಯಗೊಂಡ ಹರ್ಷಿತಾ ಹಾಗೂ ಶಿವಮ್ಮ ಅವರನ್ನು ಕಾಮಗೆರೆ ಹೋಲಿ ಕ್ರಾಸ್ ಆಸ್ಪತ್ರೆಗೆ ದಾಖಲು ಮಾಡಿ ಚಿಕಿತ್ಸೆ ಕೊಡಿಸಿದ್ದರು. ಘಟನೆಯ ಮರು ದಿನ ಜುಲೈ 5ರಿಂದ ಚಿರತೆ ಸೆರೆಗಾಗಿ ಎರಡು ಪಂಜರಗಳನ್ನು ಇರಿಸಲಾಗಿತ್ತು. 20ಕ್ಕೂ ಹೆಚ್ಚು ಅರಣ್ಯ ಇಲಾಖೆ ಸಿಬ್ಬಂದಿಗಳು ಗ್ರಾಮದಲ್ಲಿ ಗಸ್ತು ನಡೆಸುತ್ತಿದ್ದರು. ಇದಲ್ಲದೆ ಡ್ರೋನ್ ಮೂಲಕ ಚಿರತೆಯ ಚಲನ ವಲನವನ್ನು ಗಮನಿಸಲಾಗುತ್ತಿತ್ತು. ಡ್ರೋನ್‌ನಲ್ಲಿ ಚಿರತೆ ಕಾಣಿಸಿಕೊಂಡಿತ್ತು.

> ▶▶ **ಅಜ್ಜಿ ಹಾಗೂ ಮೊಮ್ಮಗಳ ಮೇಲೆ ದಾಳಿ ಮಾಡಿದ್ದ ಚಿರತೆ**
> ▶▶ **ತಟ್ಟೆಕೆರೆ ದೊಡ್ಡಿ ಗ್ರಾಮಸ್ಥರಿಗೆ ನೆಮ್ಮದಿ**

13 ದಿನಗಳ ಕಾಲ ನಡೆದ ಕಾರ್ಯಾಚರಣೆಯ ಬಳಿಕ ಗುರುವಾರ ರಾತ್ರಿ ಚಿರತೆಯನ್ನು ಸೆರೆ ಹಿಡಿಯಲಾಗಿದೆ. ಚಿರತೆಯನ್ನು ಸೆರೆ ಹಿಡಿದಿರುವುದರಿಂದ ತಟ್ಟೆಕೆರೆ ದೊಡ್ಡಿ ಗ್ರಾಮದ ನಿವಾಸಿಗಳು ನಿಟ್ಟುಸಿರು ಬಿಟ್ಟಿದ್ದಾರೆ.

ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಸೆರೆಯಾದ ಚಿರತೆಯನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರ ಮಾಡಲಾಗುವುದು ಎಂದು ಹೂಗ್ಯಂ ವಲಯ ಅರಣ್ಯ ಅಧಿಕಾರಿ ಜಿತೇಂದ್ರ ಪತ್ರಿಕೆಗೆ ತಿಳಿಸಿದರು.

# ಶಾಲಾ ಸಂಸತ್ ಚುನಾವಣೆ




ಗುಂಡ್ಲುಪೇಟೆ: ಪಟ್ಟಣದ ಶ್ರೀ ಮದ್ದಾನೇಶ್ವರ ಪಬ್ಲಿಕ್ ಶಾಲೆಯಲ್ಲಿ 2026–27ನೇ ಶೈಕ್ಷಣಿಕ ಸಾಲಿನ ಶಾಲಾ ಸಂಸತ್ ಚುನಾವಣೆ ನಡೆಯಿತು.

ನಂತರ ಮಾತನಾಡಿದ ಶಾಲೆಯ ಪ್ರಾಂಶುಪಾಲರಾದ ನಟರಾಜ ಎಂ.ಪಿ., ಶಾಲಾ ಹಂತದಲ್ಲೇ ವಿದ್ಯಾರ್ಥಿಗಳಿಗೆ ಪ್ರಜಾಪ್ರಭುತ್ವದ ಮೌಲ್ಯಗಳು, ಚುನಾವಣೆ ಪ್ರಕ್ರಿಯೆ ಹಾಗೂ ಮತದಾನದ ಮಹತ್ವವನ್ನು ಮನವರಿಕೆ ಮಾಡಿಕೊಡುವ ನಿಟ್ಟಿನಲ್ಲಿ ಶಾಲಾ ಸಂಸತ್ ಚುನಾವಣೆಗಳನ್ನು ನಡೆಸಲಾಗುತ್ತಿದೆ. ಇಂದಿನ ಮಕ್ಕಳೇ ನಾಳಿನ ಜವಾಬ್ದಾರಿಯುತ ಪ್ರಜೆಗಳಾಗಲಿದ್ದು, ಮತದಾನದ ಹಕ್ಕು ಮತ್ತು ಕರ್ತವ್ಯದ ಬಗ್ಗೆ ಅರಿವು ಹೊಂದುವುದು ಅತ್ಯಂತ ಅಗತ್ಯ ಎಂದು ತಿಳಿಸಿದರು.

ಉಪ ಪ್ರಾಂಶುಪಾಲೆ ಸುಧಾರಾಣಿ ಹೆಚ್.ಜಿ. ಮಾತನಾಡಿ, ಹೆಣ್ಣು ಮಕ್ಕಳಲ್ಲಿ ಮತದಾನದ ಬಗ್ಗೆ ಆಸಕ್ತಿ ಹಾಗೂ ಆತ್ಮವಿಶ್ವಾಸ ಹೆಚ್ಚಿಸುವ ಉದ್ದೇಶದಿಂದ ವಿಶೇಷ ವಾಗಿ ಪಿಂಕ್ ಮತಗಟ್ಟೆ'ಯನ್ನು ಸ್ಥಾಪಿಸಲಾಗಿದೆ. ಹೆಣ್ಣು ಮಕ್ಕಳು ನಿರ್ಭೀತಿಯಿಂದ ಮತಗಟ್ಟೆಗೆ ಬಂದು ಮತದಾನ ಮಾಡುವ ಮೂಲಕ ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ಕರೆ ನೀಡಿದರು.. ಈ ಸಂದರ್ಭದಲ್ಲಿ ಶಿಕ್ಷಕರಾದ ಗೌರಮ್ಮ, ಪಲ್ಲವಿ, ಲಕ್ಷ್ಮಿ, ನವೀನ್, ಕವಿತಾ, ಆಯಿಷಾ, ಗೀತಾ, ಸುಪ್ರೀತ, ಸಿಂಧು, ಹರ್ಷಿತ, ಸೌಮ್ಯ, ದಿವ್ಯರಾಣಿ, ದೈಹಿಕ ಶಿಕ್ಷಣ ಶಿಕ್ಷಕ ನಿರಂಜನ್ ಕುಮಾರ್ ಹಾಗೂ ಶಾಲೆಯ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಮೇಕೆದಾಟು: ರಾಜ್ಯಕ್ಕೆ ಅನ್ಯಾಯ

## ಪ್ರಸನ್ನಕುಮಾರ್ ಅಭಿಪ್ರಾಯ । ಸಮಿತಿ ವತಿಯಿಂದ ರಿಟ್ ಅರ್ಜಿ ಸಲ್ಲಿಕೆ

ರಾಮನಗರ: ನದಿ ನೀರು ಹಂಚಿಕೆ ವಿಚಾರದಲ್ಲಿ ಮೊದಲನೆಯದಾಗಿ ರಿಟ್ ಅರ್ಜಿ ಸಲ್ಲಿಸುವಂತಿಲ್ಲ. ಮತ್ತೊಂದೆಡೆ ತಮಿಳುನಾಡಿನ ತಕರಾರು ಅರ್ಜಿ ಮತ್ತು ಪುನರ್ ಪರಿಶೀಲನಾ ಅರ್ಜಿ ವಜಾಗೊಂಡಿದೆ. ಹೀಗಿರುವಾಗ, ಕಾವೇರಿ ನದಿ ರಕ್ಷಣಾ ಸಮಿತಿ ಸುಪ್ರೀಂ ಕೋರ್ಟ್‌ನಲ್ಲಿ ರಿಪ್ ಅರ್ಜಿ ಸಲ್ಲಿಸಿದೆ, ಇದು ತಮಿಳುನಾಡಿಗೆ ವರದಾನವಾಗಲಿದೆ ಎಂದು ನೀರಾವರಿ ತಜ್ಞ ಅರ್ಜುನಹಳ್ಳಿ ಪ್ರಸನ್ನಕುಮಾರ್ ಅಭಿಪ್ರಾಯಪಟ್ಟರು.

ನಗರದ ಎಪಿಎಂಸಿಯಲ್ಲಿರುವ ರೈತ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ಮೇಕೆದಾಟು ಸಮತೋಲನ ಜಲಾಶಯ ನಿರ್ಮಾಣ ವಿಚಾರದಲ್ಲಿ ಕಾನೂನು ಹೋರಾಟದ ಎಲ್ಲಾ ಅವಕಾಶಗಳನ್ನು ಕಳೆದುಕೊಂಡಿರುವ ತಮಿಳುನಾಡಿಗೆ ಕಾವೇರಿ ನದಿ ರಕ್ಷಣಾ ಸಮಿತಿ ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಕೆ ಮಾಡಿರುವ ರಿಟ್ ಅರ್ಜಿ ವರದಾನವಾಗಿದೆ ಎಂದರು.

### ಕೇಂದ್ರ ಹೊರತುಪಡಿಸಿ ಇನ್ಯಾರಿಗೂ ಮಧ್ಯಪ್ರವೇಶಕ್ಕೆ ಅವಕಾಶವಿಲ್ಲ

ರಾಜ್ಯಗಳ ನಡುವೆ ನಡುವಿನ ಯಾವುದೇ ವಿವಾದಲ್ಲಿ ಕೇಂದ್ರ ಸರ್ಕಾರ ಹೊರತುಪಡಿಸಿ ಯಾವುದೇ ಸಂಘ ಸಂಸ್ಥೆಗಳು, ವ್ಯಕ್ತಿ ಮಧ್ಯ ಪ್ರವೇಶ ಮಾಡುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಇದರ ಹೊರತಾಗಿಯೂ ಎಚ್.ಸಿ.ರಾಮು ಅಧ್ಯಕ್ಷತೆಯ ನಮ್ಮ ರಾಜ್ಯದ ಕಾವೇರಿ ನದಿ ರಕ್ಷಣಾ ಸಮಿತಿ ಸಲ್ಲಿಸಿರುವ ರಿಟ್ ಅರ್ಜಿ ತಮಿಳುನಾಡಿಗೆ ವರದಾನವಾಗಿದೆ. ಮೇ.30ರಂದು ಸುಪ್ರೀಂ ಕೋರ್ಟ್‌ಗೆ ಸಂವಿಧಾನ ಪರಿಚ್ಛೇದ 32ರ ಅಡಿಯಲ್ಲಿ ರಿಟ್ ಅರ್ಜಿಯನ್ನು ಸಲ್ಲಿಕೆ ಮಾಡಿರುವುದು ಎಷ್ಟು ಸರಿ ಎಂದು ಪ್ರಸನ್ನ ಕುಮಾರ್ ಪ್ರಶ್ನೆ ಮಾಡಿದರು.



### ತ.ನಾಡಿಗೆ ಕಾನೂನಿನ ಎಲ್ಲಾ ಬಾಗಿಲುಗಳು ಮುಚ್ಚಿವೆ

**ಈಗಾಗಲೇ ಮೇಕೆದಾಟು ವಿಚಾರದಲ್ಲಿ ಕಾನೂನಿನ ಎಲ್ಲಾ ಬಾಗಿಲುಗಳು ತಮಿಳುನಾಡಿಗೆ ಮುಚ್ಚಿರುವುದರಿಂದ ವಿಚಾರಣೆ ನಡೆಯಲಿ ಎನ್ನುವ ಕಾರಣಕ್ಕೆ ತಕರಾರು ಸಹ ಹಾಕುವುದಿಲ್ಲ. ಕಾವೇರಿ ಕೊಳ್ಳದ ಜನತೆಗೆ ಮಾಡಲಾಗುತ್ತಿರುವ ವ್ಯವಸ್ಥಿತ ವಂಚನೆಯಾಗಿದೆ. ಇದರಿಂದಾಗಿ ರಾಜ್ಯದ ಮೇಕೆದಾಟು ವಿಚಾರದಲ್ಲಿ ಯಾವುದೇ ಅನುಮತಿಗಳನ್ನು ಪಡೆದುಕೊಳ್ಳಲು ಇದೊಂದೇ ಅರ್ಜಿ ತೊಡಕಾಗಲಿದೆ. ಈ ಅರ್ಜಿ ಇತ್ಯರ್ಥವಾಗುವವರೆಗೂ ಯಾವುದೇ ಅನುಮತಿಗಳು ನಮಗೆ ದೊರೆಯುವುದಿಲ್ಲ ಎಂದರು.**

ಕಾನೂನಿನಲ್ಲಿ ರಿಟ್ ಅರ್ಜಿ ಸಲ್ಲಿಕೆ ಮಾಡಲು ಅವಕಾಶವೇ ಇಲ್ಲ ಎನ್ನುವ ಮಾಹಿತಿ ಇಲ್ಲದೆ, ಅರ್ಜಿಯನ್ನು ನ್ಯಾಯಾಲಯ ಪುರಸ್ಕರಿಸಿ ವಿಚಾರಣೆಯನ್ನು ಕೈಗೆತ್ತಿಕೊಂಡಲ್ಲಿ ವ್ಯಾಜ್ಯ ಸುಮಾರು 7–8 ವರ್ಷಗಳ ಕಾಲ ನಡೆಯು ತ್ತದೆ. ಇದರಿಂದ ರಾಜ್ಯಕ್ಕೆ ಅನ್ಯಾಯವಾಗುತ್ತದೆಯೇ ಹೊರತು ಲಾಭವಾಗುವುದಿಲ್ಲ ಎಂದರು. ಸುದ್ದಿಗೋಷ್ಠಿಯಲ್ಲಿ ರೈತ ಸಂಘದ ರಾಜ್ಯ ಉಪಾಧ್ಯಕ್ಷ ಆಣಿಗೆರೆ ಮಲ್ಲಯ್ಯ, ಹಿರಿಯ ಪತ್ರಕರ್ತ ಸು.ತ.ರಾಮೇಗೌಡ ಇದ್ದರು.

### ಗಣ್ಯರು ನಮ್ಮ ಮಾತು ಪರಿಗಣಿಸಲಿಲ್ಲ!

**ಕಾವೇರಿ ನದಿ ತೀರ್ಪು 2018ರಲ್ಲಿಯೇ ಬಂದಿದೆ, ಅಂದೆಯೇ ಅದನ್ನು ಪ್ರಶ್ನಿಸಬೇಕು ಎಂದು ಡಾ.ನಿರ್ಮಲಾನಂದನಾಥ ಸ್ವಾಮೀಜಿ, ದೇವೇಗೌಡರು, ಸಿದ್ದರಾಮಯ್ಯ, ಗೋಪಾಲಗೌಡರು ಸೇರಿದಂತೆ ಹಲವರ ಗಮನಕ್ಕೆ ತಂದರೂ ಯಾರೂ ಸಹ ತಮ್ಮ ಮಾತನ್ನು ಪರಿಗಣಿಸಲಿಲ್ಲ. ಇದಾದ ನಂತರ 2024ರಲ್ಲಿ ಅಸ್ತಿತ್ವಕ್ಕೆ ಬಂದ ಕಾವೇರಿ ನದಿ ರಕ್ಷಣಾ ಸಮಿತಿ, ಎರಡು ವರ್ಷಗಳಿಂದ ಸುಮ್ಮನಿದ್ದು, 2026ರಲ್ಲಿ ಮೇ.30ರಂದು ತಕರಾರು ಅರ್ಜಿ ಸಲ್ಲಿಸಲಾಗಿದೆ ಎಂದು ದೂರಿದರು. ರಿಟ್ ಅರ್ಜಿ ಸಲ್ಲಿಕೆ ಮಾಡುತ್ತಿರುವ ಮಾಹಿತಿ ತಿಳಿದು, ಮೇ.26ರಂದು ಸಮಿತಿಗೆ ಪತ್ರ ಬರೆದು ಅರ್ಜಿ ದಾಖಲಿಸದಂತೆ ಮಾಹಿತಿ ನೀಡಿದ್ದೆ. ಇದರ ಹೊರತಾಗಿಯೂ ದೋಷ ಪೂರಿತವಾದ ಅರ್ಜಿ ಎಂದು ಸುಪ್ರೀಂ ಕೋರ್ಟ್ ನಿಮ್ಮ ಅರ್ಜಿಯನ್ನು ಅಮಾನತ್ತಿನಲ್ಲಿ ಇಟ್ಟಿದೆ ಎಂದು ತಿಳಿಸಿದ ಅವರು, ಈಗಾಗಲೇ ಸಲ್ಲಿಕೆ ಮಾಡಿರುವ ರಿಟ್ ಅರ್ಜಿಯನ್ನು ವಾಪಾಸ್ ಪಡೆದುಕೊಳ್ಳಲು ಕ್ರಮವಹಿಸಬೇಕೆಂದು ಮನವಿ ಮಾಡಿದರು.**

# 21ರಂದು ರಾಜ್ ಸ್ಮರಣೆ

ಮೈಸೂರು: ಡಾ.ರಾಜಕುಮಾರ್ ಮ್ಯೂಸಿಕಲ್ ಗ್ರೂಪ್ ವತಿಯಿಂದ ನಗರದ ಪುರಭವನದಲ್ಲಿ ಜುಲೈ 21ರಂದು ಗಾನ ಸರಸ್ವತಿ ಎಸ್.ಜಾನಕಿ ಮತ್ತು ವರನಟ ಡಾ.ರಾಜ್ ಸ್ಮರಣೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಗ್ರೂಪ್‌ನ ಸುಧೀಂದ್ರ ಹೇಳಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಬೆಳಿಗ್ಗೆ 10.30 ರಿಂದ ಸಂಜೆ 4 ರವರೆಗೆ ಅಮ್ಮನ ನೆನಪು ಶೀರ್ಷಿಕೆ ಅಡಿಯಲ್ಲಿ ಎಸ್. ಜಾನಕಿ ಹಾಡಿರುವ ಸೋಲೋ ಕನ್ನಡ ಚಲನಚಿತ್ರಗೀತೆಗಳ ಗಾಯನ ನಡೆಯಲಿದೆ ಎಂದರು.

ಕರ್ನಾಟಕ ಸುಗಮ ಸಂಗೀತ ಪರಿಷತ್ ಅಧ್ಯಕ್ಷ ನಾಗರಾಜ್ ಬೈರಿ, ಕವಿ ಜಯಪ್ಪ ಹೊನ್ನಾಳಿ ಅವರು ಜಾನಕಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವರು. ಗಾಯಕಿಯರಾದ ಅಶ್ವಿನಿ ಶಾಸ್ತ್ರೀ, ಶಾರದಮ್ಮ, ರಶ್ಮಿ, ಮಂಡ್ಯ ಶ್ರುತಿ, ರಾಣಿ, ಪದ್ಮ, ಶಶಿಕಲಾ, ತೇಜಾವತಿ, ಜಯಲಕ್ಷ್ಮಿ ?ಮ, ಕೃಷ್ಣಮೂರ್ತಿ ಹಾಡುವರು ಎಂದು ತಿಳಿಸಿದರು. ಸಂಜೆ 5.30ಕ್ಕೆ ರಾತ್ರಿ 9ರವರೆಗೆ ಡಾ. ರಾಜ್ ಕುಮಾರ್ ಹಾಡಿರುವ ಸೋಲೋ ಪ್ರೇಮ ಹಾಗೂ ವಿರಸ ಗೀತೆಗಳ ಗಾಯನ ನಡೆಯಲಿದೆ. ಆಯೋಜಕರಾದ ಮೈಸೂರು ಜಯರಾಂ, ರಾಜು, ನಾಗೇಂದ್ರ ನಂಜುಂಡಯ್ಯ ಹಾಡುವರು ಎಂದರು.

ಇಳೈ ಆಳ್ವಾರ್ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಆರ್. ರಘು ಕೌಟಿಲ್ಯ, ಎನ್.ಎಂ. ನವೀನ್ ಕುಮಾರ್, ಮಡ್ಡಿಕೆರೆ ಗೋಪಾಲ್, ಲಯನ್ ಗೋಲ್ಡ್ ಸುರಶ್ ಅತಿಥಿಗಳಾಗಿ ಭಾಗವಸುವರು ಎಂದು ತಿಳಿಸಿದರು. ಆಯೋಜಕ ಮೈಸೂರು ಜಯರಾಂ, ಗಾಯಕರಾದ ಕೃಷ್ಣಮೂರ್ತಿ, ಅಶ್ವಿನಿ ಶಾಸ್ತ್ರೀ, ರಾಣಿ, ಲತಾ ಬಾಲಕೃಷ್ಣ, ನಾಗೇಂದ್ರ ಹಾಜರಿದ್ದರು.





## ನಗರಸಭಾ ಕಾರ್ಯಾಲಯ, ಕೊಳ್ಳೇಗಾಲ, ಚಾಮರಾಜನಗರ ಜಿಲ್ಲೆ

Phone No:08224-252016, Help line No: 08224-252626
Website: www.kollegalacity.gov.in, E-mail:cmckollegal@yahoo.co.in

ನಂ:ಮುನಿ/ಕೊನಸ/ತಾ.ವಿ/ಒ.ಜಾ/ವಾ.ಟೆ/01/2026–27 ದಿನಾಂಕ: 17.07.2026

**–: ಟೆಂಡರ್ ಪ್ರಕಟಣೆ :–**

ಕೊಳ್ಳೇಗಾಲ ನಗರಸಭೆಯ ವ್ಯಾಪ್ತಿಯ ಒಳಚರಂಡಿ ಜಾಲದಲ್ಲಿರುವ ಮೇಸನ್ರಿ ಮ್ಯಾನಹೋಲ್‌ಗಳ ಮತ್ತು ವಿವಿಧ ಮಾದರಿ ಹಾಗೂ ವ್ಯಾಸದತ್ಯಾಜ್ಯ ನೀರು ಕೊಳವೆಗಳ ದುರಸ್ಥಿ ಮತ್ತು ರಿಪೇರಿಗಾಗಿ ಕೆಟಿಪಿಪಿ ಆಧ್ಯಾದೇಶ 1999 ಮತ್ತು ನಿಯಮಗಳು 2000 ದಂತೆ, ಕರ್ನಾಟಕ ಲೋಕೋಪಯೋಗಿ ಇಲಾಖೆ, ಮತ್ತು ಇ–ಪ್ರೊಕೂರ್‌ಮೆಂಟ್ ಸೆಲ್, ಬೆಂಗಳೂರು ರವರಲ್ಲಿ ನೋಂದಾಯಿತ ಅರ್ಹ 3ನೇ ದರ್ಜೆ ಮತ್ತು ಮೇಲ್ಪಟ್ಟ ಸಿವಿಲ್ ಗುತ್ತಿಗೆದಾರರುಗಳಿಂದ ಕರ್ನಾಟಕ ಪಬ್ಲಿಕ್ ಪ್ರೊಕೊರ್‌ಮೆಂಟ್ https://kppp.karnataka.gov.in/ ಪೋರ್ಟಲ್ (ಕೆಪಿಪಿಪಿ) ಮೂಲಕ ವಾರ್ಷಿಕ ದುರಸ್ಥಿ ಮತ್ತು ರಿಪೇರಿಯ ಕಾಮಗಾರಿಗಾಗಿ ಐಟಂವಾರು ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು ತಮ್ಮ ದರ ನಮೂದಿಸಿದ ಟೆಂಡರ್‌ಗಳನ್ನು KW-2ರ ನಿಯಮಗಳಂತೆ ಈ ಕೆಳಗೆ ನಿಗಧಿಪಡಿಸಿದ ದಿನಾಂಕಗಳಂದು ಆನ್‌ಲೈನ್‌ನಲ್ಲಿ ಸಲ್ಲಿಸತಕ್ಕದ್ದು. ವಿವರವಾದ ಟೆಂಡರ್ ಪ್ರಕಟಣೆಯನ್ನು ಕೊಳ್ಳೇಗಾಲ ನಗರಸಭಾ ಕಛೇರಿ ಸೂಚನಾ ಫಲಕದಲ್ಲಿ ಮತ್ತು ವೆಬ್ ಸೈಟ್ www.kollegalacity.mrc.gov.in ನಲ್ಲಿ ವೀಕ್ಷಿಸಬಹುದು. (ಮ್ಯಾನುಯೆಲ್ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ).

**ಕೆಪಿಪಿಪಿ ಪೋರ್ಟಲ್ ಮೂಲಕ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 05.08.2026 up to 5.30 pm**
**ಕೆಪಿಪಿಪಿ ಪೋರ್ಟಲ್ ಮೂಲಕ ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 07.08.2026 at 11.00 am**
**ಕೆಪಿಪಿಪಿ ಪೋರ್ಟಲ್ ಮೂಲಕ ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ :: 13.08.2026 at 11.00 am**

| ಕ್ರ ಸಂ | ಇ–ಪೋರ್ಟಲ್‌ನಲ್ಲಿರುವಂತೆ ಟೆಂಡರ್ ಸಂಖ್ಯೆ | ಕಾಮಗಾರಿ ವಿವರ | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) | ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) | ಇ.ಎಂ.ಡಿ. (ರೂಗಳಲ್ಲಿ) |
|---|---|---|---|---|---|
| | | **ನಗರಸಭೆ ನಿಧಿ** | | | |
| 1 | DMA/2026-27/WS/ WORK INDENT60903 | ಕೊಳ್ಳೇಗಾಲ ನಗರಸಭಾ ವ್ಯಾಪ್ತಿಯ ವಾರ್ಡ್ ನಂ.01 ರಿಂದ ವಾರ್ಡ್ ನಂ 31 ರವರೆಗೆ ಒಳಚರಂಡಿ ಜಾಲದ ವಾರ್ಷಿಕ ನಿರ್ವಹಣೆ ಕಾಮಗಾರಿ | 49.00 | 41.51 | 83020.00 |

ಸಹಿ/–ಪೌರಾಯುಕ್ತರು, ನಗರಸಭೆ ಕೊಳ್ಳೇಗಾಲ

ಸಂ:ವಾಸಾಸಂಇ:ಚಾನಗರ:249:2026–27


# ಸಸಿ ವಿತರಣೆ, ಪರಿಸರ ಜಾಗೃತಿ ಕಾರ್ಯಕ್ರಮ

ಗುಂಡ್ಲುಪೇಟೆ: ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಿ.ಸಿ. ಟ್ರಸ್ಟ್ (ರಿ.), ಚಾಮರಾಜನಗರ ವತಿಯಿಂದ ಬೇಗೂರು ಸರ್ಕಾರಿ ಹಿರಿಯ ಪ್ರಾಥ ಮಿಕ ಶಾಲೆಯಲ್ಲಿ ಸಸಿ ವಿತರಣೆ ಹಾಗೂ ಪರಿಸರ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು



ಕಾರ್ಯಕ್ರಮದಲ್ಲಿ ಮಾತನಾಡಿದ ಕೃಷಿ ಮೇಲ್ವಿಚಾರಕ ಮಹಾದೇವ ಪ್ರಸಾದ್ ಟಿ.ಎಂ. ಪರಿಸರ ಸಂರಕ್ಷಣೆ ನಿಮ್ಮೆಲ್ಲರ ಅಗತ್ಯವಾಗಿದ್ದು, ಪ್ರತಿಯೊಬ್ಬ ವಿದ್ಯಾರ್ಥಿಯೂ ಕನಿಷ್ಠ ಒಂದು ಗಿಡವನ್ನು ನೆಟ್ಟು ಅದನ್ನು ಪೋಷಿಸುವ ಸಂಕಲ್ಪ ಮಾಡಬೇಕೆಂದು ಕರೆ ನೀಡಿದರು ನಂತರ ವಲಯ ಮೇಲ್ವಿಚಾರಕ ವಿಜಯ್ ಅವರು ಪರಿಸರ ಮಾಲಿನ್ಯದಿಂದ ಉಂಟಾ ಗುತ್ತಿರುವ ದುಷ್ಪರಿಣಾಮಗಳು, ಪ್ರಕೃತಿ ಸಂಪತ್ತಿನ ಸಂರಕ್ಷಣೆ ಹಾಗೂ ಪರಿಸರ ಉಳಿಸುವಲ್ಲಿ ವಿದ್ಯಾ ರ್ಥಿಗಳ ಪಾತ್ರದ ಕುರಿತು ಮಾಹಿತಿ ನೀಡಿ ಜಾಗೃತಿ ಮೂಡಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಲೆಯ ಮುಖ್ಯ ಶಿಕ್ಷಕಿ ಅಕ್ಕಮಹಾದೇವಿ ರವರು ಮಾತ ನಾಡಿ, ಪರಿಸರ ಸಂರಕ್ಷಣೆ ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದ್ದು, ವಿದ್ಯಾರ್ಥಿಗಳಲ್ಲಿ ಬಾಲ್ಯದಿಂದಲೇ ಪರಿಸರದ ಬಗ್ಗೆ ಕಾಳಜಿ ಬೆಳೆಸುವ ಇಂತಹ ಕಾರ್ಯಕ್ರಮಗಳು ಅತ್ಯಂತ ಉಪಯುಕ್ತವಾಗಿವೆ ಎಂದರು. ಇತಂಹ ಸಮಾಜಮುಖಿ ಕಾರ್ಯಕ್ರಮ ಗಳನ್ನು ನಿರಂತರವಾಗಿ ಹಮ್ಮಿಕೊಳ್ಳುತ್ತಿರುವ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸೇವೆಯನ್ನು ಅವರು ಪ್ರಶಂಸಿಸಿದರು.

ಕಾರ್ಯಕ್ರಮದಲ್ಲಿ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ವೆಂಕಟರಾಜು, ಮುಖ್ಯ ಶಿಕ್ಷಕಿ ಅಕ್ಕಮಹಾ ದೇವಿ, ಶಾಲೆಯ ಸಹ ಶಿಕ್ಷಕರು, ಹಾಗೂ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸೇವಾ ಪ್ರತಿನಿಧಿ ವಿಶಾಲಾಕ್ಷಿ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

**ಯರಿಯೂರು ರಾಜಣ್ಣ ಆರೋಪ । ಷಡ್ಯಂತ್ರ ಮುಂದುವರಿದರೆ ಉಗ್ರ ಹೋರಾಟದ ಎಚ್ಚರಿಕೆ**

# ದಲಿತ ಮಹಿಳಾ ಅಧಿಕಾರಿಯನ್ನು ಟಾರ್ಗೆಟ್ ಮಾಡುವುದು ಸರಿಯಲ್ಲ

ಚಾಮರಾಜನಗರ: ರೈತ ಸಂಘದ ಮುಖಂಡ ಹೊನ್ನೂರು ಬಸವಣ್ಣ ಅವರು ದಲಿತ ಮಹಿಳಾ ಅಧಿಕಾರಿಯನ್ನು ಗುರಿಯಾಗಿಸಿಕೊಂಡು ಟೀಕಿಸುತ್ತಿರುವುದು ಖಂಡನೀಯ ಎಂದು ಡಿಎಸ್‌ಎಸ್ ಜಿಲ್ಲಾ ಸಂಚಾಲಕ ಸಿ.ರಾಜಣ್ಣ ಯರಿಯೂರು ಆರೋಪಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಲವು ಕೋಮುವಾದಿ ಹಿತಾಸಕ್ತಿಗಳು ಡಾ. ರೇಣುಕಾದೇವಿ ಅವರ ವಿರುದ್ಧ ಆಧಾರರಹಿತ ದೂರುಗಳನ್ನು ನೀಡಿದ್ದವು. ಆದರೆ, ಈ ಬಗ್ಗೆ ಪರಿಶೀಲನೆ ನಡೆಸಿದ ಆರೋಗ್ಯ ಇಲಾಖೆಯ ತನಿಖಾ ಸಮಿತಿಯು, ವಿಡಿಯೋ ಅಸ್ಪಷ್ಟವಾಗಿದೆ ಎಂದು ವರದಿ ನೀಡಿ ಅವರನ್ನು ನಿರ್ದೋಷಿ ಎಂದು ಸಾಬೀತುಪಡಿಸಿದೆ. ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾಗಿ ಹಾಗೂ ರಾಜ್ಯ ಉಪಾಧ್ಯಕ್ಷರಾಗಿರುವ ಅವರ ಬೆಳವಣಿಗೆಯನ್ನು ಸಹಿಸದ ಕೆಲವರು, ಇಲ್ಲಸಲ್ಲದ ಆರೋಪಗಳನ್ನು ಮಾಡಿ ಅವರನ್ನು ಜಿಲ್ಲೆಯಿಂದ ಹೊರಗೆ ಕಳುಹಿಸುವ




ಹುನ್ನಾರ ನಡೆಸಿದ್ದಾರೆ ಎಂದು ಕಿಡಿಕಾರಿದರು.

### ಸತ್ಯಾಸತ್ಯತೆ ಅರಿಯದೆ ತೇಜೋವಧೆ ಬೇಡ

ನ್ಯಾಯಾಲಯವು ಈ ಸಂಬಂಧದ ಮೊಕದ್ದಮೆಯನ್ನು ಈಗಾಗಲೇ ವಜಾಗೊಳಿಸಿದೆ. ಹೀಗಿದ್ದರೂ, ರೈತ ಸಂಘದ ಮುಖಂಡ ಹೊನ್ನೂರು ಬಸವಣ್ಣ ಅವರು ಪತ್ರಿಕಾಗೋಷ್ಠಿ ನಡೆಸಿ, ಡಾ. ರೇಣುಕಾದೇವಿ ಅವರ ಬಡ್ತಿಯನ್ನು ರದ್ದುಗೊಳಿಸುವಂತೆ ಒತ್ತಾಯಿಸಿದ್ದಾರೆ. ವಾಸ್ತವವಾಗಿ ಸರ್ಕಾರ ಅವರಿಗೆ ಬಡ್ತಿ ನೀಡಿಲ್ಲ, ಕೇವಲ ತಾತ್ಕಾಲಿಕ ವರ್ಗಾವಣೆ ಮಾಡಿದೆ ಎಂಬುದನ್ನು ಅವರು ಅರ್ಥಮಾಡಿಕೊಳ್ಳಬೇಕು. ಸತ್ಯಾಸತ್ಯತೆ ಅರಿಯದೆ ದಲಿತ ಅಧಿಕಾರಿಯನ್ನು ತೇಜೋವಧೆ ಮಾಡುವುದು ಯಾವುದೇ ಸಂಘಟನೆಗೆ ಶೋಭೆ ತರುವುದಿಲ್ಲ. ಈ ನಿಟ್ಟಿನಲ್ಲಿ ಅವರು ಎಚ್ಚರಿಕೆಯಿಂದ ಮಾತನಾಡಬೇಕು; ಇಲ್ಲವಾದಲ್ಲಿ ಅವರ ವಿರುದ್ಧವೇ ತೀವ್ರ ಪ್ರತಿಭಟನೆ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

### ಸರ್ಕಾರಕ್ಕೆ ಅಭಿನಂದನೆ, ಸೇವೆಯ ಶ್ಲಾಘನೆ

ಇದೇ ವೇಳೆ, ಡಾ. ರೇಣುಕಾದೇವಿ ಅವರನ್ನು ಆರ್‌ಸಿಹೆಚ್ (ಖಅಊ) ಅಧಿಕಾರಿಯಾಗಿ ನೇಮಕ ಮಾಡಿದ ರಾಜ್ಯ ಸರ್ಕಾರ, ಮುಖ್ಯಮಂತ್ರಿಗಳು, ಆರೋಗ್ಯ ಸಚಿವರು, ಸಂಸದರು ಹಾಗೂ ಜಿಲ್ಲೆಯ ಶಾಸಕರಿಗೆ ರಾಜಣ್ಣ ಅವರು ಸಮುದಾಯ ಮತ್ತು ಸಂಘಟನೆಯ ಪರವಾಗಿ ಅಭಿನಂದನೆ ಸಲ್ಲಿಸಿದರು.

ತಮ್ಮ ಸೇವಾ ಅವಧಿಯಲ್ಲಿ ಸಂತೇಮರಹಳ್ಳಿ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಸುಮಾರು 10ರಿಂದ 15 ಸಾವಿರ ಬಡ ಮಹಿಳೆಯರಿಗೆ ಯಶಸ್ವಿ ಪ್ರಸೂತಿ ಸೇವೆ ಒದಗಿಸಿರುವ ಡಾ. ರೇಣುಕಾದೇವಿ ಅವರು, ಆಸ್ಪತ್ರೆಯ ಅಭಿವೃದ್ಧಿಗೂ ಅಪಾರ ಶ್ರಮಿಸಿದ್ದಾರೆ. ಅವರ ಈ ಅನನ್ಯ ಸೇವೆಯಿಂದಾಗಿ ಅವರು ಜಿಲ್ಲೆಯಲ್ಲಿ ಬಡವರ ಪಾಲಿನ ದೇವತೆಯಾಗಿದ್ದಾರೆ ಎಂದು ಪ್ರಶಂಸಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮುಖಂಡ ವಾಸು, ಕರ್ನಾಟಕ ಕನ್ನಡ ಜನಪರ ವೇದಿಕೆ ಜಿಲ್ಲಾಧ್ಯಕ್ಷ ಮಲ್ಲು ಯರಗಂಬಳ್ಳಿ, ಡಿಎಸ್‌ಎಸ್ ತಾಲೂಕು ಅಧ್ಯಕ್ಷ ಅನಿಲಕುಮಾರ್, ಪ್ರಮುಖರಾದ ರಂಗಸ್ವಾಮಿ, ಪರಶಿವಮೂರ್ತಿ, ಶ್ರೀನಿವಾಸ್, ಆಶ್ರಿತ್ ರಾಮಸಮುದ್ರ ಮುಂತಾದವರು ಉಪಸ್ಥಿತರಿದ್ದರು.

# ಚೆನ್ನಮ್ಮ ಅವರ ನಿಧನಕ್ಕೆ ಸಂತಾಪ

ಹನೂರು: ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರ ಧರ್ಮಪತ್ನಿ ಚೆನ್ನಮ್ಮ ಅವರ ನಿಧನಕ್ಕೆ ಹನೂರು ಕ್ಷೇತ್ರದ ಮಾಜಿ ಶಾಸಕ ಆರ್. ನರೇಂದ್ರ ಅವರು ಸಂತಾಪ ಸೂಚಿಸಿದ್ದಾರೆ.

ಈ ಕುರಿತು ಹೇಳಿಕೆ ನೀಡಿರುವ ಅವರು, ಕೃಷಿ ಕುಟುಂಬದ ಹಿನ್ನೆಲೆ ಹೊಂದಿರುವ ಚೆನ್ನಮ್ಮ ಅವರು ದೇವೇಗೌಡರ ರಾಜಕೀಯ



ಜೀವನದ ಪ್ರತಿಯೊಂದು ಹಂತದಲ್ಲೂ ಬೆಂಬಲವಾಗಿ ನಿಂತಿದ್ದರು. ಅವರು ಸರಳತೆ, ಶಾಂತ ಸ್ವಭಾವ ಮತ್ತು ಆಧ್ಯಾತ್ಮಿಕ ಚಿಂತನೆಗೆ ಹೆಸರುವಾಸಿಯಾಗಿದ್ದರು. ಸಾರ್ವಜನಿಕವಾಗಿ ಹೆಚ್ಚು ಕಾಣಿಸಿಕೊಳ್ಳದಿದ್ದರೂ ಗ್ರಾಮೀಣ ಮಹಿಳೆಯರಿಗೆ ಸ್ಫೂರ್ತಿಯಾಗಿದ್ದರು ಎಂದು ನೆನಪಿಸಿಕೊಂಡರು. ದೇವೇಗೌಡರು ಪ್ರಧಾನಿಯಾಗಿದ್ದಾಗ ದೆಹಲಿಯಲ್ಲೂ ಅವರು ಅತ್ಯಂತ ಸರಳ ಜೀವನ ನಡೆಸಿದರು. "ಅಜ್ಜಿ" ಎಂದು ಎಲ್ಲರಿಂದಲೂ ಪ್ರೀತಿಯಿಂದ ಕರೆಯಿಸಿಕೊಳ್ಳುತ್ತಿದ್ದ ಚೆನ್ನಮ್ಮ ಅವರು ಮನೆ, ಕೃಷಿ ಮತ್ತು ಕುಟುಂಬವನ್ನು ಸಮರ್ಥವಾಗಿ ನಿರ್ವಹಿಸಿದ್ದರು. ಅವರ ನಿಧನ ದೇವೇಗೌಡರ ಕುಟುಂಬಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ಮಾಜಿ ಶಾಸಕ ನರೇಂದ್ರ ಹೇಳಿದರು. ಮೃತರ ಆತ್ಮಕ್ಕೆ ಶಾಂತಿ ಸಿಗಲಿ, ಕುಟುಂಬದವರಿಗೆ ದುಃಖವನ್ನು ಭರಿಸುವ ಶಕ್ತಿ ನೀಡಲಿ ಎಂದು ಅವರು ಪ್ರಾರ್ಥಿಸಿದ್ದಾರೆ. ಸಂತಾಪ ಸೂಚಿಸಿದ್ದಾರೆ.

## ಶಾಸಕ ಸಿ.ಪುಟ್ಟರಂಗಶೆಟ್ಟಿ ಶ್ವೇತ ಪತ್ರ ಹೊರಡಿಸುವ ಅಗತ್ಯವಿಲ್ಲ

**ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್ ತಿರುಗೇಟು**

ಚಾಮರಾಜನಗರ, ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರು ಕ್ಷೇತ್ರದ ಅಭಿವೃದ್ಧಿಗೆ ಅನುದಾನವನ್ನು ಸಮರ್ಪಕವಾಗಿ ಬಳಕೆ ಮಾಡಿದ್ದು, ಈ ಕುರಿತು ಶ್ವೇತಪತ್ರ ಹೊರಡಿಸುವ ಅಗತ್ಯವಿಲ್ಲ ಎಂದು ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್ ಅವರು ತಿರುಗೇಟು ನೀಡಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಶನಿವಾರ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಚಾ.ನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರು ಹೆಚ್ಚಿನ ಅಭಿವೃದ್ಧಿ ಕೆಲಸವನ್ನು ಮಾಡಿದ್ದು, ಅವರು ಟೀಕೆ ಮಾಡುವಂತ ನೈತಿಕತೆ ಬಿಜೆಪಿಯವರಿಗೆ ಇಲ್ಲ. ಶಾಸಕ ಪುಟ್ಟರಂಗಶೆಟ್ಟಿ ಅವರು ಜನರಿಗೆ ಉತ್ತರದಾಯಿಯಾಗಿದ್ದು, ಬಿಜೆಪಿಯ ಎಂ.ರಾಮಚಂದ್ರು ಅವರಿಗೆ ಅಲ್ಲ. ಅವರು ತಂದಿರುವ ಅನುದಾನದ ಕುರಿತು ಶ್ವೇತಪತ್ರ ಹೊರಡಿಸುವ ಯಾವುದೇ ಅಗತ್ಯವಿಲ್ಲ ಎಂದು ಬಿಜೆಪಿ ಮುಖಂಡರಿಗೆ ತಿರುಗೇಟು ನೀಡಿದರು.


ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರು ಶಿಕ್ಷಣ, ಆರೋಗ್ಯ, ಮೂಲ ಸೌಕರ್ಯಗಳಿಗೆ ಹೆಚ್ಚಿನ ಅನುದಾನವನ್ನು ನೀಡಿದ್ದಾರೆ. ರಸ್ತೆ, ಬೀದಿ ದೀಪ, ಚರಂಡಿ ವ್ಯವಸ್ಥೆ, ನೀರಾವರಿ, ಕೃಷಿ, ಶಾಲೆ ಮತ್ತು ಹಾಸ್ಟೆಲ್ ಗಳ ನಿರ್ಮಾಣ, ಸಮುದಾಯ ಭವನಗಳು ಹಾಗೂ ದೇವಾಲಯಗಳ ಅಭಿವೃದ್ಧಿಗೆ ನೂರಾರು ಕೋಟಿ ಅನುದಾನವನ್ನು ತಂದಿದ್ದಾರೆ. ಬಿಜೆಪಿ ಸರ್ಕಾರದ ಅವಧಿಯಲ್ಲಿ ಜಿಲ್ಲೆಗೆ ಎಷ್ಟು ಅನುದಾನವನ್ನು ಕೊಟ್ಟಿದ್ದಾರೆ ಎಂಬುದನ್ನು ಬಿಜೆಪಿ ಮುಖಂಡರು ಮನನ ಮಾಡಿಕೊಳ್ಳಬೇಕಿದೆ ಎಂದರು.

ಬಿಜೆಪಿ ಮುಖಂಡರು ಓರ್ವ ಶಾಸಕರ ವಿರುದ್ಧ ಟೀಕೆ ಮಾಡುವಾಗ ಅಗತ್ಯವಾದ ಮಾಹಿತಿಯನ್ನು ಇಟ್ಟುಕೊಂಡು ಆರೋಪ ಮಾಡಬೇಕಿದೆ. ನಾವು ಬಿಜೆಪಿ ಮುಖಂಡರಿಗೆ ಉತ್ತರ ನೀಡುವ ಅಗತ್ಯವಿಲ್ಲ. ಮತದಾರ ಪ್ರಭುಗಳ ಮುಂದೆ ಹೋಗುತ್ತೇವೆ. ಶಾಸಕರ ಅಭಿವೃದ್ಧಿ ಕುರಿತು ಜನರು ತೀರ್ಮಾನಿಸುತ್ತಾರೆ ಎಂದು ಹೇಳಿದರು. ಗೋಷ್ಠಿಯಲ್ಲಿ ಚುಡಾ ಅಧ್ಯಕ್ಷ ಮೊಹಮ್ಮದ್ ಅಸ್ಗರ್ (ಮುನ್ನಾ), ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಸೋಮೇಶ್ವರ್, ಕನಿಷ್ಠ ವೇತನ ಸಲಹಾ ಸಮಿತಿ ಮಾಜಿ ಅಧ್ಯಕ್ಷ ಆರ್.ಉಮೇಶ್, ತಮ್ಮಡಹಳ್ಳಿ ಸುಬ್ಬನಾಯಕ, ಎಂ.ಶಿವಮೂರ್ತಿ, ಮಹೇಶ್ ಕುದರ್, ಗೋವಿಂದಶೆಟ್ಟಿ ಹಾಜರಿದ್ದರು.

## 26ರಂದು ದೇವರಹೊಸಹಳ್ಳಿ ಶ್ರೀ ಸಂಜೀವರಾಯ ಸ್ವಾಮಿ ಬ್ರಹ್ಮ ರಥೋತ್ಸವ

ರಾಮನಗರ: ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಭಕ್ತರನ್ನು ಹೊಂದಿರುವ ಧಾರ್ಮಿಕ ಪ್ರಸಿದ್ಧ ತಾಣವಾದ ಶ್ರೀ ಸಂಜೀವರಾಯ ಸ್ವಾಮಿ (ಶ್ರೀ ಅಂಜನೇಯ ಸ್ವಾಮಿ) ದೇವಾಲಯದಲ್ಲಿ ದಿವ್ಯ ಬ್ರಹ್ಮರಥೋತ್ಸವ ಆಯೋಜನೆಯಾಗಿದೆ. ಈ ಸಂಬಂಧ ಜು.24ರಿಂದಲೇ ಧಾರ್ಮಿಕ ಕೈಂಕರ್ಯಗಳು ಆರಂಭವಾಗಲಿದ್ದು, ಜು.29ರಂದು ಸಂಪನ್ನವಾಗಲಿದೆ.

ಚನ್ನಪಟ್ಟಣ ತಾಲ್ಲೂಕಿನ ದೇವರಹೊಸಹಳ್ಳಿ ಗ್ರಾಮದ ಶ್ರೀ ಸಂಜೀವರಾಯ ಸ್ವಾಮಿ ದೇವಸ್ಥಾನದ ಶ್ರೀ ಆಂಜನೇಯಸ್ವಾಮಿಯವರ



ವೈಕುಂಠ ಸೇವಾ ದರ್ಶನ ಮತ್ತು ಶ್ರೀ ಲಕ್ಷ್ಮೀ ವೆಂಕಟೇಶ್ವರಸ್ವಾಮಿಯವರ ದಿವ್ಯ ಬ್ರಹ್ಮರಥೋತ್ಸವವನ್ನು ಇದೇ ಜು. 24 ರಿಂದ 29ರ ವರೆಗೆ ಆಯೋಜಿಸಲಾಗಿದೆ. ಜು. 26ರ ಭಾನುವಾರ ಮಧ್ಯಾಹ್ನ 12 ಗಂಟೆಯಿಂದ 12.50ರ ವರೆಗೆ ಅಭಿಜಿನ್ ಮುಹೂರ್ತದಲ್ಲಿ ಬ್ರಹ್ಮ ರಥೋತ್ಸವವನ್ನು ಏರ್ಪಡಿಸಲಾಗಿದೆ.

ರಾಜ್ಯದ ಮುಖ್ಯಮಂತ್ರಿಗಳಾದ ಡಿ.ಕೆ. ಶಿವಕುಮಾರ್ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ರಾಮಲಿಂಗರೆಡ್ಡಿ ಅವರು ಕಾರ್ಯ ಕ್ರಮದ ಘನ ಉಪಸ್ಥಿತಿ ವಹಿಸುವರು. ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಶಾಸಕರಾದ ಸಿ.ಪಿ. ಯೋಗೇಶ್ವರ್ ಅವರು ಅಧ್ಯಕ್ಷತೆ ವಹಿ ಸುವರು. ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಸಂಸದರಾದ ಡಾ. ಸಿ.ಎನ್. ಮಂಜುನಾಥ್, ವಿಧಾನಪರಿಷತ್ ಶಾಸಕರಾದ ಎಸ್. ಪುಟ್ಟಣ್ಣ, ಎಸ್. ರವಿ, ಸುಧಾಮ್ ದಾಸ್, ರಾಮೋಜಿ ಗೌಡ, ರಾಜ್ಯ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಎಚ್.ಎಂ. ರೇವಣ್ಣ, ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ಅಧ್ಯಕ್ಷರಾದ ಎನ್. ಗಂಗಾಧರ್, ಬೆಂಗಳೂರು ದಕ್ಷಿಣ ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಕೆ. ರಾಜು, ಬಿ.ಎಂ.ಐ.ಸಿ.ಪಿ.ಎ ಅಧ್ಯಕ್ಷರಾದ ರಘುನಂದನ್ ರಾಮಣ್ಣ, ಚನ್ನಪಟ್ಟಣ ತಾಲ್ಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ರಂಗನಾಥ್, ಚನ್ನಪಟ್ಟಣ ನಗರಸಭೆ ಅಧ್ಯಕ್ಷರಾದ ಬಿ.ಎಂ. ನಾಗೇಶ್ ಹಾಗೂ ಚನ್ನಪಟ್ಟಣ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾದ ಎಸ್. ಆರ್. ಪ್ರಮೋದ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.



**ಮೈಸೂರು ನಗರ ಜೆಡಿಎಸ್ ಉಪಾಧ್ಯಕ್ಷ ಯದುನಂದನ್ ನೇತೃತ್ವದಲ್ಲಿ ಚಾಮುಂಡಿ ಬೆಟ್ಟದ ಪಾದದ ಬಳಿ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಪತ್ನಿ ಸರಳತೆಯ ಸಾಕಾರಮೂರ್ತಿ ಚೆನ್ನಮ್ಮ ದೇವೇಗೌಡರ ಭಾವಚಿತ್ರ ಹಿಡಿದು ಮೇಣದಬತ್ತಿ ಬೆಳಗಿಸಿ ಸಂತಾಪ ಸಲ್ಲಿಸಿದರು. ವೆಂಕಟೇಶ್, ಮಂಜುಗೌಡ, ಯೋಗಾನಂದ, ಮಹೇಶ್, ಶ್ರೀಕಾಂತ್ ಕಶ್ಯಪ್, ಸ್ವಾಮಿ, ಚಂದ್ರು, ಕುಮಾರ್ ಇನ್ನಿತರರು ಸಂತಾಪ ಸಲ್ಲಿಸಿದರು.**

## ವಿದ್ಯಾರ್ಥಿಗಳಿಗೆ ಸ್ವಾಗತ ಕಾರ್ಯಕ್ರಮ



**ಶ್ರವಣಬೆಳಗೊಳ:** ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕ ಪಡೆದು ಪ್ರತಿಭಾ ಪುರಸ್ಕಾರಕ್ಕೆ ಭಾಜನರಾಗುತ್ತಿರುವ ವಿದ್ಯಾರ್ಥಿಗಳ ಸಾಧನೆಯು ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಬೇಕು ಎಂದು ಕಾಲೇಜಿನ ಪ್ರಾಂಶುಪಾಲ ಡಾ. ಎಸ್.ದಿನೇಶ್ ಹೇಳಿದರು.

ಪಟ್ಟಣದ ಎಸ್.ಎನ್. ಪಿಯು ಕಾಲೇಜಿನಲ್ಲಿ ನಡೆದ ಪ್ರತಿಭಾ ಪುರಸ್ಕಾರ ಹಾಗೂ ಪ್ರಥಮ ಪಿಯುಸಿ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಿರಂತರ ಪರಿಶ್ರಮ, ಶಿಸ್ತು ಹಾಗೂ ಗುರಿಯೊಂದಿಗೆ ಅಧ್ಯಯನ ಮಾಡಿದರೆ ಉತ್ತಮ ಫಲಿತಾಂಶ ಗಳಿಸಲು ಸಾಧ್ಯ. ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಯಶಸ್ಸು ಕಾಲೇಜಿನ ಹೆಮ್ಮೆಯಾಗಿದ್ದು, ಪ್ರಥಮ ಪಿಯುಸಿ ವಿದ್ಯಾರ್ಥಿಗಳು ಅವರ ಸಾಧನೆಯನ್ನು ಮಾದರಿಯಾಗಿ ತೆಗೆದುಕೊಂಡು ಈಗಿನಿಂದಲೇ ಯೋಜಿತವಾಗಿ ಓದಿನತ್ತ ಗಮನ ಹರಿಸಬೇಕು ಎಂದರು.

ಕಾಲೇಜಿನ ಆಡಳಿತಾಧಿಕಾರಿ ಡಾ. ರಾಜಕಿರಣ್ ಬಲ್ಲಾಳ್, ಶ್ರೀ ಬಾಹುಬಲಿ ಶಿಕ್ಷಣ ಸಂಸ್ಥೆಯ ಸದಸ್ಯ ಹೇಮಂತ್ ಜೈನ್ ಮಾತನಾಡಿದರು. ಈ ಸಂದರ್ಭದಲ್ಲಿ ದ್ವಿತೀಯ ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಾದ ತನುಶ್ರೀ, ನಯನ, ತನುಶ್ರೀ ಬಾಹುಬಲಿ, ಮೋನಿಕಾ ಹಾಗೂ ನಿಶಾ ರವರಿಗೆ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು.

ಬಾಹುಬಲಿ ನರ್ಸಿಂಗ್ ಶಾಲೆಯ ಪ್ರಾಂಶುಪಾಲೆ ಪವಿತ್ರ, ಕನ್ನಡ ಸಾಹಿತ್ಯ ಪರಿಷತ್ ಶ್ರವಣಬೆಳಗೊಳ ಘಟಕದ ಅಧ್ಯಕ್ಷ ನಾಗೇಂದ್ರ ರಾಯ, ಶ್ರೀ ಕೂಷ್ಮಾಂಡಿನಿ ಮಹಿಳಾ ಸಮಾಜದ ಕಾರ್ಯದರ್ಶಿ ಪಷ್ಪಲತಾ ಇದ್ದರು.

## ಗಾಯಕಿ ಎಸ್.ಜಾನಕಿಗೆ ನುಡಿನಮನ

**ಅರಸೀಕೆರೆ:** ಶಿಕ್ಷಕರಾದ ಗಂಗಾಧರ್ ತೇವರಿಮಠ್ ದಂಪತಿಗಳ ನಿವಾಸದಲ್ಲಿ ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ ಹಾಗೂ ತಾಲೂಕು ಜಾನಪದ ಪರಿಷತ್ ವತಿಯಿಂದ ಗಾನ ಕೋಗಿಲೆ ಎಸ್.ಜಾನಕಿ ಅವರ ನುಡಿನಮನ ಹಾಗೂ ಗಾನಯಾನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮವನ್ನು ಜಿಲ್ಲಾ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ರವಿ ನಾಕಲಗೂಡು ಉದ್ಘಾಟಿಸಿದರು. ಅತಿಥಿಗಳಾಗಿ ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಉದಯರವಿ, ನಗರ ಪೋಲೀಸ್ ವೃತ್ತ ನಿರೀಕ್ಷಕ ಕೃಷ್ಣಕುಮಾರ್, ಕೇಂದ್ರ ಸಾಹಿತ್ಯ ವೇದಿಕೆ ಅಧ್ಯಕ್ಷ ಕೆ.ಎಸ್.ಮಂಜುನಾಥ್ ಜಾನಪದ ಪರಿಷತ್ತಿನ ಅಧ್ಯಕ್ಷ ಬಿ. ಪರಮೇಶ್, ಸುದಾ ಕಲ್ಯಾಣ್ ಕುಮಾರ್ ಕೆ.ಸಿ., ನಟರಾಜ್ ಉಪಸ್ಥಿತರಿದ್ದರು. ಪ್ರೌಢಶಾಲಾ ಸಹಶಿಕ್ಷಕರ ಸಂಘದ ಅಧ್ಯಕ್ಷ ರೇವಣಸಿದ್ದಯ್ಯ ಹಿರೇಮಠ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.



# ಕಲಾಪ್ರಕಾರಗಳನ್ನು ಉಳಿಸಿ

## ಡಿವೈಎಸ್ಪಿ ಸ್ನೇಹರಾಜ್ ಹೇಳಿಕೆ | ಸಮಾರೋಪ ಸಮಾರಂಭ

ಚಾಮರಾಜನಗರ: ಸಂಗೀತ, ನೃತ್ಯ, ನಾಟಕ, ಗಮಕ ಹಾಗೂ ಕಥಾಕೀರ್ತನದಂತಹ ವೈವಿಧ್ಯಮಯ ಕಲಾ ಪ್ರಕಾರಗಳಿಗೆ ಜೀವ ತುಂಬಿ, ಅವನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯುವ ಗುರುತರ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ ಎಂದು ಡಿವೈಎಸ್ಪಿ ಸ್ನೇಹರಾಜ್ ಅಭಿಪ್ರಾಯಪಟ್ಟರು.



ನಗರದ ಚಾಮರಾಜೇಶ್ವರ ದೇವಸ್ಥಾನದ ಆವರಣದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಸಹಯೋಗದಲ್ಲಿ ಎರಡು ದಿನಗಳ ಕಾಲ ಹಮ್ಮಿಕೊಳ್ಳಲಾಗಿದ್ದ 'ಮಾಧುರ್ಯ-2026' ಕಾರ್ಯಕ್ರಮದ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

### ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಗಣ್ಯರ ಉಪಸ್ಥಿತಿ

ವೇದಿಕೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಎನ್.ಮುನಿರಾಜು, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಸದಸ್ಯ ಸಂಚಾಲಕ ಪದ ದೇವ ರಾಜು, ಅಕಾಡೆಮಿ ಸದಸ್ಯರಾದ ಡಿ.ಆರ್. ರಾಜಪ್ಪ, ನಿರ್ಮಲಾ ಶಾಸ್ತ್ರಿ, ಡಾ. ಮದ್ದೇರಿ ಮುನಿರೆಡ್ಡಿ ಹಾಗೂ ಸಾಹಿತಿ ಡಾ. ಮಹೇಶ್ ಚಿಕ್ಕಲ್ಲೂರು ಉಪಸ್ಥಿತರಿದ್ದರು. ಸಭಾ ಕಾರ್ಯಕ್ರಮದ ಬಳಿಕ ಮಕ್ಕ ಳಿಂದ ಭರತನಾಟ್ಯ ಹಾಗೂ ಜಾನಪದ ಕಲಾವಿದ ಸಿ.ಎಂ. ನರಸಿಂಹಮೂರ್ತಿ ಅವರ ತಂಡದಿಂದ ಭಕ್ತಿಗೀತೆ ಮತ್ತು ಸುಗಮ ಸಂಗೀತ ಕಾರ್ಯಕ್ರಮಗಳು ಮೂಡಿಬಂದವು. ಇದೇ ವೇಳೆ ಗಣ್ಯರು ಕಲಾವಿದರಿಗೆ ಪ್ರಮಾಣಪತ್ರ ವಿತರಿಸಿ ಗೌರವಿಸಿದರು.

### ಕಥಾಕೀರ್ತನೆಗೆ ಮರುಜೀವ ಅಗತ್ಯ

ಕಾರ್ಯಕ್ರಮದಲ್ಲಿ ಸಮಾರೋಪ ನುಡಿಗಳನ್ನಾಡಿದ ಹಿರಿಯ ಕೀರ್ತನಕಾರ, ರಾಜ್ಯೋತ್ಸವ ಹಾಗೂ ಕರ್ನಾಟಕ ಕಲಾಶ್ರೀ ಪ್ರಶಸ್ತಿ ಪುರಸ್ಕೃತ ಡಾ. ಲಕ್ಷ್ಮಣದಾಸ್ ಅವರು, ಕಥಾಕೀರ್ತನ (ಹರಿಕಥೆ) ಕಲೆಯು ಭಾರತೀಯ ಸಂಸ್ಕೃತಿ ಹಾಗೂ ಅಧ್ಯಾತ್ಮದ ಸಂಕೀರ್ಣವಾಗಿದೆ. ಅದಕ್ಕೆ ಯುಗಯುಗಗಳ ಇತಿಹಾಸವಿದೆ. ಆದರೆ, ಇಂದು ಈ ಕಲೆ ನಶಿಸುತ್ತಿದ್ದು, ಕಲಾವಿದರ ಬದುಕು ಶೋಚನೀಯವಾಗಿದೆ. ಕಥಾಕೀರ್ತನೆ ಹಾಗೂ ಗಮಕ ಕಲೆಗಳನ್ನು ಹೆಚ್ಚು ಪ್ರಚುರಪಡಿಸಿ, ಅವುಗಳಿಗೆ ಜೀವ ತುಂಬುವ ಅನಿವಾರ್ಯತೆ ಇದೆ. ಹರಿಕಥೆಯ ವಿಶಿಷ್ಟ ಪರಂಪರೆಯನ್ನು ಉಳಿಸಲು ಕಲಾವಿದರು ತಮ್ಮ ಕೌಶಲವನ್ನು ವೃದ್ಧಿಸಿಕೊಳ್ಳಬೇಕು. ತಾಯಿ ವಾಗ್ದೇವಿ ಎಲ್ಲರ ನಾಲಿಗೆಯಲ್ಲೂ ನಲಿಯಬೇಕಿದೆ ಎಂದರು.

### ಕಲಾಭ್ಯಾಸದಿಂದ ನೆಮ್ಮದಿಯ ಜೀವನ

ನಮ್ಮ ದೇಶದ ಭರತನಾಟ್ಯವನ್ನು ಕಲಿಯಲು ಇಂದು ವಿದೇಶಿಗರು ಅಪಾರ ಆಸಕ್ತಿ ತೋರುತ್ತಿದ್ದಾರೆ. ಆದರೆ ನಾವು ವೀಣೆ, ತಬಲಾ, ಗಿಟಾರ್, ಹಾರ್ಮೋನಿಯಂ ಮುಂತಾದ ವಾದ್ಯಗಳಿಂದ ದೂರವಾಗುತ್ತಿದ್ದೇವೆ. ದೈನಂದಿನ ಒತ್ತಡವನ್ನು ನಿವಾರಿಸಿಕೊಂಡು ಶಾಂತಿ, ನೆಮ್ಮದಿಯ ಜೀವನ ನಡೆಸಲು ಸಂಗೀತ ಮತ್ತು ನೃತ್ಯದಂತಹ ಕಲೆಗಳು ಅತ್ಯಗತ್ಯವಾಗಿವೆ. ಆದ್ದರಿಂದ ಈ ಕಲಾಪ್ರಕಾರಗಳನ್ನು ಉಳಿಸಿ, ಬೆಳೆಸುವ ದೃಢ ನಿರ್ಧಾರವನ್ನು ನಾವೆಲ್ಲರೂ ಮಾಡಬೇಕಿದೆ ಎಂದರು.

### ಸಂಸ್ಕೃತಿಯ ಅರಿವು ಮೂಡಿಸಿ

ಭಾರತವು ಕಲೆ, ಸಾಹಿತ್ಯ ಹಾಗೂ ಸಂಸ್ಕೃತಿಯಲ್ಲಿ ಅತ್ಯಂತ ಶ್ರೀಮಂತ ದೇಶವಾಗಿದೆ. ಆದರೆ, ಇಂದಿನ ಮಕ್ಕಳಿಗೆ ಈ ಭವ್ಯ ಪರಂಪರೆಯ ಅರಿವಿಲ್ಲದಿರುವುದು ವಿಷಾದನೀಯ. ಇಂದಿನ ಯುವಜನತೆ ಮೊಬೈಲ್ ಗೀಳಿಗೆ ಸಿಲುಕಿ ಕೇವಲ 'ರೀಲ್ಸ್' ನೋಡುವುದರಲ್ಲೇ ಕಾಲ ಕಳೆಯುತ್ತಿರುವುದು ವಿಪರ್ಯಾಸ. ಪೋಷಕರು ತಮ್ಮ ಮಕ್ಕಳಿಗೆ ಪ್ರತಿದಿನ ಒಂದೊಂದು ಕಲಾಪ್ರಕಾರವನ್ನು ಪರಿಚಯಿಸುವ ಹಾಗೂ ಆಸ್ವಾದಿಸಲು ಕಲಿಸುವ ಮೂಲಕ ಈ ಕಲೆಗಳಿಗೆ ಮರುಜೀವ ನೀಡಬೇಕು ಎಂದು ಅವರು ಸಲಹೆ ನೀಡಿದರು.

## ನಾಡಗೀತೆಗೆ ತಿದ್ದುಪಡಿ ಕುವೆಂಪುಗೆ ಅಪಮಾನ

ಮೈಸೂರು: ನಾಡಗೀತೆ ತಿದ್ದುಪಡಿ ಕುರಿತಂತೆ ರಾಜ್ಯ ಸರ್ಕಾರ ಕೆಲವರ ಒತ್ತಡಕ್ಕೆ ಮಣಿದು ಸಮಿತಿ ರಚಿಸಿ ಅದರ ಶಿಫಾರಸನ್ನು ಜಾರಿಗೊಳಿಸಲು ಮುಂದಾಗಿರುವುದು ಬೇಸರದ ಸಂಗತಿಯಾಗಿದೆ.



ಇದು ಕವಿ ಕುವೆಂಪು ಅವರ ಗೀತೆಗೆ ಮಾಡುವ ಅಪಚಾರವಾಗಿದೆ. ಏಕೆಂದರೆ ಕೆಲವರು ಕೇವಲ ಅವರು ಈ ಗೀತೆ ಹೇಗೆ ಹುಟ್ಟಿತೆಂದು ವಿವರಿಸಲು ನೀಡಿದ ಹಸ್ತಪ್ರತಿಯ ಸಾಲನ್ನು ಉದಾಹರಿಸುತ್ತಿದ್ದಾರೆಯೇ ಹೊರತು ಅವರ ಅಂತಿಮಗೊಳಿಸಿ ಪ್ರಕಟಿಸಿದ ಗೀತೆಯನ್ನಲ್ಲ ಎಂದು ಗಾಯಕಿ ಶ್ವೇತಾ ಮಡಪ್ಪಾಡಿ ಕಿಡಿಕಾರಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ನಾಡಗೀತೆ ನಾಡಿನ ಅಸ್ಮಿತೆಯನ್ನು ಎತ್ತಿ ಹಿಡಿಯುವುದಾಗಿದ್ದು, ಅದನ್ನು ತಿದ್ದುವ ಪ್ರಯತ್ನವೇ ಅಕ್ಷಮ್ಯ ಅಪರಾಧ. ಯಾವುದೇ ಒಂದು ಕಾವ್ಯವನ್ನು ತಿದ್ದುವ ಹಕ್ಕು ಮತ್ತು ಸ್ವಾತಂತ್ರ ಕೇವಲ ಅದನ್ನು ರಚಿಸಿದ ಕವಿಗೆ ಮಾತ್ರ ಇರುತ್ತದೆ. ಅದು ನಾಡಿನ ಜನರ ಆಸ್ತಿಯೂ ಹೌದು. ಹೀಗಾಗಿ ಸರ್ಕಾರ ಏಕಾಏಕಿ ಯಾರೋ ಹತ್ತು ಜನರ ಸಮಿತಿ ರಚಿಸಿ ತಿದ್ದುವ ಕಾರ್ಯ ಮಾಡಲು ಹೊರಟರೆ ಕನ್ನಡಿಗರಾದ ನಾವು ಸುಮ್ಮನಿರಲು ಸಾಧ್ಯವೇ ಎಂದರು.

ಈಗ ವಾದಿಸುವವರು ನೀಡುತ್ತಿರುವ ಉದಾಹರಣೆ ಕುವೆಂಪು ಅವರು ಒಂದು ಬರವಣಿಗೆಯಲ್ಲಿ ನಾಡಗೀತೆ ಹೇಗೆ ಹುಟ್ಟಿತು ಎಂದು ವಿವರಿಸಲು ತಮ್ಮ ಹಸ್ತಪ್ರತಿಯಲ್ಲಿದ್ದ ಸಾಲನ್ನು ಉದಾಹರಿಸಿರುವುದಾಗಿದೆ. ಆದರೆ ಕವಿ ನಂತರ ಅಂತಿಮಗೊಳಿಸಿ ಪ್ರಕಟಿಸಿದ ಗೀತೆಯನ್ನು ಮರೆಮಾಚುತ್ತಿದ್ದಾರೆಂದು ಆರೋಪಿಸಿದರು. ಅದರ ರಚನೆಯ ರೂಪಾಂಶ ನಾನು ಬೆಳೆದಂತೆಯಲ್ಲ ಬದಲಾವಣೆ ಹೊಂದುತ್ತಾ ಕಡೆಗೆ ಕೊಳಲು ಕವನ ಸಂಗ್ರಹ ಅಚ್ಚಾದಾಗ ಒಂದು ಸ್ಥಿಮಿತಕ್ಕೆ ಬಂದು ನಿಂತಿತು ಎಂದು ವಿವರಿಸಿದ್ದಾರೆ. ಹೀಗಾಗಿ ಅವರು ಅಂತಿಮಗೊಳಿಸಿದ ಗೀತೆಯೇ ಅಂತಿಮವೆಂದು ಪರಿಗಣಿಸಬೇಕು. ಹೀಗಾಗಿ ಈಗ ಸಮಿತಿ ಮಾಡಿರುವ ಶಿಫಾರಸನ್ನು, ಸರ್ಕಾರದ ನಡೆಯನ್ನು ಕನ್ನಡಿಗರೆಲ್ಲರೂ ವಿರೋಧಿಸಬೇಕು. ಈ ಕುರಿತು ದೊಡ್ಡ ಚರ್ಚೆ ಆಗಬೇಕೆಂದು ಕೋರಿದರು.

## ಹಸಗೂಲಿ-ಬೆಟ್ಟದಮಾದಳ್ಳಿ ರಸ್ತೆಯಲ್ಲಿ ಹುಲಿ ಸಂಚಾರ

ಗುಂಡ್ಲುಪೇಟೆ, ಜು. 18: ತಾಲ್ಲೂಕಿನ ಹಸಗೂಲಿ?ಬೆಟ್ಟದಮಾದಳ್ಳಿ ಸಂಪರ್ಕ ರಸ್ತೆಯಲ್ಲಿ ಶನಿವಾರ ಬೆಳಿಗ್ಗೆ ಸುಮಾರು 6 ಗಂಟೆ ವೇಳೆಗೆ ಹುಲಿಯೊಂದು ರಸ್ತೆ ದಾಟಿ ಅರಣ್ಯದತ್ತ ತೆರಳಿರುವ ಘಟನೆ ಗ್ರಾಮಸ್ಥರಲ್ಲಿ ಆತಂಕ ಮೂಡಿಸಿದೆ.

ರಸ್ತೆ ಬದಿಯ ಜಮೀನಿನಲ್ಲಿ ವಾಸವಾಗಿರುವ ಚಿಕ್ಕಣ್ಣ ಅವರ ಪುತ್ರಿ ಬೆಳಗಿನ ವೇಳೆ ಮನೆಯಿಂದ ಹೊರಗೆ ಬಂದಾಗ ಹುಲಿ ರಸ್ತೆ ದಾಟುತ್ತಿರುವುದನ್ನು ಗಮನಿಸಿದ್ದಾರೆ. ಈ ವೇಳೆ ಮನೆಯ ನಾಯಿಗಳು ಜೋರಾಗಿ ಬೊಗಳುತ್ತಾ ಓಡಿ ಬಂದು ಅ ವಿ ತ ು ಕೊಂಡಿದ್ದು, ಬಳಿಕ ಗಮನಿಸಿದಾಗ ಹುಲಿ ರಸ್ತೆ ದಾಟುತ್ತಿರುವುದು ಕಂಡುಬಂದಿದೆ. ಇದರಿಂದ ಭಯಗೊಂಡು ತಕ್ಷಣ ಮನೆಯೊಳಗೆ ಓಡಿ ಹೋಗಿರುವುದಾಗಿ ಅವರು ತಿಳಿಸಿದ್ದಾರೆ.



ಓಂಕಾರ್ ಅರಣ್ಯ ವಲಯದ ಅಧಿಕಾರಿಗಳು ಕೂಡಲೇ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು, ಹುಲಿಯನ್ನು ಸೆರೆಹಿಡಿಯಲು ಬೋನ್ ಅಳವಡಿಸಬೇಕು ಹಾಗೂ ನಿರಂತರ ಕೂಂಬಿಂಗ್ ಕಾರ್ಯಾಚರಣೆ ನಡೆಸಬೇಕು ಎಂದು ಗ್ರಾಮಸ್ಥರು ಅರಣ್ಯ ಇಲಾಖೆಯನ್ನು ಒತ್ತಾಯಿಸಿದ್ದಾರೆ.

## ಸೋನಂ ವಾಂಗ್ಚುಕ್ ಬಂಧನಕ್ಕೆ ಖಂಡನೆ

**ಮೈಸೂರು:** ನೀಟ್ ಪರೀಕ್ಷಾ ಅಕ್ರಮಗಳ ವಿರುದ್ಧ ದೆಹಲಿಯಲ್ಲಿ ಶಾಂತಿಯುತ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದ ಪರಿಸರ ಹೋರಾಟಗಾರ ಸೋನಂ ವಾಂಗ್ಚುಕ್ ಹಾಗೂ ಇತರ ಹೋರಾಟಗಾರರನ್ನು ಪೊಲೀಸರು ಬಲವಂತವಾಗಿ ಬಂಧಿಸಿರುವುದನ್ನು ಖಂಡಿಸಿ ರಾಮಸ್ವಾಮಿ ವೃತ್ತದಲ್ಲಿ ಎಐಡಿಎಸ್‌ಓ ವತಿಯಿಂದ ಪ್ರತಿಭಟನೆ ನಡೆಸಲಾಯಿತು.



ರಾಜ್ಯ ಉಪಾಧ್ಯಕ್ಷ ಅಭಯ ದಿವಾಕರ್ ಮಾತನಾಡಿ, ಕೇಂದ್ರ ಸರ್ಕಾರ ಹಾಗೂ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ನಡೆಸಿದ ಪ್ರಮುಖ ಪರೀಕ್ಷೆಗಳಲ್ಲಿ ನಡೆದಿರುವ ಸರಣಿ ಅಕ್ರಮಗಳು ದೇಶದ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯವನ್ನು ಕತ್ತಲೆಗೆ ದೂಡಿವೆ. ಪರೀಕ್ಷೆ ರದ್ದಾದ ಕೇವಲ ಒಂದೇ ತಿಂಗಳ ಅವಧಿಯಲ್ಲಿ ದೇಶಾದ್ಯಂತ 23 ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇಷ್ಟಾದರೂ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿದ್ದಾರೆ ಎಂದರು.

ವಿಶ್ರಾಂತ ಕುಲಪತಿ ಪ್ರೊ.ಸಬಿಹ ಭೂಮಿಗೌಡ ಮಾತನಾಡಿ, ಪ್ರಶ್ನೆ ಪತ್ರಿಕೆ ಸೋರಿಕೆಯಾಗಿರುವುದು ಕೇವಲ ವ್ಯವಸ್ಥೆಯ ವೈಫಲ್ಯವಲ್ಲ, ಶಿಕ್ಷಣ ಮಂತ್ರಿಗಳ ಬೇಜವಾಬ್ದಾರಿತನವಾಗಿದೆ. ಲಕ್ಷಾಂತರ ಜನರು ಬೀದಿಗಿಳಿದರೂ ಕಿವಿಕೊಡದ ಕೇಂದ್ರ ಸರ್ಕಾರ ಉದ್ಧಟತನ ಪ್ರದರ್ಶಿಸುತ್ತಿದೆ ಎಂದು ದೂರಿದರು. ಸೋನಂ ವಾಂಗ್ಚುಕ್ ಮತ್ತು ಇತರ ಸತ್ಯಾಗ್ರಹಿಗಳೊಂದಿಗೆ ಕೇಂದ್ರ ಸರ್ಕಾರ ತಕ್ಷಣವೇ ಪ್ರಜಾಸತ್ತಾತ್ಮಕ ಚರ್ಚೆ ಆರಂಭಿಸಬೇಕು. ಪರೀಕ್ಷಾ ಅಕ್ರಮದ ಹೊಣೆ ಹೊತ್ತು ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಬೇಕು. ಸಂಪೂರ್ಣವಾಗಿ ವಿಫಲವಾಗಿರುವ ಎನ್‌ಟಿಎ ಸಂಸ್ಥೆಯನ್ನು ರದ್ದುಗೊಳಿಸಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಜನಪದ ಸೇವಾ ಟ್ರಸ್ಟ್‌ನ ಸಂತೋಷ ಕೌಲಗಿ, ಮಹಿಳಾ ಹೋರಾಟಗಾರ್ತಿ ರತಿರಾವ್, ಸಾಮಾಜಿಕ ಹೋರಾಟಗಾರ ಜಿ.ಪಿ.ಬಸವರಾಜು, ಎಐಡಿಎಸ್‌ಓ ಜಿಲ್ಲಾ ಕಾರ್ಯದರ್ಶಿ ನಿತಿನ್, ಜಿಲ್ಲಾಧ್ಯಕ್ಷೆ ಚಂದ್ರಕಲಾ, ಉಪಾಧ್ಯಕ್ಷೆ ಸ್ವಾತಿ, ಪದಾಧಿಕಾರಿಗಳಾದ ಹೇಮಾ, ಚಂದ್ರಿಕಾ, ಅಂಜಲಿ, ದಿಶಾ, ಅಭಿಷೇಕ್ ಇತರರು ಭಾಗವಹಿಸಿದ್ದರು.

**ಜಿಲ್ಲಾಧಿಕಾರಿ ಶ್ರೀರೂಪ ಕಿವಿಮಾತು | 'ಭರವಸೆಯ ಹೆಜ್ಜೆ' ಕಾರ್ಯಕ್ರಮ ಜಿಲ್ಲೆಯ ವಿದ್ಯಾರ್ಥಿಗಳಿಗೆ ಉಪಯುಕ್ತವಾಗಲಿ: ಆಶಯ**

# ವಿದ್ಯಾರ್ಥಿ ಜೀವನದಲ್ಲಿ ಕಠಿಣ ಪರಿಶ್ರಮವಿದ್ದರೆ ಮಾತ್ರ ಯಶಸ್ಸು

ಚಾಮರಾಜನಗರ: ವಿದ್ಯಾರ್ಥಿ ಜೀವನದಲ್ಲಿ ಕಠಿಣ ಪರಿಶ್ರಮವಿದ್ದರೆ ಮಾತ್ರ ಭವಿಷ್ಯದಲ್ಲಿ ಯಶಸ್ಸು ಕಾಣಲು ಸಾಧ್ಯ ಎಂದು ಜಿಲ್ಲಾಧಿಕಾರಿ ಶ್ರೀರೂಪ ಕಿವಿಮಾತು ಹೇಳಿದರು.

ನಗರದ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ಸಮನ್ವಯ ಟ್ರಸ್ಟ್, ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಪದವಿ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ 'ಭರವಸೆಯ ಹೆಜ್ಜೆ' (ಬದುಕಿನ ಸಾಧ್ಯತೆಗಳ ಕುರಿತ ಕಾರ್ಯಾಗಾರ) ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.



### ಬೌದ್ಧಿಕ ಬೆಳವಣಿಗೆಗೆ ಒತ್ತು

ಈ ಕಾರ್ಯಕ್ರಮವು ಜಿಲ್ಲೆಯ ವಿದ್ಯಾರ್ಥಿಗಳಿಗೆ ಉಪಯುಕ್ತವಾಗಲಿದ್ದು, ಚಾಮರಾಜನಗರ ಜಿಲ್ಲೆಗೆ ಇದೊಂದು ಐತಿಹಾಸಿಕ ದಿನವಾಗಿದೆ. ಹಿಂದೆ ಜಿಲ್ಲಾಡಳಿತದ ವತಿಯಿಂದ 'ಅಭ್ಯುದಯ' ಎಂಬ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಇದೀಗ 'ಇಂಡಿಯಾ ಫಾರ್ ಐಎಎಸ್' ಸಂಸ್ಥೆಯೊಂದಿಗೆ ಸೇರಿ ಜಿಲ್ಲೆಯ ಯುವಜನತೆ ಕೇವಲ ಭೌಗೋಳಿಕವಾಗಿ ಮಾತ್ರವಲ್ಲದೆ, ಬೌದ್ಧಿಕವಾಗಿಯೂ ಬೆಳೆಯಬೇಕು ಎಂಬ ನಿಟ್ಟಿನಲ್ಲಿ ಕಾಲೇಜು ವಿದ್ಯಾರ್ಥಿಗಳಿಗಾಗಿ ಈ ಕಾರ್ಯಕ್ರಮವನ್ನು ರೂಪಿಸಲಾಗಿದ್ದು, ಇದು ನಿರಂತರವಾಗಿ ಮುಂದುವರಿಯುತ್ತಿದೆ ಎಂದರು.

ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಎಲ್ಲರೂ ಯಶಸ್ವಿಯಾಗಲು ಸಾಧ್ಯವಿಲ್ಲ. ಹಾಗೆಂದ ಮಾತ್ರಕ್ಕೆ ಜೀವನದ ಮೇಲಿನ ಭರವಸೆಯನ್ನು ಕಳೆದುಕೊಳ್ಳಬಾರದು. ವಿದ್ಯಾರ್ಥಿಗಳಿಗೆ ವಿಭಿನ್ನ ದೃಷ್ಟಿಕೋನವನ್ನು ನೀಡುವ 'ಭರವಸೆಯ ಹೆಜ್ಜೆ' ಕಾರ್ಯಕ್ರಮವನ್ನು ಎಲ್ಲರೂ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

### ಸರಿಯಾದ ಮಾರ್ಗದರ್ಶನದ ಅಗತ್ಯ

ಜಿಲ್ಲೆಯಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ಇಂತಹ ಕಾರ್ಯಕ್ರಮಗಳನ್ನು ಆಯೋಜಿಸಿದರೆ ಯುವಜನತೆಯ ಬೆಳವಣಿಗೆಗೆ ಸಹಕಾರಿಯಾಗುತ್ತದೆ. ಚಾಮರಾಜನಗರ ಕೇವಲ ಹಿಂದುಳಿದ ಜಿಲ್ಲೆಯಲ್ಲ, ಇಲ್ಲಿ ಸಾಕಷ್ಟು ಬುದ್ಧಿವಂತ ವಿದ್ಯಾರ್ಥಿಗಳಿದ್ದಾರೆ. ನಾನು ಹಲವು ಶಾಲಾ-ಕಾಲೇಜುಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದ್ದೇನೆ. ಅವರ ಗುರಿ ಹಾಗೂ ಚಿಂತನೆಗಳಿಗೆ ಸರಿಯಾದ ಮಾರ್ಗ ದರ್ಶನದ ಕೊರತೆಯಿದೆ. ಈ ನಿಟ್ಟಿನಲ್ಲಿ ಸಮನ್ವಯ ಟ್ರಸ್ಟ್ ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ನೀಡಿ ಉನ್ನತ ಮಟ್ಟಕ್ಕೆ ಕೊಂಡೊಯ್ಯಲು ಶ್ರಮಿಸುತ್ತಿರುವುದು ಉತ್ತಮ ಬೆಳವಣಿಗೆ ಎಂದು ಪ್ರಶಂಸಿದರು.ಅಧ್ಯಕ್ಷತೆಯನ್ನು ಸಮನ್ವಯ ಟ್ರಸ್ಟ್ ನಿರ್ದೇಶಕ ಸಮನ್ವಯ ಕಾಶಿ ವಹಿಸಿದ್ದರು. ವೇದಿಕೆಯಲ್ಲಿ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಎನ್. ವಿಶ್ವನಾಥ್, ತಾಲೂಕು ಅಧಿಕಾರಿ ಲಿಂಗರಾಜು, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಎನ್. ಮುನಿರಾಜು, ಸಂಪನ್ಮೂಲ ವ್ಯಕ್ತಿಗಳಾದ ಸರಣ್ಯ ಫ್ರಾನ್ಸಿಸ್, ದೀಪಕ್ ಬನ್ನೂರ್, ಬಸವರಾಜ್ ಉಮ್ರಾಣಿ ಹಾಗೂ ಅಪಾರ ಸಂಖ್ಯೆಯ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

### ಕೀಳರಿಮೆ ಬಿಟ್ಟು ಆತ್ಮವಿಶ್ವಾಸ ಬೆಳೆಸಿಕೊಳ್ಳಿ

ಕರ್ನಾಟಕ ಗೃಹ ಮಂಡಳಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಆಡಳಿತಾಧಿಕಾರಿ ಕೆ.ಎ. ದಯಾನಂದ್ ಮಾತನಾಡಿ, ಗ್ರಾಮೀಣ ಪ್ರದೇಶದ, ಆರ್ಥಿಕ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ಮತ್ತು ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳಲ್ಲಿ ಇಂಗ್ಲಿಷ್ ಭಾಷೆಯ ಬಗ್ಗೆ ಇರುವ ಕೀಳರಿಮೆಯನ್ನು ಹೋಗಲಾಡಿಸಿ, ಆತ್ಮವಿಶ್ವಾಸ ತುಂಬುವ ನಿಟ್ಟಿನಲ್ಲಿ ಸಮನ್ವಯ ಟ್ರಸ್ಟ್ ವತಿಯಿಂದ 'ಭರವಸೆಯ ಹೆಜ್ಜೆ' ಕಾರ್ಯಾಗಾರವನ್ನು ಆಯೋಜಿಸಿಕೊಂಡು ಬರಲಾಗುತ್ತಿದೆ. ಚಾಮರಾಜನಗರದಲ್ಲಿ ನಡೆಯುತ್ತಿರುವುದು ಈ ಸರಣಿಯ 6ನೇ ಕಾರ್ಯಕ್ರಮವಾಗಿದೆ. ವಿದ್ಯಾರ್ಥಿಗಳಲ್ಲಿ ಸಕಾರಾತ್ಮಕ ಮನಸ್ಥಿತಿಯನ್ನು ಬೆಳೆಸುವುದರ ಜತೆಗೆ ಯುಪಿಎಸ್ಸಿ (ಗಕಖಅ) ಮತ್ತು ಕೆಪಿಎಸ್ಸಿ (ಏಕಖಅ) ಪರೀಕ್ಷೆಗಳ ತಯಾರಿ ಕುರಿತು ಸಮಗ್ರ ಮಾಹಿತಿ ನೀಡಲಾಗುತ್ತಿದೆ ಎಂದರು.

# ತಪಾಸಣೆ ಮೂಲಕ ರೋಗಗಳ ಆರಂಭಿಕ ಪತ್ತೆ ಸಾಧ್ಯ: ಎ. ಬಿ.ರಮೇಶ್ ಬಂಡಿ ಸಿದ್ದೇಗೌಡ



**ಮಂಡ್ಯ:** ಸಾರ್ವಜನಿಕರು 40 ವರ್ಷ ಮೇಲ್ಪಟ್ಟ ನಂತರ ಕಡ್ಡಾಯವಾಗಿ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು. ತಪಾಸಣೆ ಬಳಿಕ ವೈದ್ಯಕೀಯ ವರದಿಗಳನ್ನು ವೈದ್ಯರಿಗೆ ತೋರಿಸಿ ಅಗತ್ಯ ಫಾಲೋ–ಅಪ್ ಚಿಕಿತ್ಸೆ ಪಡೆಯುವುದು ಉತ್ತಮ ಆರೋಗ್ಯ ಕಾಪಾಡಿಕೊಳ್ಳಲು ಅತ್ಯಂತ ಅವಶ್ಯಕ ಎಂದು ಶ್ರೀ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಅಧ್ಯಕ್ಷರು ಹಾಗೂ ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ಶಾಸಕರಾದ ಎ.ಬಿ ರಮೇಶ ಬಂಡಿಸಿದ್ದೇಗೌಡ ರವರು ತಿಳಿಸಿದರು.

ಜಿಲ್ಲೆಯಲ್ಲಿ ಆಯೋಜಿಸಿದ್ದ ಆರೋಗ್ಯ ತಪಾಸಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಹಾಗೂ ಯಶಸ್ವಿಯಾಗಿ ಆಯೋಜಿಸಿದ ಅಪರ ಜಿಲ್ಲಾಧಿಕಾರಿ ಬಿ.ಸಿ. ಶಿವಾನಂದಮೂರ್ತಿ ಅವರನ್ನು ವೈಯಕ್ತಿಕವಾಗಿ ಅಭಿನಂದಿಸಿದರು. ಜೊತೆಗೆ, ಕಾರ್ಯಕ್ರಮದಲ್ಲಿ ಭಾಗವಹಿಸಿ ಸಾರ್ವಜನಿಕರಿಗೆ ಸೇವೆ ಸಲ್ಲಿಸಿದ ಹಿರಿಯ ವೈದ್ಯಾಧಿಕಾರಿಗಳ ಸೇವೆಯನ್ನು ಶ್ಲಾಘಿಸಿ, ಅವರ ಸಹಕಾರದಿಂದ ಕಾರ್ಯಕ್ರಮ ಯಶಸ್ವಿಯಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಇಂದಿನ ಜೀವನಶೈಲಿಯಲ್ಲಿ ಆರೋಗ್ಯ ಕಾಪಾಡಿಕೊಳ್ಳುವುದು ಪ್ರತಿಯೊಬ್ಬರ ಹೊಣೆಗಾರಿಕೆಯಾಗಿದೆ. ನಾವು ಸೇವಿಸುವ ಆಹಾರ ಪದ್ಧತಿ, ದೈಹಿಕ ಚಟುವಟಿಕೆ ಹಾಗೂ ದಿನನಿತ್ಯದ ಜೀವನಶೈಲಿ ನಮ್ಮ ಆರೋಗ್ಯವನ್ನು ನಿರ್ಧರಿಸುತ್ತವೆ. ಆದ್ದರಿಂದ ಪೌಷ್ಟಿಕ ಆಹಾರ ಸೇವನೆ, ನಿಯಮಿತ ವ್ಯಾಯಾಮ ಹಾಗೂ ಆರೋಗ್ಯಕರ ಜೀವನಶೈಲಿಯನ್ನು ಪ್ರತಿಯೊಬ್ಬರೂ ಅಳವಡಿಸಿಕೊಳ್ಳಬೇಕು ಎಂದು ಅವರು ಸಲಹೆ ನೀಡಿದರು.

ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆ ಕಾರ್ಯದಲ್ಲಿ ಸಾರ್ವಜನಿಕರು ಸಕ್ರಿಯವಾಗಿ ಭಾಗವಹಿಸಬೇಕು. ಬೂತ್ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಮನೆಗಳಿಗೆ ಭೇಟಿ ನೀಡಿದಾಗ ಅಗತ್ಯ ಮಾಹಿತಿ ಮತ್ತು ದಾಖಲೆಗಳನ್ನು ಒದಗಿಸುವ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಲು ಎಲ್ಲರೂ ಸಹಕರಿಸಬೇಕು ಎಂದು ಅವರು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾಧಿಕಾರಿಗಳಾದ ಡಾ. ಕುಮಾರ ಅವರು ಉತ್ತಮ ಆರೋಗ್ಯಕ್ಕಾಗಿ ದೈಹಿಕ ಮತ್ತು ಮಾನಸಿಕ ಕ್ಷೇಮ ಎರಡೂ ಸಮಾನವಾಗಿ ಮುಖ್ಯವಾಗಿವೆ ಎಂದರು. ನಿಯಮಿತ ವ್ಯಾಯಾಮ, ಸಮತೋಲಿತ ಆಹಾರ, ಸಮರ್ಪಕ ನಿದ್ರೆ ಹಾಗೂ ಒತ್ತಡ ನಿರ್ವಹಣೆ ಆರೋಗ್ಯಕರ ಜೀವನಕ್ಕೆ ಮೂಲಾಧಾರವಾಗಿದ್ದು, ಆರೋಗ್ಯ ತಪಾಸಣೆ ಕಾರ್ಯಕ್ರಮಗಳನ್ನು ಸಕಾಲದಲ್ಲಿ ಸದುಪಯೋಗಪಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಮಧುಮೇಹ, ಅಧಿಕ ರಕ್ತದೊತ್ತಡ ಸೇರಿದಂತೆ ಅನೇಕ ಸಾಂಕ್ರಾಮಿಕೇತರ ಕಾಯಿಲೆಗಳನ್ನು ಆರಂಭಿಕ ಹಂತದಲ್ಲೇ ಪತ್ತೆಹಚ್ಚಲು ಆರೋಗ್ಯ ತಪಾಸಣೆ ನೆರವಾಗುತ್ತದೆ. ಇದರಿಂದ ಸೂಕ್ತ ಚಿಕಿತ್ಸೆ ಪಡೆದು ಗಂಭೀರ ಆರೋಗ್ಯ ಸಮಸ್ಯೆಗಳನ್ನು ತಪ್ಪಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಅವರು ಹೇಳಿದರು.

ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಕೀರ್ತಿದಾನಂದ ಸ್ವಾಮೀಜಿಗಳು ದಿವ್ಯ ಸಾನಿಧ್ಯ ವಹಿಸಿ ಮಾತನಾಡಿ, ಆರೋಗ್ಯವೇ ಮಾನವನ ಅಮೂಲ್ಯ ಸಂಪತ್ತು. ಯಾವುದೇ ಕಾಯಿಲೆಯನ್ನು ಆರಂಭಿಕ ಹಂತದಲ್ಲೇ ಪತ್ತೆಹಚ್ಚಿ ಚಿಕಿತ್ಸೆ ಪಡೆಯುವುದರಿಂದ ಉತ್ತಮ ಆರೋಗ್ಯ ಕಾಪಾಡಿಕೊಳ್ಳಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಆದಿಚುಂಚನಗಿರಿ ಸಂಸ್ಥೆಯು ಸಮಾಜದ ಆರೋಗ್ಯ, ಶಿಕ್ಷಣ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಪೂರಕವಾದ ಅನೇಕ ಜನೋಪಯೋಗಿ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳುತ್ತಿದ್ದು, ಸಾರ್ವಜನಿಕರ ಆರೋಗ್ಯ ಜಾಗೃತಿ ಹೆಚ್ಚಿಸುವ ನಿಟ್ಟಿನಲ್ಲಿ ಇಂತಹ ಕಾರ್ಯಕ್ರಮಗಳು ಮಹತ್ವದ ಪಾತ್ರ ವಹಿಸುತ್ತಿವೆ ಎಂದು ಸ್ವಾಮೀಜಿಗಳು ಹೇಳಿದರು.

ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿಗಳಾದ ಬಿ.ಸಿ ಶಿವಾನಂದಮೂರ್ತಿ, ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನಿರ್ದೇಶಕರಾದ ನರಸಿಂಹಮೂರ್ತಿ, ನಾಗಮಂಗಲ ಆದಿಚುಂಚನಗಿರಿ ಆಸ್ಪತ್ರೆಯ ಅಧೀಕ್ಷಕರಾದ ಡಾ. ಕೆ.ಎಂ.ಶಿವಕುಮಾರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಾದ ಡಾ. ಬೆಟ್ಟಸ್ವಾಮಿ, ಮಂಡ್ಯ ಉಪವಿಭಾಗಾಧಿಕಾರಿಗಳಾದ ಶಿವಮೂರ್ತಿ ಎಂ., ಮಂಡ್ಯ ಜಿಲ್ಲಾ ತಹಸೀಲ್ದಾರ್ ರಾದ ವಿಶ್ವನಾಥ್,ಬೆಂಗಳೂರು ಕಿದ್ವಾಯಿ ಆಸ್ಪತ್ರೆ ಮುಖ್ಯಸ್ಥರು ಹಾಗೂ ಕ್ಯಾನ್ಸರ್ ತಜ್ಞರಾದ ಡಾ. ಶೋಭಾ, ಶ್ರೀ ವಿದ್ಯಾ ಗಣಪತಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಜವರೇಗೌಡ ರವರು ಉಪಸ್ಥಿತರಿದ್ದರು.

# ಶಾಸಕರ ವಿರುದ್ಧ ಸುಳ್ಳು ಆರೋಪ ಖಂಡನೀಯ

## ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಗಂಗಾಧರ್ ಕಿಡಿ



**ಮಂಡ್ಯ:** ಇಲ್ಲಿನ ಅಭಿವೃದ್ಧಿ ಕಾರ್ಯಗಳನ್ನು ಸಹಿಸದ ಜೆಡಿಎಸ್ ಮುಖಂಡ ರಾಮಚಂದ್ರು ಅವರು ಶಾಸಕ ಪಿ.ರವಿಕುಮಾರ್ ಗೌಡ ಅವರ ವಿರುದ್ಧ ಸುಳ್ಳು ಆರೋಪ ಮಾಡಿರುವುದು ಖಂಡನಾರ್ಹ ಎಂದು ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಿ.ಡಿ.ಗಂಗಾಧರ್ ಕಿಡಿ ಕಾರಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ವಿಧಾನಸಭಾ ಚುನಾವಣೆಯಿಂದ ಎರವಲುಗೊಂಡ ಅಭ್ಯರ್ಥಿ ರಾಮಚಂದ್ರು ಅವರು ಸೈದ್ಧಾಂತಿಕ, ಆಡಳಿತ ಪರ, ಅಭಿವೃದ್ಧಿಯ ಪರ ಚರ್ಚೆಗೆ ಮುಂದಾಬೇಕು. ಅದನ್ನು ಬಿಟ್ಟು ಕಪೋಲ ಕಲ್ಪಿತ, ನಿರಾಧಾರ ಆರೋಪಗಳನ್ನು ಮಾಡಬಾರದು ಎಂದರು.

ಜನಪ್ರತಿನಿಧಿಗಳನ್ನು ಪ್ರಶ್ನಿಸುವುದು ನಾಗರೀಕ ಸಮಾಜದ ಜವಾಬ್ದಾರಿಯಾಗಿರುತ್ತದೆ. ಕ್ಷೇತ್ರಕ್ಕೆ ಅಭಿವೃದ್ಧಿ ಕಾರ್ಯಗಳನ್ನು ಮಾಡದ ಕೇಂದ್ರ ಸಚಿವರನ್ನು ಜನತೆಯ ಪರವಾಗಿ ಶಾಸಕರು ಖಂಡಿಸಿದ್ದಾರೆ. ಕುಮಾರಸ್ವಾಮಿ ಅವರು ಓರ್ವ ಸಂಸದರಂತೆ ಕೆಲಸ ಮಾಡುತ್ತಿದ್ದಾರೆ. ಕೇಂದ್ರ ಸಚಿವರಾಗಿ ಯಾವುದೇ ಕೈಗಾರಿಕೆಯನ್ನು ಜಿಲ್ಲೆಗೆ ಕೊಡದ ಅವರು 2 ವರ್ಷಗಳಲ್ಲಿ ಉದ್ಯೋಗ ಸೃಷ್ಟಿಸುವಲ್ಲಿ ವಿಫಲರಾಗಿದ್ದಾರೆಂದು ಹೇಳಿದರು.

ರಾಮಚಂದ್ರ ಅವರು ಅಭಿವೃದ್ಧಿ ಕಾರ್ಯಕ್ರಮಗಳನ್ನು ಮುಂದಿಟ್ಟು ಚರ್ಚೆಗೆ ಬಂದಲ್ಲಿ ಸ್ವಾಗತ. ಅದನ್ನು ಬಿಟ್ಟು ವೈಯಕ್ತಿಕ ಟೀಕೆಗೆ ಇಳಿಯಬಾರದು. ಶಾಸಕರು ರಾಮಚಂದ್ರು ಅವರಿಗೆ ಟೆಂಡರ್ ಆದ ಕಾಮಗಾರಿಗಳಿಗೆ ಸಹಕಾರ ಮಾಡುತ್ತಿದ್ದು, ಶಾಸಕರ ಒಳ್ಳೆ ಕೆಲಸಕ್ಕೆ ಪ್ರೋತ್ಸಾಹ ನೀಡುವಂತೆ ಆಗ್ರಹಿಸಿದರು.

ಗೋಷ್ಠಿಯಲ್ಲಿ ಕಾಂಗ್ರೆಸ್ ಮುಖಂಡ ರುದ್ರಪ್ಪ, ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಉಪಾಧ್ಯಕ್ಷೆ ವಿಜಯಲಕ್ಷ್ಮಿ ಮ ರಘುನಂದನ್, ಮುಡಾ ಮಾಜಿ ಅಧ್ಯಕ್ಷ ನಯೀಂ, ಕಾಂಗ್ರೆಸ್ ಎಸ್ಸಿ,ಎಸ್ಟಿ ವಿಭಾಗದ ಜಿಲ್ಲಾಧ್ಯಕ್ಷ ವಿಜಯ್‌ಕುಮಾರ್ ಇದ್ದರು.

# 19ರಂದು ವಿದ್ಯುತ್ ವ್ಯತ್ಯಯ

**ರಾಮನಗರ:** 66/11 ಕೆವಿ ಹೆಜ್ಜಾಲ ವಿದ್ಯುತ್ ಉಪಕೇಂದ್ರದ ಮಾರ್ಗದಲ್ಲಿ ತ್ರೈಮಾಸಿಕ ನಿರ್ವಹಣಾ ಕಾಮಗಾರಿಯನ್ನು ಹಮ್ಮಿಕೊಳ್ಳಲಾಗಿದೆ. ಆದ ಕಾರಣ ಕುರುಬರ ಕರೇನಹಳ್ಳಿ, ಮುತ್ತುರಾಯನಪುರ, ವಾಜರಹಳ್ಳಿ, ಗಾಣಕಲ್, ಅಂಕನಹಳ್ಳಿ, ಕೆಂಪದಾಸಪನಹಳ್ಳಿ, ಬೆತ್ತನಗೆರೆ, ಆವರೆಗೆರೆ, ಶೆಟ್ಟಿಗೌಡನದೊಡ್ಡಿ, ನರಸೇಗೌಡನದೊಡ್ಡಿ, ಎಂ. ಕರೇನಹಳ್ಳಿ, ಕಾಕರಾಮನಹಳ್ಳಿ, ಹೆಜ್ಜಾಲ, ದೇವಲಿಂಗಯ್ಯನಪಾಳ್ಯ, ಎಸ್.ವಿ.ಟಿ. ಕಾಲೋನಿ, ರಂಗೇಗೌಡನದೊಡ್ಡಿ, ಬಿಲ್ಲಕೆಂಪನಹಳ್ಳಿ, ಶೇಷಗಿರಿಹಳ್ಳಿ, ವಂಡರ್‌ಲಾ, ವಂಡರ್‌ಲಾ ಗೇಟ್, ಟೊಯೊಟ ಬೊಸು, ಪ್ರೈ.ಲಿ. ಗೋಮ್ತಿ ಇಂಡಸ್ಟ್ರೀ, ಕಾಡುಮನೆ, ಮಂಚನಾಯಕನಹಳ್ಳಿ, ಹೊಸದೊಡ್ಡಿ, ಬಿ.ಎಂ.ಟಿ.ಸಿ. ಇ.ವಿ ಚಾರ್ಜಿಂಗ್ ಸೆಂಟರ್, ಹನುಮಂತನಗರ, ಹಂಪಾಪುರ, ಜುಡಿಷಿಯಲ್ ಲೇಔಟ್, ಬಿ.ಡಿ.ಎ ಕಣ್‌ಮಿಕಿ, ರೈಲ್ವೆ ಲೇಔಟ್ ಹೆಜ್ಜಾಲ, ಬನ್ನಿಕುಪ್ಪೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಗೆ ಜು. 19ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 4 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂನ ರಾಮನಗರ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಆಂಗ್ಲ ಮಾಧ್ಯಮದ ಪದವಿ ಕಡ್ಡಾಯ ಆದೇಶಕ್ಕೆ ವಿರೋಧ

# ನಾಗರಿಕ ಹಿತರಕ್ಷಣಾ ವೇದಿಕೆ ಆಕ್ರೋಶ



**ಮಂಡ್ಯ:** ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ನೇರ ನೇಮಕಾತಿ ಮಾಡುವ ಸಂಬಂಧ ವಿವಿಧ ಗ್ರೂಪ್–ಸಿ ವೃಂದದ ಶಿಕ್ಷಕರ ಹುದ್ದೆಗೆ ಆಂಗ್ಲ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವುದು ಕಡ್ಡಯಾಗೊಳಿಸಿರುವುದು ಸರಿಯಾದ ಕ್ರಮವಲ್ಲ ಎಂದು ನಾಗರೀಕ ಹಿತರಕ್ಷಣಾ ವೇದಿಕೆಯ ಮದನ್‌ರಾವ್ ವಿರೋಧ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರರಾಧಿಕಾರದಿಂದ ರಾಜ್ಯದ ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ, ಅಟಲ್ ಬಿಹಾರಿ ವಾಜಪೇಯಿ, ಶ್ರೀಮತಿ ಇಂದಿರಾಗಾಂಧಿ, ಡಾ.ಬಿ.ಆರ್.ಅಂಬೇಡ್ಕರ್ ವಸತಿ ಶಾಲೆಗಳಿಗೆ ಶಿಕ್ಷಕರ ನೇಮಕಾತಿ ಮಾಡಲಾಗುತ್ತಿದೆ. ಈ ಶಾಲೆಗಳು ಆಂಗ್ಲ ಮಾಧ್ಯಮದಲ್ಲಿ ನಡೆಯುತ್ತಿರುವುದರಿಂದ ಸಮಾಜ ವಿಜ್ಞಾನ ಶಿಕ್ಷಕರು ಹುದ್ದೆ ಪಡೆಯಲು ಆಂಗ್ಲ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವವರಿಗೆ ಆದ್ಯತೆ ನೀಡಿರುವುದನ್ನು ಖಂಡಿಸಿದರು.

ಒಟ್ಟು 767 ಹುದ್ದೆಗಳಿಗೆ ನೇಮಕ ಪರೀಕ್ಷೆ ನಡೆಯಲಿದೆ. ಅದರಲ್ಲಿ ಸಮಾಜವಿಜ್ಞಾನ ವಿಷಯದ ಶಿಕ್ಷಕ ಹುದ್ದೆಯ 154 ಅಭ್ಯರ್ಥಿಗಳು ಆಂಗ್ಲ ಮಾಧ್ಯಮದಲ್ಲಿ ಪದವಿ ಹೊಂದಿರಬೇಕು ಎಂದು ಹೇಳಲಾಗಿದೆ. ಇದರಿಂದ ಕರ್ನಾಟಕದ ಕನ್ನಡ ಮಾಧ್ಯಮದಲ್ಲಿ ಪದವಿ ಪಡೆದವರಿಗೆ ಅನ್ಯಾಯವಾಗಲಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ ಅವರು ಪ್ರಾಧಿಕಾರವು ಕೂಡಲೇ ಸದರಿ ಆದೇಶವನ್ನು ಸಡಿಲಗೊಳಿಸುವಂತೆ ಆಗ್ರಹಿಸಿದರು. ಗೋಷ್ಠಿಯಲ್ಲಿ ಸಾಮಾಜಿಕ ಹೋರಾಟಗಾರ ಭರತ್ ಇದ್ದರು.

# ಜೀವನದಿ ಪತ್ರಿಕೆಯ 5ನೇ ವರ್ಷದ

## ವಾರ್ಷಿಕೋತ್ಸವದ ಅಂಗವಾಗಿ ಕನ್ನಡ ಸಾಹಿತ್ಯ ಸ್ಪರ್ಧೆ



**ಮಂಡ್ಯ:** ಜೀವನಾಡಿ ಮಾಸ ಪತ್ರಿಕೆಯ 5ನೇ ವರ್ಷದ ವಾರ್ಷಿಕೋತ್ಸವದ ಹಿನ್ನೆಲೆ ರಾಜ್ಯಮಟ್ಟದ ಜೀವನಾಡಿ ಕನ್ನಡ ಸಾಹಿತ್ಯ ಸ್ಪರ್ಧೆಗೆ ಸಣ್ಣಕಥೆ, ಪ್ರಬಂಧ, ಕವಿತೆಯ ಪ್ರಕಾರಗಳನ್ನು ಆಹ್ವಾನಿಸಲಾಗಿದೆ ಎಂದು ಪತ್ರಿಕೆಯ ಸಂಪಾದಕ ಡಾ.ಎಚ್.ಎಸ್.ಮುದ್ದೇ ಗೌಡ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ಪರ್ಧೆಯಲ್ಲಿ ಆಯ್ಕೆಯಾದ ವಿಜೇತರಿಗೆ ಸೆ.13ರಂದು ನಗರದ ಗಾಂಧಿ ಭವನದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ನಗದು ಬಹುಮಾನ, ಪ್ರಶಸ್ತಿ ಫಲಕ, ಪ್ರಶಸ್ತಿ ಪತ್ರ ನೀಡಿ ಸನ್ಮಾನಿಸಲಾಗುವುದು ಎಂದರು.

ಸ್ಪರ್ಧೆಗೆ ನಿಂಬಂಧನೆಗಳಿದ್ದು, ಕಥೆಯು 2,500 ಪದಗಳನ್ನು ಮೀರಿರಬಾರದು, ಪ್ರಬಂದ 2000 ಪದಗಳಿಗೆ ಸೀಮಿತವಾಗಿರಬೇಕು. ಕವಿತೆ ಕಡ್ಡಾಯವಾಗಿ 24 ಸಾಲುಗಳನ್ನು ಮೀರಬಾರದು. ಇವುಗಳು ಇಲ್ಲಿಯವರೆಗೆ ಪತ್ರಿಕೆ, ನಿಯತಕಾಲಿಕೆ, ಬ್ಲಾಗ್, ಸಾಮಾ ಜಿಕ ಜಾಲತಾಣ ಸೇರಿದಂತೆ ಬೇರೆಲ್ಲೂ ಪ್ರಕಟವಾಗಿರಬಾರದು. ಅನುವಾದಿತ ವಾಗದೇ ಸ್ವತಂತ್ರ ರಚನೆಯಾಗಿರಬೇಕು. ನುಡಿ ತಂತ್ರಾಂಶದಲ್ಲಿ ಟೈಪಿಸಿ, ಲೇಖಕರ ಭಾವಚಿತ್ರ, ವಿಳಾಸ, ದೂರವಾಣಿ ಸಂಖ್ಯೆ, ಇ–ಮೇಲ್ ವಿಳಾಸವನ್ನೂ ಪ್ರತ್ಯೇಕ ಹಾಳೆಯಲ್ಲಿ ಲಗತ್ತಿಸಿ ಪತ್ರಿಕೆಯ ಇ–ಮೇಲ್‌ಗೆ ಕಳುಹಿಸಬೇಕು. ಲಕೋಟೆ ಮೇಲೆ ಜೀವನಾಡಿ ಸಾಹಿತ್ಯ ಸ್ಪರ್ಧೆ ಎಂದು ನಮೂದಿಸಿರಬೇಕು ಎಂದು ವಿವರಿಸಿದರು.

ಬಹುಮಾತಿನ ಕಥೆ, ಪ್ರಬಂಧ ಮತ್ತು ಕವನಗಳನ್ನು ಯಾವ ಸ್ವರೂಪದಲಿಯಾದರೂ ಬಳಸುವ ಹಕ್ಕನ್ನು ಜೀವನಾಡಿ ಪತ್ರಿಕೆ ಕಾಯ್ದಿರಿಸಿಕೊಂಡಿದೆ. ಪ್ರವೇಶ ಶುಲ್ಕ ರಹಿತವಾಗಿದ್ದು, ತೀರ್ಪುಗಾರರ ತೀರ್ಮಾನವೇ ಅಂತಿಮವಾಗಿರುತ್ತದೆ. ಈ ಸಂಬಂಧ ಪತ್ರ ವ್ಯವಹಾರಗಳಿಗೆ ಅವಕಾಶವಿಲ್ಲವಾಗಿದ್ದು, ಆ.15ರೊಳಗೆ ಸಲ್ಲಿಸಬೇಕು. ಪ್ರಶಸ್ತಿ ವಿಜೇತರು ಖುದ್ದಾಗಿ ಹಾಜರಿದ್ದು ಬಹುಮಾನ ಪಡೆಯುವಂತೆ ಮಾಹಿತಿ ನೀಡಿದರು.

ಕನ್ನಡ ಸಣ್ಣ ಕಥಾ ಸ್ಪರ್ಧೆಗೆ 15 ಸಾವಿರ, ಪ್ರಬಂಧ ಸ್ಪರ್ಧೆಗೆ 10 ಸಾವಿರ, ಕವನ ಸ್ಪರ್ಧೆಗೆ 5 ಸಾವಿರ ರೂ.ಗಳ ಬಹುಮಾನ ನೀಡಲಾಗುವುದು. ಇದೇ ವೇಳೆ ಎಂ.ರವಿಪರಸಾದ್ ಸ್ಮರಣಾರ್ಥ ಹವ್ಯಾಸಿ ರಂಗನಟರಾಗಿ ಮಂಡ್ಯ ರಮೇಶ್ ಅವರನ್ನು ಆಯ್ಕೆ ಮಾಡಲಾಗಿದ್ದು, ಅವರಿಗೆ 10 ಸಾವಿರ ರೂ.ಗಳ ನಗದು ಬಹುಮಾನ ನೀಡುವುದಾಗಿ ಎಂದು ಮಾಹಿತಿ ಹಂಚಿಕೊಂಡರು.

ಗೋಷ್ಠಿಯಲ್ಲಿ ಪತ್ರಿಕೆಯ ಪೋಷಕಿ ಕನ್ನಿಕಾ, ಜೈ ಕರ್ನಾಟಕ ಪರಿಷತ್ ರಾಜ್ಯಾಧ್ಯಕ್ಷ ಎಸ್.ನಾರಾಯಣ್, ಮದ್ದೂರು ತಾಲೂಕು ಅಧ್ಯಕ್ಷ ಪ್ರಭುಸ್ವಾಮಿ ಇದ್ದರು.

# ಜುಲೈ 20 ರಂದು ನೇರ ಸಂದರ್ಶನ

**ಮಂಡ್ಯ:** ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ, ಮಂಡ್ಯ ಹಾಗೂ ಮೆ॥ಪಿ.ಎ1 ಎಂಟರ್‌ಪ್ರೈಸಸ್ ಮೆ॥ ಶ್ರೀ ಧನಲಕ್ಷ್ಮಿ ಮ ಆಪ್ಟಿಕಲ್ಸ್ & ಐ ಕ್ಲಿನಿಕ್ ಹಾಗೂ ಮೆ॥ ಬಜಾಜ್ ಎಲೆಕ್ಟ್ರಿಕಲ್ ಸರ್ವೀಸ್ ಸೆಂಟರ್ ಸಂಸ್ಥೆಯವರ ಸಹಯೋಗದಲ್ಲಿ ಜುಲೈ 20 ರಂದು ಬೆಳಿಗ್ಗೆ 10.00 ಗಂಟೆಗೆ ನೇರ ಸಂದರ್ಶನ ವನ್ನು ಮಂಡ್ಯ ನಗರದ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯಲ್ಲಿ ಆಯೋಜಿಸಲಾಗಿದೆ.

ನೇರಸಂದರ್ಶನದಲ್ಲಿ ಸದರಿ ಸಂಸ್ಥೆಯಲ್ಲಿ ಖಾಲಿಯಿರುವ ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ & ಆಪ್ಟೋಮೆಟ್ರಿ ಟ್ರೈನಿ ಮತ್ತು ಡೇಟಾ ಎಂಟ್ರಿ ಆಪರೇಟರ್ ಹುದ್ದೆಗಳಿಗೆ ಭರ್ತಿ ಮಾಡಿಕೊಳ್ಳಲಿದ್ದು ಸಂದರ್ಶನದಲ್ಲಿ ಭಾಗವಹಿಸಲು ಪಿ.ಯು,ಸಿ, ಡಿಪ್ಲೊಮಾ ಇನ್ ಆಪ್ಟೋಮೆಟ್ರಿ ಮತ್ತು ಎಂ.ಬಿ.ಎ ಉತ್ತೀರ್ಣರಾಗಿರುವ 18 ರಿಂದ 35 ವರ್ಷ ವಯೋಮಿತಿಯುಳ್ಳ ಅಭ್ಯರ್ಥಿಗಳು ತಮ್ಮ ರೆಸ್ಯೂಮ್/ ಬಯೋಡೇಟಾಗಳೊಂದಿಗೆ ನೇರಸಂದರ್ಶನದಲ್ಲಿ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ದೂ.ಸಂ. 9164642684, 9113500761, 9113875775, ಮತ್ತು 9741939716 ಅನ್ನು ಸಂಪರ್ಕಿಸಬಹುದು ಎಂದು ಮಂಡ್ಯ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯ ಜಿಲ್ಲಾ ಉದ್ಯೋಗಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಆಸ್ತಿ,ಹಣ ಅವಶ್ಯಕವೇ



ಸ್ನೇಹ ಲೋಕ



ಸ್ನೇಹಾ ಆನಂದ್

ನಾನು ಇಲ್ಲಿ ಪ್ರಸ್ತುತ ಪಡಿಸಿರುವ ವಿಷಯ ತುಂಬಾ ಸಾಮಾನ್ಯ ಆದರೆ ನಿರ್ಧಾರ ಅಷ್ಟೇ ಗಂಭೀರ! ಈ ವಾಸ್ತವದ ಚಿಂತನೆಯಲ್ಲಿ ಚೂರು ವ್ಯತ್ಯಾಸವಾದರೂ ಜೀವನ ಸಂಕಷ್ಟಕ್ಕೆ ಸಿಲುಕಿ ಬಿಡುತ್ತದೆ! ಇನ್ನು ವಿಷಯಕ್ಕೆ ಬರುವ:

ಮಕ್ಕಳೇ ತಂದೆ ತಾಯಿಯರಿಗೆ ಆಸ್ತಿ ಎನ್ನುವುದು ಸರ್ವಥಾ ಸುಳ್ಳಲ್ಲ , ಅವರೇ ನಮ್ಮ ಜೀವ, ಜೀವನ ಕೂಡ, ಅದರಲ್ಲಿ ಎರಡು ಮಾತಿಲ್ಲ, ಅವರಿಲ್ಲದ **ಜೀವನ ಶೂನ್ಯವೇ ಸರಿ!**

ಆದರೆ ಪಾಲಕರ ಪಾಲನೆ ಎಷ್ಟೇ ಸರಿಯಾಗಿರಲಿ, ಮಕ್ಕಳ ಬಗ್ಗೆ ಎಷ್ಟೇ ಅಭಿಮಾನ ಪೂರ್ವಕವಾಗಿರಲಿ, ಮಕ್ಕಳು ದೊಡ್ಡವರಾದಂತೆ ಪ್ರಾಯದ ಪರಿಧಿಯಲ್ಲಿ ಅವರ ವ್ಯಕ್ತಿತ್ವ ಎಣಿಸಲಾರದಷ್ಟು ಬದಲಾಗುತ್ತಾ ಹೋಗುತ್ತದೆ!

ಮಕ್ಕಳ ವಿದ್ಯೆಯೇ ನಮ್ಮ ಆಸ್ತಿ ಎಂದು ತಿಳಿದು ಅವರ ಬಗ್ಗೆ ಅವರ ಮೇಲಿನ ಅತಿಯಾದ ಪ್ರೀತಿಯಲ್ಲಿ ತೆಗೆದುಕೊಂಡ ಹುಚ್ಚುಚ್ಚ ನಿರ್ಧಾರ ಒಂದೊಂದು ಬಾರಿ ತೀರಾ ತಪ್ಪಾಗಿ ಬಿಡಬಹುದು, ಅದರಿಂದ ಮುಂದೆ ಜೀವನದಲ್ಲಿ ಸರಿಪಡಿಸಲಾಗದಂತಹ ತಪ್ಪು ನಮ್ಮ ಜೀವನದ ಹಾದಿಯನ್ನೇ ಬದಲಿಸಿ ಬಿಡಬಹುದು!

ಹೀಗಾಗಿ ಮಕ್ಕಳೇ ನಮ್ಮ ಆಸ್ತಿಯಾದರೂ ನಿಮ್ಮಲ್ಲಿ ಇದ್ದ ಅಲ್ಪಸ್ವಲ್ಪ ಆಸ್ತಿ ಯಾವಾಗಿದ್ದರೂ ಅವರಿಗೆ ತಾನೆ ಎಂದುಕೊಂಡು ಇದ್ದಬಿದ್ದ ಹಣ, ಅವರ ವಿದ್ಯಾಭ್ಯಾಸಕ್ಕೆ ಅಥವಾ ಅವರ ಅನುಕೂಲಕ್ಕೆ ತಾನೇ ಅಂತ ಆಸ್ತಿಯೆನ್ನೆಲ್ಲಾ ಖರ್ಚು ಮಾಡಿ ಬರಿಗೈಯಲ್ಲಿ ಏನೂ ಇಲ್ಲದೆ ನಿಲ್ಲಬಾರದು, ಏಕೆಂದರೆ ಮಕ್ಕಳ ಎದುರಿಗೆ ಕೈ ಚಾಚಿ ನಿಲ್ಲುವುದು ಪಾಲಕರಿಗೆ ತುಂಬಾ ಮುಜುಗರದ ವಿಷಯ! ಇದರಿಂದಾದ ನೋವು, ಅಪಮಾನ, ಕಷ್ಟಗಳ ಉದಾಹರಣೆಗಳು ನಿಮಗೆ ಸಾಕಷ್ಟು ಸಿಕ್ಕಿರಬಹುದು ಅಥವಾ ನಿಮಗೇ ಅನುಭವವೂ ಇರಬಹುದು !

**ನಿಜ ಪಾಲಕರು ಕಾಲವಾದ ನಂತರ ಮಕ್ಕಳಿಗೆ**

ಆಸ್ತಿ ಹೋಗುವುದು ನಿತ್ಯ ಸತ್ಯ, ಆದರೆ ನೀವು ಜೀವಿತವಿದ್ದಾಗ ನಿಮ್ಮ ಜೀವನದಲ್ಲಿ ಮುಂದೆ ನೆಮ್ಮದಿ ಇರಲು ಈ ಹಣ, ಆಸ್ತಿಯ ಅವಶ್ಯಕತೆ ಇದ್ದೇ ಇರುತ್ತದೆ! ಹಣವೇ ಮುಖ್ಯವಲ್ಲ ನಿಜ ಆದರೆ ನೆಮ್ಮದಿಯ ಜೀವನಕ್ಕೆ ಹಣ ಇಲ್ಲದಿದ್ದರೆ ದಿನವೇ ನಡೆಯುವುದಿಲ್ಲ!

ತಮ್ಮ ಜೀವನದಲ್ಲಿ ಪಾಲಕರು ನೆಮ್ಮದಿಯಾಗಿ ಇರಲು ತಮಗಾಗಿಯೇ ದುಡ್ಡು ಉಳಿಸಿಕೊಳ್ಳುವದು ಎಂದಿಗೂ ಸ್ವಾರ್ಥವಲ್ಲ, ಅದು ತಮ್ಮ ಬಗ್ಗೆ ತಾವು ಕಾಳಜಿ ವಹಿಸುವುದು, ಪರಾವಲಂಬನೆಯಲ್ಲಿ ತಾವು ಬೀಳಬಾರದು ಎಂದಷ್ಟೆ!

ಮಕ್ಕಳಿಗೆ ತಂದೆ, ತಾಯಿ ಯಾವಾಗಲೂ ಸ್ವಂತದವರೇ ,ಆದರೆ ತಂದೆ,ತಾಯಿಗೆ ಮಕ್ಕಳು ಸಮಯ ಕಳೆದಂತೆ, ಮದುವೆಯಾದ ಮೇಲೆ ಪರಕೀಯರಾಗುತ್ತಾ ಹೋಗುತ್ತಾರೆ, ಇದು ಎಲ್ಲರ ಜೀವನದ ವಿಪರ್ಯಾಸವೇ ಸರಿ! ನಮ್ಮ ನಿರ್ಧಾರಗಳಲ್ಲಿ ಅವರ ಪಾಲು ಇದ್ದಂತೆ, ಅವರ ನಿರ್ಧಾರದಲ್ಲಿ ನಮಗೆ ಪಾಲು ಖಂಡಿತಾ ಸಿಗದು!

ಹೀಗಾಗಿ ಈ ಕಾರಣದಿಂದ ಒಂದು ವಯಸ್ಸು ಮೀರಿದ ಮೇಲೆ ನಿಮ್ಮಲ್ಲಿ ದುಡಿಯುವ ಶಕ್ತಿ ಇಲ್ಲದಂತಾಗುತ್ತದೆ, ಆಗ ಮಕ್ಕಳ ಸ್ವಭಾವ ನಿಮ್ಮ ಸ್ವಭಾವಕ್ಕೆ ವಿರುದ್ಧವಾಗಿದ್ದರೆ, ಆಗ ಅವರ ಜೊತೆಗೆ ನಿಮ್ಮ ಇರುವಿಕೆ ಅವರಿಗೆ ಭಾರವೆನಿಸಬಹುದು, ಇದರಿಂದ ನಿಧಾನವಾಗಿ ಅವರ ಮನದಲ್ಲಿ ನಿಮ್ಮ ಬಗ್ಗೆ ಅಸಹನೆ ಶುರುವಾಗುತ್ತದೆ, ಆ ಸಮಯದಲ್ಲಿ ನಿಮ್ಮ ಸ್ವಲ್ಪವೇ ಆಸ್ತಿ ,ಹಣ ಇರಲಿ ಅದು, ನಿಮ್ಮ ಗೌರವ ಮತ್ತು ವ್ಯಕ್ತಿತ್ವವನ್ನು ಕಾಪಾಡುತ್ತದೆ!

ಜೊತೆಗೆ ಬರಿಗೈಯಲ್ಲಿ ಮಕ್ಕಳ ಮನೆಯಲ್ಲಿ ಇದ್ದರೆ ಬಹುಶಃ ನಿಮ್ಮ ಗೌರವಕ್ಕೆ ಧಕ್ಕೆ ಬರುವ ಸಾಧ್ಯತೆ ಜಾಸ್ತಿ ಇರುತ್ತದೆ, ನಿಮಗೆ ಅದು ಮುಜುಗರ ತರಬಹುದು! ಆ ಸಮಯದಲ್ಲಿ ನಿಮ್ಮ ಆಸ್ತಿ, ದುಡ್ಡು ನಿಮ್ಮ ಕೈಯಲ್ಲಿದ್ದರೆ ನೀವು ನಿಮ್ಮದೇ ಪುಟ್ಟ ಗೂಡು ಕಟ್ಟಿಕೊಂಡು ನೆಮ್ಮದಿಯಿಂದ ಎರಡು ಹೊತ್ತು ಸಂಗಾತಿಯೊಂದಿಗೆ ಜೀವನ ಮಾಡಬಹುದು!

ಅದರಲ್ಲೂ ಹೆಣ್ಣಿಗೆ ಸೂಕ್ಷ್ಮ ವಿಚಾರಗಳು ಬೇಗ ತಿಳಿಯುತ್ತವೆ, ಮಕ್ಕಳು ಮಾಡುವ ಅಸಡ್ಡೆ, ಅನಾದರ, ಗಂಡಸರು ಬೇಗ ಗುರುತಿಸುವುದಿಲ್ಲ, ಹಾಗಿದ್ದಾಗ ಹೆಣ್ಣಾದವಳು ತನ್ನ ಮಕ್ಕಳ ಬಗ್ಗೆಯೇ ದೂರು ಹೇಳಲು ಆಕ್ಷೇಪಣೆ ಮಾಡಲು ತುಂಬಾ ಬಳಲುತ್ತಾಳೆ!

ಹೀಗಾಗಿ ಮಕ್ಕಳಿಗೆ ನಿಮ್ಮ ಅನಿವಾರ್ಯತೆ, ಅವಶ್ಯಕತೆ ಇದ್ದು ಅಥವಾ ನಿಮ್ಮ ಬಗ್ಗೆ ಗೌರವ ಹೊಂದಿ ನಮ್ಮ ಹಿರಿಯರೆಂದು ತಿಳಿದು ಮನಃಪೂರ್ವಕವಾಗಿ ಜವಾಬ್ದಾರಿಯನ್ನು ತೆಗೆದುಕೊಂಡರೆ ಸಂತೋಷ,

ಆಗ ಅವರ ಜೊತೆ ನೀವು ಇರುವುದು ಖಂಡಿತಾ ತಪ್ಪಲ್ಲ, ಅದು ಒಂದು ನಿಮ್ಮ ಪುಣ್ಯವೇ ಸರಿ! ಯಾವ ತಂದೆತಾಯಿಯರು ಮಕ್ಕಳನ್ನು ಬಿಟ್ಟಿರಲು ಇಷ್ಟಪಡುವುದಿಲ್ಲ ಅಲ್ಲವೇ, ಆದರೆ ಅದು ಮಕ್ಕಳ ಜೊತೆಗಿನ ಪಾಲಕರ ಸಂಬಂಧ, ಅವರ ಸ್ವಭಾವ ಹಾಗು ವಾತಾವರಣದ ಮೇಲೆ ಅವಲಂಬಿಸಿರುತ್ತದೆ!

ಒಂದು ವೇಳೆ ಮಕ್ಕಳಿಗೆ ನೀವು ಕಿರಿಕಿರಿ ಅಥವಾ ನಿಮಗೆ ಮಕ್ಕಳು ಇರುವ ರೀತಿ ಸರಿ ಹೋಗಿಲ್ಲ ಅಂದರೂ ನಗುನಗುತ್ತಾ ನೀವು ಹೊರಗೆ ಬಂದು ಬಿಡಬಹುದು, ನಿಮ್ಮಷ್ಟಕ್ಕೆ ನೀವು ಇದ್ದು ಬಿಡಬಹುದು ನಿಮ್ಮ ಹತ್ತಿರ ಹಣವಿದ್ದರೆ!

**ಈ ಎಲ್ಲ ವಿಚಾರ ಇಲ್ಲಿ ಹೇಳಲು ಕಾರಣ:** ಪರಿಚಯದ ಹಿರಿಯರು ಹೇಳಿದ ಸತ್ಯದ ಮಾತಿದು, ಅವರು ತಮ್ಮ ಆಸ್ತಿ, ಪಾಸ್ತಿ ಮಾರಿ ಮಕ್ಕಳ ಓದು, ಮದುವೆ ಎಂದು ಎಲ್ಲವನ್ನೂ ಖರ್ಚು ಮಾಡಿ ಬಿಟ್ಟರು, ನಂತರ ಇನ್ನೂ ಸ್ವಲ್ಪ ಉಳಿದಿದ್ದು ಮಕ್ಕಳು ತಮ್ಮ ಮನೆ ಕಟ್ಟಲು ಬೇಕು ಎಂದಾಗ ಕೊಡಲು ಇಷ್ಟವಿಲ್ಲದಿದ್ದರೂ ಇಲ್ಲವೆನ್ನಲು ಸಂಕೋಚವಾಗಿ ಬಂದ ನಿವೃತ್ತಿ ಹಣವನ್ನೂ ಕೂಡ ತೆಗೆದುಕೊಟ್ಟುಬಿಟ್ಟರು!

ಒಂದು ಸಮಯದಲ್ಲಿ ಒಳ್ಳೆಯ ಕೆಲಸದಲ್ಲಿದ್ದರೂ ಅವರಿಗೆ ಈಗ ಪೆನ್ಷನ್ ಇಲ್ಲ, ಕೈಯಲ್ಲಿ ಸ್ವಲ್ಪವೂ ದುಡ್ಡಿಲ್ಲ, ಮಕ್ಕಳ ಅಗೌರವಕ್ಕೆ ಸಿಲುಕಿ,ನೊಂದು ಮನೆಯಿಂದ ಹೊರಗೆ ಬಂದು ಒಂದು ಸಣ್ಣ ಕಂಪನಿಯಲ್ಲಿ ದುಡಿದು ಸ್ವತಂತ್ರ ಜೀವನ ನಡೆಸುತಿದ್ದಾರೆ ನಿಜ! ಆದರೆ ವಯಸ್ಸು ಎಪ್ಪತ್ತು, ಅವರ ಹೆಂಡತಿಗೆ ಗಂಡ ಈ ಇಳಿ ವಯಸ್ಸಿನಲ್ಲಿ ದುಡಿಯುವುದು ನೋವು ತಂದಿದೆ, ದಿನವೂ ಕಣ್ಣೀರು ಹಾಕುತ್ತಾರೆ, ನಾವು ಮಕ್ಕಳ ಬಗ್ಗೆ ಅತಿಯಾದ ಭರವಸೆ, ಮೋಹವಿಟ್ಟು ತಪ್ಪು ಮಾಡಿದೆವು ಎಂದು ಅವರು ಹಾಗೆ ಹೇಳಿಕೊಂಡು ಅತ್ತಾಗ ನನ್ನ ಮನಸ್ಸು ಅತ್ಯಂತ ಭಾವುಕವಾಯಿತು!

ನಿಜ ನಮಗೆ ಮಕ್ಕಳ ಮೇಲೆ ಪ್ರೀತಿ ಇರಲೇ ಬೇಕು , ನಾವು ಇಲ್ಲವಾದ ನಂತರ ನಮಗೆ ಅಲ್ಪ ಸ್ವಲ್ಪ ಆಸ್ತಿ ಇದ್ದರೂ ಅದು ಅವರದೇ! ಆದರೆ ನಾವು ಜೀವಿತವಿದ್ದಾಗ ನಾವು ನೆಮ್ಮದಿಯಾಗಿ ಜೀವಿಸಲೇ ಬೇಕಲ್ಲವೆ, ಮಕ್ಕಳು ಮದುವೆಯಾದ ನಂತರವೂ ಅವರು ನಮ್ಮ ಮೇಲೆ ಅಧಿಕಾರ ಚಲಾಯಿಸಿ ಆಸ್ತಿ ಕೇಳುವಂತೆ ನಾವು ಅವರನ್ನು ಹಣ ಕೇಳಲಾಗದು!

ನಮ್ಮದೆಲ್ಲಾ ಅವರದಾದರೂ ಅವರದೆಲ್ಲಾ ನಮ್ಮದಲ್ಲ ಎನ್ನುವ ಕಟುಸತ್ಯ ನಾವು ಒಪ್ಪಿಕೊಳ್ಳಲೇಬೇಕು, ಅದಕ್ಕಾಗಿಯಾದರೂ ನಮ್ಮ ಜೀವನಕ್ಕೆ ಮೂಲ ಆಧಾರವಾದ ಹಣ, ವಸ್ತುವಾಗಲಿ, ಆಸ್ತಿಯಾಗಲಿ ಬಿಟ್ಟು ಕೊಡಬಾರದು, ಅವರಿಗೆ ಕೊಡುವ ಎಲ್ಲಾ ಅನುಕೂಲಗಳನ್ನು ಕೊಟ್ಟು ಪ್ರೀತಿ, ವಾತ್ಸಲ್ಯದಿಂದ ಲಾಲನೆ,ಪಾಲನೆ ಮಾಡಿ ನಿಮ್ಮ ಜವಾಬ್ದಾರಿಯನ್ನು ನಿರ್ವಹಿಸಿರುತ್ತೀರಿ ಅಷ್ಟು ಸಾಕು ಸಂತೃಪ್ತಿ ಪಡಲು!

ಮಕ್ಕಳು ಕೇಳಿದಾಗ ಆಸ್ತಿ ಕೊಡಲಿಲ್ಲವೆಂದರೆ ಅವರಿಗೆ ತಂದೆ,ತಾಯಿಯ ಬಗ್ಗೆ ಸ್ವಲ್ಪ ಮಟ್ಟಿಗೆ ಬೇಸರವಾಗಬಹುದು ನಿಜ, ಆದರೆ ಇದರಿಂದ ನಮ್ಮ ಗೌರವಕ್ಕೆ ಧಕ್ಕೆ ಬರುವುದಿಲ್ಲ!

ವಾಸ್ತವದಲ್ಲಿ ಇದು ಒಪ್ಪಿ ಕೊಳ್ಳುವಂತಹ ವಿಷಯ ಎಂದು ಅವರಿಗೂ ಒಂದಲ್ಲ ಒಂದು ದಿನ ಅರ್ಥವಾಗುತ್ತದೆ, ನಮ್ಮ ಪಾಲಕರ ಸರಿಯಾದ ನಿರ್ಧಾರ ಎನ್ನುವ ಹೆಮ್ಮೆ ಕೂಡ ಆಗಬಹುದು!

ಇಂತಹ ಎಷ್ಟೋ ಉದಾಹರಣೆಗಳು ಜೀವನದಲ್ಲಿ ಸಿಗುತ್ತವೆ, ಎಲ್ಲವನ್ನೂ ಮುಚ್ಚಿಟ್ಟು ಮಗಳಿಗೆ ಮಾತ್ರ ಕೊಡುವ ತಾಯಿಯೂ ಇದ್ದಾಳೆ, ಅದು ಮಗನ ಮನಸ್ಸಿಗೆ ನೋವಾಗ ಬಹುದು, ಸೊಸೆಗೆ ತಿಳಿದು ಅಸಹನೆ ವ್ಯಕ್ತಪಡಿಸುವ ವಿಷಯವಾಗಬಹುದು ಕೂಡ! ಹೀಗಾಗಿ ಪಾಲಕರೂ ಇಂತಹ ತಪ್ಪುಗಳನ್ನು ಎಂದೂ ಮಾಡಬಾರದು!

ನನ್ನ ಅಭಿಪ್ರಾಯ ಏನೆಂದರೆ ಕೊನೆಯವರೆಗೂ ನಮ್ಮನ್ನು ಯಾರು ಗೌರವದಿಂದ ಕಾಣುತ್ತಾರೆ ಅವರಿಗೆ ಹಾಗು ಹಕ್ಕು ಬಾಧ್ಯಸ್ಥರಿಗೆ ಸ್ವಲ್ಪ ಆಸ್ತಿ ಹೋಗಬೇಕು, ನೀವಿರುವ ತನಕ ಮಾತ್ರ ಅದು ನಿಮ್ಮದೆ ಸ್ವತ್ತು, ಆ ಸಮಯದಲ್ಲಿ ಮಕ್ಕಳು ಅದರ ಮೇಲೆ ಕಣ್ಣು ಹಾಕಿದರೆ ಮಕ್ಕಳ ಮನಸ್ಥಿತಿ ಸರಿ ಇಲ್ಲವೆಂದೇ ಅರ್ಥ ಮಾಡಿಕೊಳ್ಳಿ!

ಎಲ್ಲಾ ಮಕ್ಕಳು ಕೆಟ್ಟವರಾಗಿರುತ್ತಾರೆ ಅಂತಲ್ಲ, ಹಾಗೆಯೇ ಪಾಲಕರು ಸ್ವಾರ್ಥಿಗಳಾಗಬೇಕು ಎಂದು ಅರ್ಥವಲ್ಲ ಆದರೆ ಮನಸ್ಥಿತಿಗೆ ಅನುಗುಣವಾದ ವಿಷಮ ಪರಿಸ್ಥಿತಿ, ಸಮಯ, ಸಂದರ್ಭಗಳು ಮಾತ್ರ ವಿಷಾದನೀಯವಾಗುತ್ತವೆ!

ನಮ್ಮ ಜೀವನದ ಸಂಜೆಯನ್ನು ದೇವರ ಧ್ಯಾನ, ಆತನ ಗುಣಗಾನದಲ್ಲಿ ಕಳೆಯಬೇಕು ನಿಜ, ಆದರೆ ಆ ಸಮಯದಲ್ಲಿ ನೆಮ್ಮದಿಯ ಸೂರು,ಊಟ, ನಿದ್ರೆ ಮುಖ್ಯ!

ಹೀಗಾಗಿ ಬಾಳ ಸಂಜೆಯ ಪಯಣದಲಿ ನಮ್ಮ ಎಚ್ಚರಿಕೆಯಲ್ಲಿ ನಾವಿರಬೇಕು,

ಜೀವನೋಪಾಯಕ್ಕೆ ದುಡ್ಡಿರಬೇಕು, ಆರೋಗ್ಯ ವಿಮೆ,ಜೀವ ವಿಮೆಯನ್ನು ಮಾಡಿಸಿರಬೇಕು ಇದರಿಂದ ಒಬ್ಬರನ್ನೊಬ್ಬರು ಆಪಾದಿಸುವ

ಬದಲು, ಕ್ಷಮೆಯನ್ನು ಕೊಡುವ ಸಮಯದಲ್ಲಿ ಕೊಟ್ಟು ನಮಗೆ ಸಿಕ್ಕ ಅಥವಾ ಇನ್ನೊಬ್ಬರ ಅನುಭವಗಳಿಂದ ಪಾಠವನ್ನು ಕಲಿತು, ಪಶ್ಚಾತ್ತಾಪದ ಕೆಲಸಗಳನ್ನು ಕಡಿಮೆ ಮಾಡುತ್ತಾ ಹೋದರೆ ಜೀವನದ ಸಂಜೆಯ ಬೆಳದಿಂಗಳ ಬೆಳಕನ್ನು ಹಾಗೆಯೇ ಉಳಿಸಿಕೊಳ್ಳಬಹುದು!



# “ಮಂಗಳನತ್ತ ಮಾನವ!”

## “ಇಲಾನ್ ಮಸ್ಕ್ ಕಂಡ ಮಹಾ ಕನಸು”



। ರೂಪ ಮಂಜುನಾಥ ಹೊಳೆನರಸೀಪುರ

ಇತ್ತೀಚಿನ ದಿನಗಳಲ್ಲಿ ಇಲಾನ್ ಮಸ್ಕ್ ಮತ್ತು ಮಂಗಳ ಗ್ರಹ (Mars) ಎಂಬ ಪದಗಳು ಒಂದೇ ನಾಣ್ಯದ ಎರಡು ಮುಖಗಳಂತಾಗಿವೆ. ಜಗತ್ತಿನ ಅತಿ ದೊಡ್ಡ ಶ್ರೀಮಂತ, ಭೂಮಿಯ ಮೇಲಿನ ಐಷಾರಾಮಿ ಕಾರುಗಳು, ಕೃತಕ ಬುದ್ಧಿಮತ್ತೆಯ ತಂತ್ರಜ್ಞಾನ ಎಲ್ಲವನ್ನೂ ಬಿಟ್ಟು ಕೋಟ್ಯಂತರ ಮೈಲಿ ದೂರದ ಒರಟು ಕೆಂಪು ಗ್ರಹದ ಮೇಲೆ ಮನುಷ್ಯರ ಸಾಮ್ರಾಜ್ಯ ಕಟ್ಟಲು ಹೊರಟಿರುವುದರ ಹಿಂದೆ ಕೇವಲ ಅವರ ವ್ಯಾಪಾರೀ ಬುದ್ಧಿಯಿಲ್ಲ, ಬದಲಿಗೆ ರೋಮಾಂಚಕ ಪ್ರಯತ್ನದ ಇತಿಹಾಸವಿದೆ.

**ನಾಸಾ ವೆಬ್‌ಸೈಟ್ ತಂದ ನಿರಾಸೆ ಮತ್ತು ಹಠ:** 2001ರಲ್ಲಿ ಇಲಾನ್ ಮಸ್ಕ್ ಅವರು ಅಮೆರಿಕಾದ ಬಾಹ್ಯಾಕಾಶ ಸಂಸ್ಥೆ 'ನಾಸಾ'ದ ವೆಬ್‌ಸೈಟ್ ನೋಡುತ್ತಿದ್ದಾಗ ಅವರಿಗೆ ತೀವ್ರ ನಿರಾಸೆಯಾಯಿತು. 1969ರಲ್ಲೇ ಚಂದ್ರನ ಮೇಲೆ ಮನುಷ್ಯನನ್ನು ಇಳಿಸಿದ್ದ ನಾಸಾ, ನಂತರದ ದಶಕಗಳಲ್ಲಿ ಮಂಗಳನತ್ತ ಮನುಷ್ಯನನ್ನು ಕಳುಹಿಸುವ ಯಾವುದೇ ದೊಡ್ಡ ಯೋಜನೆಯನ್ನೇ ಹೊಂದಿರಲಿಲ್ಲ. ಸರ್ಕಾರಗಳ ಬಜೆಟ್ ಕಡಿತ ಹಾಗೂ ರಾಜಕೀಯ ಕಾರಣಗಳಿಂದಾಗಿ ಬಾಹ್ಯಾಕಾಶ ಸಂಶೋಧನೆ ನನೆಗುದಿಗೆ ಬಿದ್ದಿರುವುದನ್ನು ಕಂಡು, "ಯಾರೂ ಮಾಡದಿದ್ದರೆ ನಾನೇ ಮಾಡುತ್ತೇನೆ" ಎಂದು ತಮ್ಮದೇ ಸ್ವಂತ ದುಡ್ಡಿನಲ್ಲಿ 'ಸ್ಪೇಸ್‌ಎಕ್ಸ್' ಎಂಬ ಸಂಸ್ಥೆಯನ್ನು ಕಟ್ಟಿದರು.ಇದನ್ನು ಮಾಡಲು ಅಸಮಾನ್ಯ ಮನೋಸ್ಥೈರ್ಯವೇ ಬೇಕು!

'ಮಲ್ಟಿ-ಪ್ಲಾನೆಟರಿ' ಸಿದ್ಧಾಂತ ಮತ್ತು ಜೀವ ಸಂಕುಲದ ಉಳಿವು

ಮಸ್ಕ್ ಅವರ ಪ್ರಕಾರ, ಮಾನವ ಕುಲ ಕೇವಲ ಭೂಮಿಯ ಮೇಲಷ್ಟೇ ಇದ್ದರೆ ಸುರಕ್ಷಿತವಲ್ಲ. ಭವಿಷ್ಯದಲ್ಲಿ ದೈತ್ಯ ಉಲ್ಕಾಪಾತ, ಪರಮಾಣು ಮಹಾಯುದ್ಧ ಅಥವಾ ಭೀಕರ ಸಾಂಕ್ರಾಮಿಕ ರೋಗಗಳು ಬಂದು ಭೂಮಿಯ ಜೀವ ಸಂಕುಲವೇ ನಾಶವಾಗಬಹುದು. ಡೈನೋಸಾರ್‌ಗಳಿಗೆ ತಾಂತ್ರಿಕ ಜ್ಞಾನವಿಲ್ಲದ ಕಾರಣ ಅವು ನಶಿಸಿಹೋದವು, ಆದರೆ ಮನುಷ್ಯನಿಗೆ ಬುದ್ಧಿಯಿದೆ. ಭೂಮಿಗೆ ಏನಾದರೂ ಅನಾಹುತ ಸಂಭವಿಸಿದರೂ ಮಾನವನ ಅಸ್ತಿತ್ವ ಬೇರೊಂದು ಗ್ರಹದಲ್ಲಿ ಮುಂದುವರಿಯಬೇಕು (Multi-planetary species) ಎಂಬುದು ಅವರ ದೂರದೃಷ್ಟಿ.ಈ ಆಲೋಚನೆ ಬರಬೇಕಾದರೆ, ಅವರೆಷ್ಟು ಬುದ್ದಿವಂತರು,ದೂರದೃಷ್ಟಿ ಇರುವವರು, ಎಂಬುದನ್ನ ಯೋಚಿಸಿ!

**ಮುಖ್ಯ ಭಾಗ 3: ಮಂಗಳ ಗ್ರಹವೇ ಏಕೆ?**

ನಮ್ಮ ಸೌರಮಂಡಲದಲ್ಲಿ ಚಂದ್ರನಿಗೆ ವಾತಾವರಣವಿಲ್ಲ, ಶುಕ್ರ ಗ್ರಹವೋ ಬೆಂಕಿಯ ಕುಲುಮೆ. ಆದರೆ ಮಂಗಳ ಗ್ರಹದಲ್ಲಿ ತೆಳುವಾದ ವಾತಾವರಣವಿದೆ, ಹಿಮದ ರೂಪದಲ್ಲಿ ನೀರಿದೆ ಮತ್ತು ಅಲ್ಲಿನ ಹಗಲು-ರಾತ್ರಿಯ ಅವಧಿ ಭೂಮಿಗೆ ತೀರಾ ಹತ್ತಿರದಲ್ಲಿದೆ (24.6 ಗಂಟೆಗಳು). ಅಲ್ಲಿನ ವಾತಾವರಣವನ್ನು ಕಾಲಕ್ರಮೇಣ ಬದಲಾಯಿಸಿ (Terraforming) ಮಾನವ ಸ್ನೇಹಿಯನ್ನಾಗಿ ಮಾಡಬಹುದು ಎಂಬುದು ವಿಜ್ಞಾನದ ಲೆಕ್ಕಾಚಾರ.

ಬಾಹ್ಯಾಕಾಶ ವಿಜ್ಞಾನದಲ್ಲಿ 'ಗ್ರೇಟ್ ಫಿಲ್ಟರ್' ಎಂಬ ಕಲ್ಪನೆಯಿದೆ. ಯಾವುದೇ ನಾಗರಿಕತೆ ತಾಂತ್ರಿಕವಾಗಿ ತುತ್ತತುದಿ ತಲುಪುವ ಮೊದಲೇ ಪ್ರಕೃತಿಯ ವಿಕೋಪಕ್ಕೆ ಮುಕ್ತಾಯವಾಗಿಬಿಡುತ್ತದೆ. ಆ ಫಿಲ್ಟರ್ ಅನ್ನು ದಾಟಿ ಮನುಷ್ಯ ಬ್ರಹ್ಮಾಂಡದ ಅದ್ಭುತಗಳನ್ನು ಅನ್ವೇಷಿಸಬೇಕಾದರೆ ಮಂಗಳ ಯಾನ ಅತ್ಯಗತ್ಯ ಎಂಬುದು ಮಸ್ಕ್ ವಾದ. ಇದು ಯಶಸ್ವಿಯಾಗುತ್ತದೋ ಇಲ್ಲವೋ ಗೊತ್ತಿಲ್ಲ, ಆದರೆ ಇತಿಹಾಸದಲ್ಲಿ ಕಡಲ ಜೀವಿಗಳು ಭೂಮಿಗೆ ಬಂದು ಬದುಕಲು ಕಲಿತಷ್ಟೇ ದೊಡ್ಡ ಕ್ರಾಂತಿ ಇದು ಕೂಡಾ ಆಗಲಿದೆ.

ಇಲಾನ್ ಮಸ್ಕ್ ಅವರ ಈ ಮಹತ್ವಾಕಾಂಕ್ಷೆಯ ಮಂಗಳ ಯಾನ ಯೋಜನೆಗೆ ತಂತ್ರಜ್ಞಾನದಿಂದ ಹಿಡಿದು ಮನುಷ್ಯನ ಜೈವಿಕ ಮಿತಿಗಳವರೆಗೆ ಹೆಜ್ಜೆಹೆಜ್ಜೆಗೂ ಹಿಮಾಲಯದಂತಹ ಸವಾಲುಗಳಿವೆ (Challenges). "ಕೆಂಪು ಗ್ರಹದ ಹಾದಿಯಲ್ಲಿರುವ ಕಲ್ಲು-ಮುಳ್ಳುಗಳು" ಏನೂ ಎನ್ನುವುದಾದರೆ,

1. ತಾಂತ್ರಿಕ ಸವಾಲುಗಳು (Technical Obstacles)

ದೂರ ಮತ್ತು ಕಾಲದ ಮಿತಿ: ಭೂಮಿ ಮತ್ತು ಮಂಗಳ ಗ್ರಹಗಳು ತಮ್ಮ ಕಕ್ಷೆಯಲ್ಲಿ ಹತ್ತಿರ ಬಂದಾಗಲೂ ಅವುಗಳ ನಡುವಿನ ಅಂತರ ಸುಮಾರು 5.5 ಕೋಟಿ ಕಿಲೋಮೀಟರ್‌ಗಳಿಗಿಂತ ಹೆಚ್ಚಿರುತ್ತದೆ. ಇಷ್ಟೊಂದು ದೂರ ಪ್ರಯಾಣಿಸಲು ಸದ್ಯದ ತಂತ್ರಜ್ಞಾನದಲ್ಲಿ ಕನಿಷ್ಠ 6 ರಿಂದ 9 ತಿಂಗಳುಗಳೇ ಬೇಕು.

ಕಕ್ಷೆಯಲ್ಲಿ ಇಂಧನ ಮರುಪೂರಣ (Orbital Refueling): ಮಂಗಳನವರೆಗಿನ ದೀರ್ಘ ಪ್ರಯಾಣಕ್ಕೆ ಸ್ಟಾರ್‌ಶಿಪ್‌ಗೆ ಭಾರಿ ಪ್ರಮಾಣದ ಇಂಧನ ಬೇಕು. ಭೂಮಿಯಿಂದ ಉಡಾವಣೆಯಾದ ನಂತರ, ಬಾಹ್ಯಾಕಾಶ ಕಕ್ಷೆಯಲ್ಲೇ ಮತ್ತೊಂದು ಇಂಧನ ನೌಕೆಯಿಂದ (Tanker) ದ್ರವರೂಪದ ಆಮ್ಲಜನಕ ಮತ್ತು ಮೆಂಥೇನ್ ಅನ್ನು ವರ್ಗಾಯಿಸುವ ತಂತ್ರಜ್ಞಾನವನ್ನು ಸ್ಪೇಸ್‌ಎಕ್ಸ್ ಇನ್ನೂ ಸಂಪೂರ್ಣವಾಗಿ ಕರಗತ ಮಾಡಿಕೊಳ್ಳಬೇಕಿದೆ.

ಮಂಗಳನ ಮೇಲೆಯೇ ಇಂಧನ ತಯಾರಿಕೆ: ಭೂಮಿಗೆ ಮರಳಲು ಬೇಕಾದ ಇಂಧನವನ್ನು ಮಂಗಳನ ವಾತಾವರಣದಲ್ಲಿರುವ ಇಂಗಾಲದ ಡೈಆಕ್ಸೈಡ್ ಮತ್ತು ಅಲ್ಲಿನ ಹಿಮದ ನೀರನ್ನು ಬಳಸಿ ಅಲ್ಲೇ ತಯಾರಿಸಬೇಕಿದೆ (ಸಬಾಟಿಯರ್ ಪ್ರಕ್ರಿಯೆ). ಇಷ್ಟೊಂದು ಬೃಹತ್ ಕೆಮಿಕಲ್ ಪ್ಲಾಂಟ್ ಅನ್ನು ಮಂಗಳನ ಮೇಲೆ ಕಳುಹಿಸಿ, ಸ್ವಯಂಚಾಲಿತವಾಗಿ ನಡೆಸುವುದು ಅತಿ ದೊಡ್ಡ ಸವಾಲು.




ಮಾನವನ್ನು ಮಂಗಳ ಗ್ರಹಕ್ಕೆ ಕೊಂಡೊಯ್ಯುವ ಮಹತ್ವಾಕಾಂಕ್ಷಿಯ ಗುರಿಯೊಂದಿಗೆ ಇಲಾನ್ ಮಸ್ಕ್ ಅವರ ಸ್ಪೇಸ್‌ಎಕ್ಸ್ ಸಂಸ್ಥೆ ನಿರಂತರ ಪ್ರಯತ್ನದಲ್ಲಿದೆ.



ಸ್ಟಾರ್‌ಶಿಪ್ ರಾಕೆಟ್ ಯಶಸ್ವಿಯಾಗಿ ಉಡಾವಣೆ.



ಮಂಗಳನಲ್ಲಿ ನಿರ್ಮಿಸಲಾಗಿರುವ ವಸತಿ ಕೇಂದ್ರದ ಕಲ್ಪನೆ ಚಿತ್ರ.



ಸ್ಟಾರ್‌ಶಿಪ್ ರಾಕೆಟ್- ಮಂಗಳ ಯಾನದ ಪ್ರಮುಖ ಸಾಧನ.



ಮಂಗಳನಲ್ಲಿ ಗಿಡ ಬೆಳೆಸಲು ಬಯೋ-ಡೋಮ್ ಒಳಗಿನ ದೃಶ್ಯ.



ಮಂಗಳನಲ್ಲಿ ಸಂಚರಿಸುವ ರೋವರ್‌ನ ಕಲ್ಪನೆ ಚಿತ್ರ.

1. ಮಾನವನ ಜೈವಿಕ ಮತ್ತು ಆರೋಗ್ಯದ ಸವಾಲುಗಳು (Biological Risks)

ಪ್ರಾಣಾಂತಿಕ ವಿಕಿರಣ (Cosmic Radiation): ಭೂಮಿಗೆ ಇರುವಂತೆ ಮಂಗಳ ಗ್ರಹಕ್ಕೆ ಬಲಿಷ್ಠವಾದ ರಕ್ಷಣಾತ್ಮಕ ಕಾಂತಕ್ಷೇತ್ರವಾಗಲಿ (Magnetic Field) ಅಥವಾ ದಟ್ಟವಾದ ವಾತಾವರಣವಾಗಲಿ ಇಲ್ಲ. ಹಾಗಾಗಿ ಪ್ರಯಾಣದ ಅವಧಿಯಲ್ಲಿ ಮತ್ತು ಮಂಗಳನ ಮೇಲೆ ತಲುಪಿದ ನಂತರ ಸೂರ್ಯನ ಅಪಾಯಕಾರಿ ರೇಡಿಯೇಶನ್ ಹಾಗೂ ಕಾಸ್ಮಿಕ್ ಕಿರಣಗಳಿಗೆ ಗಗನಯಾತ್ರಿಗಳು ತುತ್ತಾಗುತ್ತಾರೆ. ಇದು ಕ್ಯಾನ್ಸರ್ ಮತ್ತು ಮೆದುಳಿನ ಕಾಯಿಲೆಗಳಿಗೆ ಕಾರಣವಾಗಬಹುದು.

ಶೂನ್ಯ ಗುರುತ್ವಾಕರ್ಷಣೆಯ ಪರಿಣಾಮ: 9 ತಿಂಗಳ ಪ್ರಯಾಣದಲ್ಲಿ ಶೂನ್ಯ ಗುರುತ್ವಾಕರ್ಷಣೆಯಲ್ಲಿ ಇರುವುದರಿಂದ ಮಾನವನ ಮೂಳೆಗಳು ದುರ್ಬಲಗೊಳ್ಳುತ್ತವೆ (Bone density loss) ಮತ್ತು ಸ್ನಾಯುಗಳು ಕ್ಷೀಣಿಸುತ್ತವೆ. ಮಂಗಳನ ಮೇಲಿಳಿದಾಗ ಅಲ್ಲಿನ ಗುರುತ್ವಾಕರ್ಷಣೆ ಭೂಮಿಯ ಶೇ. 38ರಷ್ಟು ಮಾತ್ರ ಇರುವುದರಿಂದ ಮನುಷ್ಯನ ಶರೀರ ಅದಕ್ಕೆ ಹೇಗೆ ಹೊಂದಿಕೊಳ್ಳುತ್ತದೆ ಎಂಬುದು ದೊಡ್ಡ ಪ್ರಶ್ನೆಯಾಗಿದೆ.

1. ಪರಿಸರ ಮತ್ತು ಉಳಿವಿನ ಸವಾಲುಗಳು (Survival Issues)

ವಿಷಕಾರಿ ಧೂಳು ಮತ್ತು ಹವಾಮಾನ: ಮಂಗಳನ ಮೇಲಿರುವ ಧೂಳು ಅತ್ಯಂತ ಸೂಕ್ಷ್ಮವಾಗಿದ್ದು, ವಿಷಕಾರಿ ಕೆಮಿಕಲ್‌ಗಳಿಂದ (Perchlorates) ಕೂಡಿದೆ.ವಿಜ್ಞಾನ ವರ್ಸಸ್ ಪ್ರಕೃತಿಯ ಸವಾಲು ಎನ್ನುವಂತೆ ಇದು ಗಗನಯಾತ್ರಿಗಳ ಸ್ಪೇಸ್‌ಸೂಟ್ ಮತ್ತು ಶ್ವಾಸಕೋಶಕ್ಕೆ ಹಾನಿ ಮಾಡಬಹುದು. ಜೊತೆಗೆ ಅಲ್ಲಿನ ಉಷ್ಣಾಂಶ ಮೈನಸ್ 60 ಡಿಗ್ರಿ ಸೆಲ್ಸಿಯಸ್ ಇರುತ್ತದೆ.

ಮಾನಸಿಕ ಒತ್ತಡ ಮತ್ತು ಒಂಟಿತನ: ಕೋಟ್ಯಂತರ ಮೈಲಿ ದೂರದ ಕತ್ತಲಿನಲ್ಲಿ, ಭೂಮಿಯ ಸಂಪರ್ಕ ಕಡಿದುಕೊಂಡು (ಸಂದೇಶ ತಲುಪಲು 20 ನಿಮಿಷ ತಡವಾಗುತ್ತದೆ), ಕೇವಲ ಉಕ್ಕಿನ ಗುಮ್ಮಟಗಳ (Biodomes) ಒಳಗೇ ದಿನ ಕಳೆಯುವುದು ಮನುಷ್ಯನನ್ನು ತೀವ್ರ ಖಿನ್ನತೆಗೆ ದೂಡಬಹುದು.

1. ಬಜೆಟ್ ಮತ್ತು ಸರ್ಕಾರದ ನೀತಿಗಳು (Financial & Political Pressures)

ಅಗಾಧವಾದ ವೆಚ್ಚ: ಮಸ್ಕ್ ಅವರ ಪ್ರಕಾರ ಮಂಗಳನ ಮೇಲೆ ಸ್ವಾವಲಂಬಿ ನಗರ ಕಟ್ಟಲು ಶತಕೋಟಿ ಡಾಲರ್‌ಗಳ ಅಗತ್ಯವಿದೆ. ಸ್ಪೇಸ್‌ಎಕ್ಸ್ ಖಾಸಗಿ ಸಂಸ್ಥೆಯಾಗಿದ್ದರೂ, ಸಂಪೂರ್ಣವಾಗಿ ಸ್ವಂತ ಬಂಡವಾಳದಿಂದಲೇ ಇದನ್ನು ನಿಭಾಯಿಸುವುದು ಕಷ್ಟ.

ನಾಸಾದ ಆದ್ಯತೆಗಳು: ಸದ್ಯಕ್ಕೆ ನಾಸಾ ಸಂಸ್ಥೆಯು ಸ್ಪೇಸ್‌ಎಕ್ಸ್‌ಗೆ ಹಣ ನೀಡುತ್ತಿರುವುದು ತನ್ನ 'ಆರ್ಟೆಮಿಸ್' (Artemis) ಯೋಜನೆಯಡಿ ಚಂದ್ರನ ಮೇಲೆ ಮನುಷ್ಯನನ್ನು ಇಳಿಸುವ ಸಲುವಾಗಿ. ಹಾಗಾಗಿ ಮಸ್ಕ್ ಅವರು ಮೊದಲು ಚಂದ್ರನ ಮಿಷನ್ ಮುಗಿಸಿಕೊಡಬೇಕಾದ ರಾಜಕೀಯ ಮತ್ತು ಕಾನೂನಾತ್ಮಕ ಒತ್ತಡದಲ್ಲಿದ್ದಾರೆ.

"ವಿಜ್ಞಾನದ ಅತಿರೇಕ ತರಬಹುದಾದ ಆಪತ್ತುಗಳು"

ಇಲಾನ್ ಮಸ್ಕ್ ಅವರ ಯೋಜನೆಗಳು ಅಂದುಕೊಂಡಂತೆ ನಡೆಯದೆ, ಸಂಪೂರ್ಣವಾಗಿ ಉಲ್ಟಾ ಹೊಡೆದರೆ ಅಥವಾ ಹಾದಿಯ ಮಧ್ಯದಲ್ಲೇ ದುರಂತಗಳು ಸಂಭವಿಸಿದರೆ ಏನೆಲ್ಲಾ ಆಗಬಹುದು ಎಂಬ ಭೀಕರ ಸಾಧ್ಯತೆಗಳು ಇಲ್ಲಿವೆ:

1. ಅರ್ಧ ಹಾದಿಯಲ್ಲೇ ಸಂಪರ್ಕ ಕಡಿತ (The Silence of Spaceship)

ಭೂಮಿಯಿಂದ ಹೊರಟ ಸ್ಟಾರ್‌ಶಿಪ್ ಮಂಗಳನತ್ತ ಪ್ರಯಾಣಿಸುವಾಗ ಹಾದಿಯ ಮಧ್ಯದಲ್ಲಿ ಯಾವುದಾದರೂ ದೊಡ್ಡ ತಾಂತ್ರಿಕ ದೋಷ ಅಥವಾ ಸೌರ ಬಿರುಗಾಳಿ (Solar Flare) ಅಪ್ಪಳಿಸಿದರೆ, ಭೂಮಿಯೊಂದಿಗಿನ ಸಂಪರ್ಕ ಸಂಪೂರ್ಣವಾಗಿ ಕಡಿತಗೊಳ್ಳಬಹುದು. ಕತ್ತಲ ಬಾಹ್ಯಾಕಾಶದಲ್ಲಿ ಸಹಾಯವೂ ಸಿಗದೆ, ಮರಳಿ ಬರಲೂ ಸಾಧ್ಯವಾಗದೆ ಗಗನಯಾತ್ರಿಗಳು ನೌಕೆಯ ಒಳಗೇ ಕೊನೆಯುಸಿರೆಳೆಯುವ ಭೀಕರ ಸಾಧ್ಯತೆಯಿದೆ.

1. 'ಟೆರಾಫಾರ್ಮಿಂಗ್' ವೈಫಲ್ಯ ಮತ್ತು ಶಾಶ್ವತ ನರಕ (Terraforming Failure)

ಮಂಗಳ ಗ್ರಹವನ್ನು ಬಿಸಿ ಮಾಡಿ, ಅಲ್ಲಿ ಭೂಮಿಯಂತಹ ವಾತಾವರಣ ಸೃಷ್ಟಿಸಬಹುದು (Terraforming) ಎಂಬುದು ಮಸ್ಕ್ ಅವರ ಕಲ್ಪನೆ. ಆದರೆ, ವಿಜ್ಞಾನಿಗಳ ಪ್ರಕಾರ ಮಂಗಳನ ವಾತಾವರಣದಲ್ಲಿ ಕೃತಕವಾಗಿ ಹಸಿರುಮನೆ ಅನಿಲಗಳನ್ನು ತುಂಬಿದರೂ, ಅಲ್ಲಿ ಬಲಿಷ್ಠವಾದ ಕಾಂತಕ್ಷೇತ್ರ ಇಲ್ಲದಿರುವುದರಿಂದ ಸೂರ್ಯನ ಸೌರ ಮಾರುತಗಳು ಆ ವಾತಾವರಣವನ್ನು ಮತ್ತೆ ಮತ್ತೆ ಬಾಹ್ಯಾಕಾಶಕ್ಕೆ ತೂರಿಬಿಡುತ್ತವೆ. ಅಂದರೆ, ಮಂಗಳ ಗ್ರಹ ಎಂದಿಗೂ ಮನುಷ್ಯನಿಗೆ ಬದುಕಲು ಯೋಗ್ಯವಾಗದೆ ಶಾಶ್ವತವಾಗಿ ಕೃತಕ ಗುಮ್ಮಟಗಳ (Glass Domes) ಒಳಗಿನ ಜೈಲಾಗಿ ಉಳಿದುಬಿಡಬಹುದು.

1. ಜೀವವಿಜ್ಞಾನದ ದುರಂತ: ವಿಕೃತ ರೂಪಾಂತರ (Biological Mutations)

ಮಂಗಳನ ಮೇಲಿರುವ ಅತಿಯಾದ ರೇಡಿಯೇಶನ್ ಮತ್ತು ಶೇಕಡಾ 38ರಷ್ಟು ಮಾತ್ರ ಇರುವ ಗುರುತ್ವಾಕರ್ಷಣೆಯಿಂದಾಗಿ ಮನುಷ್ಯನ ಡಿಎನ್‌ಎ (DNA) ರಚನೆಯೇ ಬದಲಾಗಬಹುದು. ಅಲ್ಲಿ ಜನಿಸುವ ಮುಂದಿನ ಪೀಳಿಗೆಯ ಮಕ್ಕಳು ದೈಹಿಕವಾಗಿ ತೀರಾ ದುರ್ಬಲರಾಗಿ, ವಿಚಿತ್ರ ಕಾಯಿಲೆಗಳಿಗೆ ತುತ್ತಾಗಬಹುದು ಅಥವಾ ಅವರ ಶರೀರದ ಆಕಾರವೇ ವಿಕೃತಗೊಳ್ಳಬಹುದು. ಅಂದರೆ ಭೂಮಿಯ ಮನುಷ್ಯರು ಮಂಗಳನ ಮೇಲೆ ಹೋಗಿ ಬೇರೆಯದೇ ಆದ ವಿಚಿತ್ರ ಜೀವಿಗಳಾಗಿ ರೂಪಾಂತರಗೊಳ್ಳುವ ಅಪಾಯವಿದೆ.

1. 'ಸ್ಪೇಸ್‌ಎಕ್ಸ್' ದಿವಾಳಿ ಮತ್ತು ಮಿಷನ್ ಸ್ಥಗಿತ (Financial Collapse)

ಇದು ಕೇವಲ ವಿಜ್ಞಾನದ ಸಮಸ್ಯೆಯಲ್ಲ, ಆರ್ಥಿಕ ಸಮಸ್ಯೆಯೂ ಹೌದು. ಆರಂಭಿಕ ಹಂತದ ಒಂದೆರಡು ಮಂಗಳ ಯಾನಗಳು ಭೀಕರ ಅಪಘಾತಕ್ಕೀಡಾದರೆ, ಸ್ಪೇಸ್‌ಎಕ್ಸ್ ಸಂಸ್ಥೆಯ ಷೇರುಗಳು ಪಾತಾಳಕ್ಕೆ ಕುಸಿಯಬಹುದು. ಹೂಡಿಕೆದಾರರು ಕೈಬಿಟ್ಟರೆ ಅಥವಾ ಅಮೆರಿಕ ಸರ್ಕಾರ ನಿರ್ಬಂಧ ಹೇರಿದರೆ, ಇಡೀ ಪ್ರಾಜೆಕ್ಟ್ ಅರ್ಧಕ್ಕೇ ನಿಂತುಹೋಗಿ, ಮಂಗಳನಿಗೆ ಹೋದ ಮೊದಲ ತಂಡ ಅಲ್ಲಿಯೇ ಯಾವುದೇ ಸೌಕರ್ಯಗಳಿಲ್ಲದೆ ಆಹಾರ, ಆಮ್ಲಜನಕ ಮುಗಿದು ಸಾವನ್ನಪ್ಪುವ ಪ್ರತೀಕೂಲ ಪರಿಸ್ಥಿತಿ ನಿರ್ಮಾಣವಾಗಬಹುದು.

1. ಮಂಗಳ ಗ್ರಹದ ಮೇಲಿನ ಪ್ರಥಮ ಯುದ್ಧ (Resource Wars on Mars)

ಒಂದು ವೇಳೆ ಅಲ್ಲಿ ಸಣ್ಣ ವಸಾಹತು ಆರಂಭವಾದರೂ, ಗಾಳಿ, ನೀರು ಮತ್ತು ಆಮ್ಲಜನಕದಂತಹ ಮೂಲಸೌಕರ್ಯಗಳ ಮೇಲೆ ಹಿಡಿತ ಸಾಧಿಸಲು ಅಲ್ಲಿನ ಕಠಿಣ ಪರಿಸ್ಥಿತಿಯಲ್ಲಿ ಮನುಷ್ಯರ ನಡುವೆಯೇ ಸಂಘರ್ಷ ಅಥವಾ ದಂಗೆ ಏಳಬಹುದು. ಕಾನೂನು ಸುವ್ಯವಸ್ಥೆ ಇಲ್ಲದ ಆ ದೂರದ ಲೋಕದಲ್ಲಿ ಬದುಕುಳಿಯುವುದೇ ಒಂದು ನಿರಂತರ ಸಂಗ್ರಾಮವಾಗಿ ಬದಲಾಗಬಹುದು.

ಒಂದು ವೇಳೆ ಇಲಾನ್ ಮಸ್ಕ್ ಅವರ ಎಲ್ಲಾ ಲೆಕ್ಕಾಚಾರಗಳು ನೂರಕ್ಕೆ ನೂರು ನಿಜವಾಗಿ, ಪ್ರಕೃತಿಯ ಎಲ್ಲ ಸವಾಲುಗಳನ್ನು ಮೆಟ್ಟಿ ನಿಂತು ಈ ಯೋಜನೆ ಫಲಪ್ರದವಾದರೆ... ಅದು ಕೇವಲ ಸ್ಪೇಸ್‌ಎಕ್ಸ್ ಸಂಸ್ಥೆಯ ಗೆಲುವಾಗುವುದಿಲ್ಲ, ಬದಲಿಗೆ ಇಡೀ ಮಾನವ ಕುಲದ ಇತಿಹಾಸದಲ್ಲೇ ಅತ್ಯಂತ ಮಹತ್ತರವಾದ ಮತ್ತು ರೋಮಾಂಚನಕಾರಿ ಮೈಲಿಗಲ್ಲಾಗುತ್ತದೆ!

ಅವರ ಯೋಜನೆ ಸಂಪೂರ್ಣ ಯಶಸ್ವಿಯಾದರೆ ಜಗತ್ತು ಎಂತಹ ಅದ್ಭುತಗಳನ್ನು ಕಾಣಬಹುದು ಎಂಬ ಸಕಾರಾತ್ಮಕ ಸಾಧ್ಯತೆಗಳು (Best-Case Scenarios) ಇಲ್ಲಿವೆ:

1. ಮಾನವ ನಾಗರಿಕತೆಯ ಅಮರತ್ವ (An Immortal Species)

ಡೈನೋಸಾರ್‌ಗಳು ಭೂಮಿಯ ಮೇಲಿಂದ ಸಂಪೂರ್ಣವಾಗಿ ನಾಶವಾಗಲು ಕಾರಣ, ಅವುಗಳಿಗೆ ಬೇರೆ ಗ್ರಹಕ್ಕೆ ವಲಸೆ ಹೋಗುವ ತಂತ್ರಜ್ಞಾನವಿರಲಿಲ್ಲ. ಆದರೆ ಮಸ್ಕ್ ಅವರ ಯೋಜನೆ ಯಶಸ್ವಿಯಾದರೆ, ಮಾನವ ಕುಲ "ಮಲ್ಟಿ-ಪ್ಲಾನೆಟರಿ" (ಬಹುಗ್ರಹ ಜೀವಿ) ಆಗುತ್ತದೆ. ಭವಿಷ್ಯದಲ್ಲಿ ಭೂಮಿಗೆ ಯಾವುದೇ ದೈತ್ಯ ಉಲ್ಕಾಪಾತ ಅಥವಾ ಪ್ರಕೃತಿ ವಿಕೋಪ ಎದುರಾದರೂ, ಮಂಗಳ ಗ್ರಹದಲ್ಲಿ ಮನುಷ್ಯರು ಸುರಕ್ಷಿತವಾಗಿ ಇರುತ್ತಾರೆ. ಅಂದರೆ, ಮಾನವ ನಾಗರಿಕತೆ ಬ್ರಹ್ಮಾಂಡದಲ್ಲಿ ಶಾಶ್ವತವಾಗಿ ಅಮರವಾಗುತ್ತದೆ.

1. ಕೆಂಪು ಗ್ರಹದಲ್ಲಿ ಹಸಿರಿನ ಕ್ರಾಂತಿ (The Green Mars)

ಯೋಜನೆ ಫಲಪ್ರದವಾದರೆ, ಮುಂದಿನ ಒಂದೆರಡು ಶತಮಾನಗಳಲ್ಲಿ ಮಂಗಳ ಗ್ರಹದ ಚಿತ್ರಣವೇ ಬದಲಾಗಬಹುದು.

ದಟ್ಟವಾದ ಹಸಿರುಮನೆ ಅನಿಲಗಳನ್ನು ಕೃತಕವಾಗಿ ಸೃಷ್ಟಿಸಿ ಅಲ್ಲಿನ ತಾಪಮಾನವನ್ನು ಹೆಚ್ಚಿಸಲಾಗುತ್ತದೆ.

ಧ್ರುವ ಪ್ರದೇಶಗಳಲ್ಲಿರುವ ಹಿಮ ಕರಗಿ, ಮಂಗಳನ ನೆಲದ ಮೇಲೆ ನದಿಗಳು ಮತ್ತು ಸಾಗರಗಳು ಮತ್ತೆ ಹರಿಯಲು ಆರಂಭಿಸುತ್ತವೆ.

ವಿಜ್ಞಾನಿಗಳು ಅಲ್ಲಿನ ಮಣ್ಣನ್ನು ಹಸನುಗೊಳಿಸಿ ಗಿಡ-ಮರಗಳನ್ನು ಬೆಳೆಸುತ್ತಾರೆ. ನಾವು ಇಂದು ಬರಿ ಧೂಳಿನಿಂದ ನೋಡುತಿರುವ ಕೆಂಪು ಗ್ರಹ, ಕಾಲಕ್ರಮೇಣ ಭೂಮಿಯಂತೆಯೇ ಹಸಿರು-ನೀಲಿ ಬಣ್ಣದ ಸುಂದರ ಗ್ರಹವಾಗಿ ಮಾರ್ಪಡುತ್ತದೆ (Terraforming).

1. ಹೊಸ ತಂತ್ರಜ್ಞಾನಗಳ ಉಗಮ ಮತ್ತು ಆರ್ಥಿಕ ಕ್ರಾಂತಿ

ಮಂಗಳ ಗ್ರಹದ ಕಠಿಣ ಪರಿಸ್ಥಿತಿಯಲ್ಲಿ ಬದುಕಲು ಮನುಷ್ಯರು ಅತ್ಯಾಧುನಿಕ ತಂತ್ರಜ್ಞಾನಗಳನ್ನು ಕಂಡುಹಿಡಿಯಬೇಕಾಗುತ್ತದೆ.

ಕೇವಲ ಸೂರ್ಯನ ಬೆಳಕಿನಿಂದಲೇ ಅಗಾಧ ಶಕ್ತಿ ಉತ್ಪಾದಿಸುವ ಸುಧಾರಿತ ಸೋಲಾರ್ ವ್ಯವಸ್ಥೆ, ಅತ್ಯಂತ ಕಡಿಮೆ ನೀರನ್ನು ಮರುಬಳಕೆ ಮಾಡುವ ತಂತ್ರಜ್ಞಾನ ಮತ್ತು ಸುಧಾರಿತ ಕೃತಕ ಬುದ್ಧಿಮತ್ತೆ (AI) ಅಭಿವೃದ್ಧಿಗೊಳ್ಳುತ್ತವೆ.

ಈ ತಂತ್ರಜ್ಞಾನಗಳನ್ನು ಮರಳಿ ಭೂಮಿಯ ಮೇಲೆಯೂ ಬಳಸಿ, ಇಲ್ಲಿನ ಪರಿಸರ ಮಾಲಿನ್ಯ ಮತ್ತು ಜಾಗತಿಕ ತಾಪಮಾನದ (Global Warming) ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳಬಹುದು.

1. ಹೊಸ ಸಂಸ್ಕೃತಿ ಮತ್ತು 'ಮಂಗಳದ ಮಾನವ' (Martian Culture)

ಮಂಗಳ ಗ್ರಹದ ಮೇಲೆ ಹುಟ್ಟಿ ಬೆಳೆಯುವ ಮುಂದಿನ ಪೀಳಿಗೆಗೆ ತಮ್ಮದೇ ಆದ ಹೊಸ ಸಂಸ್ಕೃತಿ, ಹಬ್ಬಗಳು ಮತ್ತು ಜೀವನಶೈಲಿ ಇರುತ್ತದೆ. ಭೂಮಿಯ ಮೇಲಿನ ದೇಶ, ಭಾಷೆ, ಧರ್ಮಗಳ ಗಡಿಗಳನ್ನು ಮೀರಿ ಅವರೆಲ್ಲರೂ ಒಂದೇ 'ಮಾನವ ಜನಾಂಗ'ವಾಗಿ ಅಲ್ಲಿ ಬದುಕುತ್ತಾರೆ. ಅಲ್ಲಿನ ಕಡಿಮೆ ಗುರುತ್ವಾಕರ್ಷಣೆಯಿಂದಾಗಿ ಮನುಷ್ಯರು ಹೆಚ್ಚು ಎತ್ತರ ಬೆಳೆಯಬಹುದು ಮತ್ತು ಒಲಿಂಪಿಕ್ಸ್‌ನಂತಹ ಕ್ರೀಡೆಗಳಲ್ಲಿ ಹೊಸ ದಾಖಲೆಗಳೇ ಸೃಷ್ಟಿಯಾಗಬಹುದು!

"ಇಲಾನ್ ಮಸ್ಕ್ ಅವರ ಈ ಯೋಜನೆ ಸದ್ಯಕ್ಕೆ ನಮಗೆಲ್ಲ ಹಗಲುಗನಸಿನಂತೆ ಕಾಣಬಹುದು. ಆದರೆ ನೂರಾರು ವರ್ಷಗಳ ಹಿಂದೆ ಸಮುದ್ರದ ಆಚೆ ಏನಿದೆ ಎಂದು ತಿಳಿಯದೆ ಹಡಗು ಕಟ್ಟಿ ಹೊರಟ ಸಾಹಸಿಗಳನ್ನು ನೋಡಿಯೂ ಅಂದಿನ ಜಗತ್ತು ಹೀಗೆಯೇ ನಕ್ಕಿತ್ತು. ಮಸ್ಕ್ ಅವರ ಹಾದಿಯಲ್ಲಿ ಕಲ್ಲು-ಮುಳ್ಳುಗಳು ಇರುವುದು ನಿಜವಾದರೂ, ಒಂದು ವೇಳೆ ಈ ಸಾಹಸ ಯಶಸ್ವಿಯಾದರೆ, ಅದು ಮನುಷ್ಯನ ಅದಮ್ಯ ಚೇತನ ಮತ್ತು ವಿಜ್ಞಾನದ ಮಹೋನ್ನತ ವಿಜಯವಾಗಲಿದೆ.ಮಸ್ಕ್ ಭೂಮಿಯ ಹೆಮ್ಮೆಯ ಪುತ್ರ, ಬ್ರಹ್ಮಾಂಡದ ಗರಿಮೆಯ ಪ್ರಜೆಯಾಗುವ ದಿನ ದೂರವಿಲ್ಲ!"

---







। ಚೇಂಪಿ ದಿನೇಶ್

ಮಳೆಗಾಲ ಬಂತೆಂದರೆ ಮನಸ್ಸು ಮಗುವಾಗುತ್ತದೆ. ಬಿಸಿಲಿನ ಝಳಕ್ಕೆ ಬೆಂದು ಹೋಗಿದ್ದ ಭೂಮಿಗೆ ಮಳೆಯ ಹನಿ ಮೊದಲ ಮುತ್ತಾಗುತ್ತದೆ,ಆಕಾಶಕ್ಕೆ ಕಪ್ಪು ಮೇಘದ ಮುಸುಕಿನ ಮೆರಗು , ಮರಗಳಿಗೆ ಹೊಸ ಹಸಿರು ಸೀರೆಯ ಶೃಂಗಾರ , ಮಣ್ಣಿಗೆ ಕಂಪಿನ ಪರಿಮಳದ ಸೊಬಗು, ಈ ಎಲ್ಲಾ ಸೊಬಗಿನ ನಡುವೆ ನಿಂತರೆ ನನ್ನ ಚಿಂತನೆಗಳಿಗೆ ಹೊಸ ರೆಕ್ಕೆ ಮೂಡುತ್ತದೆ.

ಮಳೆ ಹನಿ ಹೆಂಚಿನ ಮೇಲೆ ಬಿದ್ದಾಗ ತಬಲದ ನಾದ ಕೇಳುತ್ತದ್ದಂತೆ, ಕಿಟಕಿಯಿಂದ ಇಣುಕಿ ನೋಡಿದರೆ ರಸ್ತೆಯಲ್ಲಿ ಛತ್ರಿ ಹಿಡಿದ ಜನರ ಓಡಾಟ , ಕೊಚ್ಚೆ ನೀರಲ್ಲಿ ಕಾಗದದ ಬಣ್ಣ ಬಣ್ಣದ ದೋಣಿ ಬಿಡುವ ಮಕ್ಕಳ ಆನಂದ. ಅವರ ನಗುವಿಗೆ ಮಳೆಯೇ ಕಾರಣ ಈ ಮಳೆಯಲ್ಲವೇ.ನಾವೆಲ್ಲ ದೊಡ್ಡವರಾಗಿ, ಗಂಭೀರವಾಗಿ, ಲೆಕ್ಕಾಚಾರದ ಬದುಕಿನ ಮಳೆಯಲ್ಲಿ ನೆನೆಯುವುದನ್ನೇ ಮರೆತಿದ್ದೇವೆ ಕಾಣ್ರೀ . ಕೆಲವೊಮ್ಮೆ ನೆನೆಯಬೇಕು, ತೋಯಬೇಕು, ಹಗುರಾಗಬೇಕು.

**ಬದುಕಿನ ಬಿಸಿ ಉಸಿರು ತಂಪಾಗಬೇಕು.**

ಗದ್ದೆಯಲ್ಲಿ ನೇಗಿಲು ಹಿಡಿದ ರೈತನ ಮೊಗದಲ್ಲಿ ಕಾಣುವ ಖುಷಿ ಮಳೆಗಾಲದ ನಿಜವಾದ ಸೊಬಗು ಅದು . ಅವನಿಗೆ ಮಳೆ ಎಂದರೆ ಚಿನ್ನ. ಭೂಮಿಯನ್ನು ನಂಬಿದವನಿಗೆ ಆಕಾಶ ಎಂದೂ ಮೋಸ ಮಾಡುವುದಿಲ್ಲ ಎಂಬ ಭರವಸೆಯೇ ಈ ಮಳೆ . ನಗರದ ನಾವು ೦ಅ ರೂಮಿನಲ್ಲಿ ಕುಳಿತು ?ಟ್ರಾಫಿಕ್ ಜಾಮ್? ಅಂತ ಬೈಯುತ್ತೇವೆ. ಆದರೆ ಹಳ್ಳಿಯ ಗುಡಿಸಲಿನಲ್ಲಿ ಸೋರುವ ಮನೆಯ ಮಾಡಿನ ಕೆಳಗೆ ಕುಳಿತು, ಬಿಸಿ ಚಹಾ ಹೀರುತ್ತಾ ಮಳೆ ನೋಡುವ ಸುಖವನ್ನು ಮರೆತೆ ಬಿಟ್ಟಿದ್ದೇವೆ ?

ಮಳೆ ಕೇವಲ ನೀರಲ್ಲ, ಅದು ಜೀವನದ ಪಾಠ. ಒಂದೇ ಸಮನೆ ಸುರಿದು ಪ್ರವಾಹ ಮಾಡಬಲ್ಲದು, ಹನಿ ಹನಿಯಾಗಿ ಭೂಮಿಯನ್ನು ತಂಪಾಗಿ ಮಾಡಬಲ್ಲದು. ನಮ್ಮ ಮಾತು, ಕೆಲಸ ಕೂಡ ಹಾಗೆ ಇರಬೇಕು. ಅತಿಯಾದರೆ ಕಷ್ಟ, ಮಿತಿಯಾದರೆ ತಂಪು. ಮೋಡ ಕರಗಿ ಮಳೆಯಾಗಿ ಇಳಿಯುತ್ತದೆ. ನಮ್ಮೊಳಗಿನ ಅಹಂಕಾರ ಕೂಡ ಹಾಗೆ ಕರಗಬೇಕು. ಆಗಲೇ ನಾವು ಬೇರೆಯವರ ಬದುಕಿಗೆ ತಂಪು ನೀಡಲು ಸಾಧ್ಯ.

ಬಾಲ್ಯದ ಮಳೆ ನೆನಪಾದರೆ ಕಣ್ಣು ಒದ್ದೆಯಾಗುತ್ತದೆ. ಶಾಲೆಗೆ ಹೋಗುವಾಗ ಹಳ್ಳ ದಾಟಿದ್ದು, ಪುಸ್ತಕ ಒದ್ದೆಯಾಗದಂತೆ ಅಂಗಿಯೊಳಗೆ ಬಚ್ಚಿಟ್ಟದ್ದು,ಅಮ್ಮ ಸೀರೆ ಹಾಕಲು ಇಟ್ಟಿದ್ದ ಪ್ಲಾಸ್ಟಿಕ್ ಚೀಲದ ಕೊಟ್ಟೆ ಯೊಳಗೆ ಪುಸ್ತಕ ಇಟ್ಟು ಶಾಲೆಗೆ ಹೋಗಿದ್ದು, ಮನೆಗೆ ಬಂದಾಗ ಅಜ್ಜಿ ಸುಟ್ಟು ಕೊಡುತ್ತಿದ್ದ ಬಿಸಿ ಹಪ್ಪಳ, ಹಲಸಿನ ಬೀಜ (ದಾನಿ ), ಸುಟ್ಟ ಹುಣಸೆ ಬೀಜ, ಕುಮಟಿ ಬೀಜತಿಂದದ್ದು. ಕೆಲವೊಮ್ಮೆ ಕೊಬ್ಬರಿ ಬೆಲ್ಲ ಈಗ ಎಲ್ಲ ಇದೆ, ಆದರೆ ಆ ಮಳೆ ಯ ಮಜಾ ಇಲ್ಲಾ. ಮೊಬೈಲ್‌ನಲ್ಲಿ ಹವಾಮಾನ ವರದಿ ನೋಡಿ ೦ಠಿ ?ಇಂದು 80% ಮಳೆ? ಅಂತ ಹೇಳುತ್ತೇವೆ. ಆದರೆ ಕಿಟಕಿ ತೆರೆದು ಆ ಮಣ್ಣಿನ ವಾಸನೆ ಒಮ್ಮೆಯೂ ಮೂಸುವುದಿಲ್ಲ. ಕಾಗದ ದೋಣಿ ನೋಡಸಿಗುವುದಿಲ್ಲ, ಬದಲಿಗೆ, ಹರಿಯುವ ನೀರಿನ ಮೇಲೆ ತೇಲಾಡುವ ಬಣ್ಣ, ಬಣ್ಣದ ಪ್ಲಾಸ್ಟಿಕ್ ಚೀಲಗಳು ಮಾತ್ರ.ನಾವು ಪ್ರಕೃತಿಯಿಂದ ದೂರ ಆಗಿದ್ದೇವೆ ಅನ್ನಿಸುವುದಿಲ್ವೇ.?

ಮಳೆಗಾಲ ಮನಸ್ಸನ್ನು ಶುದ್ಧ ಮಾಡುತ್ತದೆ. ಕೆಸರಾದ ರಸ್ತೆ, ಕೊಚ್ಚೆ ನೀರು ಕಂಡು ಮೂಗು ಮುರಿಯುತ್ತೇವೆ. ಆದರೆ ಅದೇ ಕೆಸರಿನಲ್ಲಿ ತಾವರೆ ಅರಳುತ್ತದೆ ಎನ್ನುವ ಸತ್ಯ ಮರೆತಿದ್ದೇವೆ.ಕಷ್ಟದ ನಡುವೆಯೂ ಅರಳುವ ಗುಣ ನಮ್ಮದಾಗಬೇಕು. ರೈತ ಮಳೆಗೆ ಹೆದರುವುದಿಲ್ಲ, ಕೊಡೆ ಇಲ್ಲದಿದ್ದರೂ ಬಿತ್ತನೆ ನಿಲ್ಲಿಸುವುದಿಲ್ಲ. ಕಂಬಳಿ ಕೊಪ್ಪೆ, ಗೊರಬು ಹಾಕಿಕೊಂಡು ಕೆಲಸ ಮಾಡುವುದು ಗೊತ್ತು,ಏಕೆಂದರೆ ಅವನಿಗೆ ಗೊತ್ತು ಕಾಣ್ರೀ, ಮಳೆ ನಿಂತರೂ ಬೆಳೆ ನಿಲ್ಲಬಾರದು. ನಮ್ಮ ಬದುಕೂ ಹಾಗೆ. ಸಮಸ್ಯೆ ಬಂದಾಗ ಕೆಲಸ ನಿಲ್ಲಿಸಿದರೆ ಯಶಸ್ಸಿನ ಬೆಳೆ ಕೈಗೆ ಸಿಗುವುದು ಎಂತೂ.

ಸಂಜೆಯ ಹೊತ್ತು ಮಳೆ ಹನಿ ನಿಂತ ಮೇಲೆ ಮೂಡುವ ಕಾಮನಬಿಲ್ಲು ಬದುಕಿಗೊಂದು ಸಂದೇಶ. ಕಪ್ಪು ಮೋಡದ ನಂತರವೇ ಬಣ್ಣ ಬರುತ್ತದೆ. ಕಣ್ಣೀರಿನ ನಂತರವೇ ನಗು ಚಿಗುರುತ್ತದೆ. ಮಳೆ ನಿಂತ ಮಣ್ಣಿನ ಮೇಲೆ ಬರಿಗಾಲಲ್ಲಿ ನಡೆದರೆ ಭೂಮಿಯ ನಾಡಿಮಿಡಿತ ಕೇಳಿಸುತ್ತದೆ. ಆನಂದಿಸುವ ಮನಸ್ಥಿತಿ ನಮಗಿರಬೇಕು ಅಷ್ಟೇ.

ಕೊನೆಯಲ್ಲಿ ಮಳೆ ನನಗೆ ಹೇಳುವುದು ಒಂದೇ: ?ತೊಯ್ಯೋ, ತೋಯಿಸೋ, ಆದರೆ ನಿಲ್ಲಬೇಡ?. ಬದುಕಿನ ಬೇಸಿಗೆ ಎಷ್ಟೇ ಸುಟ್ಟರೂ, ಒಂದು ಒಳ್ಳೆಯ ಮಳೆಗಾಗಿ ಕಾಯುವ ತಾಳ್ಮೆ ನಮಗೆ ಇರಲಿ. ಏಕೆಂದರೆ ಮಳೆಗಾಲ ಬರುತ್ತದೆ, ಖಂಡಿತ ಬರುತ್ತದೆ. ಅದರ ಸೊಬಗಿನಲ್ಲಿ ನಮ್ಮ ಹೊಸ ಚಿಂತನೆಗಳು ಮೊಳಕೆ ಯೊಡೆಯುತ್ತವೆ.

ಈ ಮಳೆ ಗಾಲದಲ್ಲಿ ಒಮ್ಮೆ ಛತ್ರಿ ಮುಚ್ಚಿ ನಿಂತು ಬಿಡಿ. ಹನಿ ನಿಮ್ಮ ಮುಖಕ್ಕೆ ಬಡಿಯಲಿ. ಆಗ ಗೊತ್ತಾಗುತ್ತದೆ, ಸಂ ತೋಷ ಅಂದರೆ ದುಬಾರಿ ಕಾರಲ್ಲ, ಹನಿ ನೀರಲ್ಲಿ ಕಾಣುವ ಇಡೀ ಆಕಾಶ.



---

## ಕಾಡು ಹೆತ್ತ ಅಜ್ಜಿ



। ಡಾ.ಸುಧಾಕರ.ಜಿ.ಲಕ್ಕವಳ್ಳಿ

ವಿಧಿಯ ಕ್ರೌರ್ಯವನ್ನು ಸಂಕಲ್ಪದ ಶಕ್ತಿಯಿಂದ ಸೋಲಿಸಿ, ಬರಡು ನೆಲದಲ್ಲೂ ಹಸಿರು ಕಾವ್ಯ ಬರೆದ ಧೀಮಂತೆ ಕೇರಳದ ಆಲಪುಳದ 92ರ ದೇವಕಿ ಅಮ್ಮ. ಪೂರ್ವಜರಿಂದ ಬಂದ ಐದು ಎಕರೆ ಬಂಜರು ಭೂಮಿಯನ್ನು ಜೀವಂತ ಸ್ವರ್ಗವಾಗಿಸಿದ ಇವರ ನಿಸ್ವಾರ್ಥ ಪರಿಸರ ಸೇವೆಗೆ ಭಾರತ ಸರ್ಕಾರವು 2023ರಲ್ಲಿ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿದೆ.





1980ರ ಕಾರು ಅಪಘಾತ ದೇವಕಿ ಅಮ್ಮನ ಎರಡೂ ಕಾಲುಗಳ ಚಲನೆಯನ್ನು ಕಿತ್ತು ಮೂರು ವರ್ಷ ಹಾಸಿಗೆ ಹಿಡಿಸಿತು. ಕೃಷಿಯ ಕನಸು ಮುರಿದಾಗ ಯಾರಾದರೂ ಕುಸಿಯುತ್ತಿದ್ದರು. ಆದರೆ ಅಮ್ಮನ ಛಲ ಅಚಲ. ಹಾಸಿಗೆಯಿಂದ ಎದ್ದೊಡನೆ ಬರಡು ಭೂಮಿಗೆ ಮರುಜೀವ ಕೊಡುವ ಪಣ ತೊಟ್ಟರು. ಪತಿ ಗೋಪಾಲಕೃಷ್ಣ ಪಿಳ್ಳೆ ಅವರೊಂದಿಗೆ ಮಳೆನೀರನ್ನು ಇಂಗಿಸಿ, ಸಂಪೂರ್ಣ ಸಾವಯವ ವಿಧಾನದಲ್ಲಿ ಒಂದೊಂದೇ ಸಸಿಯನ್ನು ಮಕ್ಕಳಂತೆ ಸಾಕಿದರು.

ನಾಲ್ಕು ದಶಕಗಳ ಮೌನ ತಪಸ್ಸಿನ ಫಲವಾಗಿ ಆ ನೆಲ ಇಂದು ತಪೋವನಂ ಎಂಬ ದಿವ್ಯಾರಣ್ಯವಾಗಿದೆ. ಮೂರು ಸಾವಿರಕ್ಕೂ ಹೆಚ್ಚು ಮರಗಳು, ಇನ್ನೂರಕ್ಕೂ ಮಿಕ್ಕಿದ ಔಷಧೀಯ ಸಸ್ಯಗಳು ಅಲ್ಲಿ ನಲಿಯುತ್ತಿವೆ. ನವಿಲುಗಳ ನರ್ತನ, ಹಕ್ಕಿಗಳ ಗಾನಕ್ಕೆ ತಾಣವಾದ ಈ ಕಾಡು ಊರ ಜನರಿಗೆ ಉಚಿತ ಸಂಜೀವಿನಿ ಕೇಂದ್ರ. ಹವಾಮಾನದ ಬಗ್ಗೆ ಜಗತ್ತು ಮಾತನಾಡುವಾಗ ಅಜ್ಜಿ ಕಾಡನ್ನೇ ಸೃಷ್ಟಿಸಿ ಮಾದರಿಯಾದರು.

ನಾರೀಶಕ್ತಿ, ವೃಕ್ಷಮಿತ್ರ ಪ್ರಶಸ್ತಿಗಳ ಜೊತೆಗೆ ಪದ್ಮಶ್ರೀಯೂ ಇವರ ಸಾಧನೆಗೆ ಮುಕುಟವಿಟ್ಟಿದೆ. ಮಾಜಿ ರಾಷ್ಟ್ರಪತಿ ಕೋವಿಂದ್ ಸಹ ಇವರನ್ನು ಕೊಂಡಾಡಿದ್ದಾರೆ. ಕಷ್ಟದಲ್ಲೂ ಕುಗ್ಗದಿರಿ, ಪ್ರಕೃತಿಯನ್ನು ಪ್ರೀತಿಸಿ. ಇಲ್ಲಿಗೆ ಬರುವವರು ಒಂದು ಸಸಿ ನೆಟ್ಟು ಬೆಳೆಸಿ ಎಂಬ ಇವರ ಸಂದೇಶ ನಮಗೆಲ್ಲ ದಾರಿದೀಪ.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,